ಮಂಗಳವಾರ, ಜೂನ್ 28, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಸಿನಿಮಾ ಪ್ರಚಾರ**

ನವದೆಹಲಿಯಲ್ಲಿ ಸೋಮವಾರ ಬಾಲಿವುಡ್ ನಟ ಸಂಜನಾ ಸಂಘಿ ಮತ್ತು ನಟ ಆದಿತ್ಯರಾಯ್ ಕಪೂರ್ ಅವರು ತಮ್ಮ ಮುಂಬರುವ 'ರಾಷ್ಟ್ರಕವಚ್– ಓಂ' ಸಿನಿಮಾದ ಪ್ರಚಾರದಲ್ಲಿ ಭಾಗವಹಿಸಿದ್ದರು



ಬೆಂಗಳೂರು ಸೇರಿ 42 ನಗರಗಳಿಗೆ ₹1,833 ಕೋಟಿ ಅನುದಾನ • ಈ ಬಾರಿ ಇನ್ನಷ್ಟು ಷರತ್ತು ಜಾರಿ

# ಸುಧಾರಣೆಯಾಗದ ವಾಯು ಗುಣಮಟ್ಟ: ಕೇಂದ್ರ ಅತೃಪ್ತಿ

• ಮಂಜುನಾಥ ಹೆಬ್ಬಾರ್

**ನವದೆಹಲಿ:** 15ನೇ ಹಣಕಾಸು ಆಯೋಗದ ಅನುದಾನದಡಿ ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಕಲಬುರ್ಗಿ ಸೇರಿದಂತೆ ದೇಶದ 42 ನಗರಗಳಲ್ಲಿ ಅನುಷ್ಠಾನಗೊಳಿಸಿದ ವಾಯು ಗುಣಮಟ್ಟ ಸುಧಾರಣೆ ಯೋಜನೆಯಲ್ಲಿ ಗಮನಾರ್ಹ ಪ್ರಗತಿ ಕಾಣದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಕೇಂದ್ರ ಸರ್ಕಾರ, 2022–23ನೇ ಸಾಲಿನ ಅನುದಾನ ಬಿಡುಗಡೆಗೆ ಹಲವಾರು ಷರತ್ತುಗಳನ್ನು ವಿಧಿಸಿದೆ.

ವಾಯುಮಾಲಿನ್ಯ ಹೆಚ್ಚಳದಿಂದ ತೀವ್ರವಾಗಿ ತತ್ತರಿಸಿದ್ದ ನವದೆಹಲಿಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶಿತ ಪರಿಸರ ಮಾಲಿನ್ಯ (ತಡೆಗಟ್ಟುವಿಕೆ ಹಾಗೂ ನಿಯಂತ್ರಣ) ಪ್ರಾಧಿಕಾರವು ಚಿಕ್ಕಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ 2019ರ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಆರೋಗ್ಯ ತುರ್ತು ಸ್ಥಿತಿಯನ್ನು ಘೋಷಿಸಿತ್ತು. ಈ ಬೆಳವಣಿಗೆ ಬಳಿಕ ದೇಶದ ಮಹಾನಗರಗಳ ವಾಯು ಗುಣಮಟ್ಟ ಕಾಪಾಡುವುದರ ಬಗ್ಗೆ ಕೇಂದ್ರ ಸರ್ಕಾರವೂ ಗಂಭೀರವಾಗಿ ಪರಿಗಣಿಸಿತ್ತು.

15ನೇ ಹಣಕಾಸು ಆಯೋಗವು ಮಹಾನಗರಗಳ ವಾಯು ಗುಣಮಟ್ಟ ಕಾಪಾಡಲು 2021–22ರಿಂದ 2025–26ರ ವರೆಗೆ ವಿಶೇಷ ಅನುದಾನ ಒದಗಿಸುತ್ತಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯವನ್ನು ನೋಡಲ್ ಏಜೆನ್ಸಿಯನ್ನಾಗಿ ನೇಮಿಸಲಾಗಿದೆ. ವಾಯು ಗುಣಮಟ್ಟ ಸುಧಾರಣೆಗಾಗಿ 42 ನಗರಗಳಿಗೆ 2021–22ನೇ ಸಾಲಿನಲ್ಲಿ ₹1,833 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಬಳಿಕ 28 ನಗರಗಳಿಗೆ ₹192 ಕೋಟಿ ಬಿಡುಗಡೆ ಮಾಡಲಾಗಿತ್ತು.

ವಾಯುಮಾಲಿನ್ಯದ ಮೂಲ ಪತ್ತೆ ಹಚ್ಚಿ ಬೆಂಗಳೂರಿನಲ್ಲಿ ಗಾಳಿಯ ಗುಣಮಟ್ಟ ಸುಧಾರಣೆ ಮಾಡಲು ಹಾಗೂ ವಾತಾವರಣದ ಗಾಳಿಯ ಗುಣಮಟ್ಟದ ಮೇಲೆ ನಿಗಾ ಇಡಲು ಬಿಬಿಎಂಪಿ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿ ₹ 279 ಕೋಟಿ ವೆಚ್ಚದ ಕಾರ್ಯಯೋಜನೆ ಸಿದ್ಧಪಡಿಸಿವೆ. ಇದರ ಮೊದಲ ಕಂತಿನ ರೂಪದಲ್ಲಿ ಕೇಂದ್ರ ಸರ್ಕಾರವು ₹ 139 ಕೋಟಿ ಅನುದಾನ ಮಂಜೂರು ಮಾಡಿದೆ.

ಈ ಕಾರ್ಯಕ್ರಮಗಳಿಂದಾಗಿ ವಾಯುವಿನ ಗುಣಮಟ್ಟದಲ್ಲಿ ಗಮನಾರ್ಹ ಸುಧಾರಣೆ ಆಗಿರುವುದನ್ನು ಮನದಟ್ಟು ಮಾಡಿಕೊಡಬೇಕು. ಆಗ ಮಾತ್ರ ಎರಡನೇ ಕಂತಿನ ಹಣ ಬಿಡುಗಡೆಯಾಗುತ್ತದೆ ಎಂದು ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ವೇಳೆ ಸ್ಪಷ್ಟಪಡಿಸಿತ್ತು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಡಾ. ಶಾಂತ್ ಎ.ತಿಮ್ಮಯ್ಯ ಅವರಿಗೆ ಪತ್ರ ಬರೆದಿರುವ ಕೇಂದ್ರ ಪರಿಸರ ಹಾಗೂ ಅರಣ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ನರೇಶ್ ಪಾಲ್ ಗಂಗ್ವಾರ್ ಅವರು, 2021–22ನೇ ಸಾಲಿನ ಯೋಜನಾ ಪ್ರಗತಿಯ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಜತೆಗೆ, ಯೋಜನೆಯ ಸೂಕ್ಷ್ಮ ಕ್ರಿಯಾಯೋಜನೆಯನ್ನು ಸಲ್ಲಿಸಬೇಕು. ಅನುದಾನದ ವರ್ಗಾವಣೆ ಪ್ರಮಾಣಪತ್ರ, ಅನುದಾನದ ಬಳಕೆ ಪ್ರಮಾಣ ಪತ್ರ ಒದಗಿಸಬೇಕು ಎಂದು ಪತ್ರದಲ್ಲಿ ಹೇಳಿದ್ದಾರೆ.

**ನಾಳೆ ಪ್ರಗತಿ ಪರಿಶೀಲನಾ ಸಭೆ:** 42 ನಗರಗಳಲ್ಲಿ ಯೋಜನೆಯಲ್ಲಾದ ಪ್ರಗತಿ ಹಾಗೂ 2022–23ನೇ ಸಾಲಿನ ಅನುದಾನ ಬಿಡುಗಡೆ ಬಗ್ಗೆ ಚರ್ಚಿಸಲು ನರೇಶ್ ಪಾಲ್ ಗಂಗ್ವಾರ್ ಅಧ್ಯಕ್ಷತೆಯಲ್ಲಿ ಸಭೆ ಇದೇ 29ರಂದು ನಿಗದಿಯಾಗಿದೆ. ಯೋಜನೆಯಲ್ಲಿನ ಪ್ರಗತಿ, ವಾಯು ಗುಣಮಟ್ಟದಲ್ಲಾದ ಸುಧಾರಣಾ ವರದಿಯನ್ನು ಸಭೆಯಲ್ಲಿ ಪ್ರಸ್ತುತಪಡಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಿಗೆ ಸೂಚಿಸಲಾಗಿದೆ.

**ಮುಖ್ಯಾಂಶಗಳು**
- 15ನೇ ಹಣಕಾಸು ಆಯೋಗದಡಿ ಅನುದಾನ
- 2021–22ನೇ ಸಾಲಿನಲ್ಲಿ 42 ನಗರಗಳಿಗೆ ₹1,833 ಕೋಟಿ
- ನಾಳೆ ಯೋಜನೆಯ ಪ್ರಗತಿ ಪರಿಶೀಲನೆ

ಪ್ರಜಾವಾಣಿ ವಿಶೇಷ

**ಈ ಯೋಜನೆ ಜಾರಿಯಾದ ನಂತರ ಬೆಂಗಳೂರಿನಲ್ಲಿ ವಾಯು ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆ ಆಗಿದೆ**
**ಶಾಂತ್ ಎ. ತಿಮ್ಮಯ್ಯ,** ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

## ಸುದ್ದಿ 2 ನಿಮಿಷ

### ದಾಖಲೆ ನೆಪದಲ್ಲಿ ವಾಹನ ತಡೆಯಬೇಡಿ: ಸೂದ್ ಸೂಚನೆ

**ಬೆಂಗಳೂರು:** 'ಕೇವಲ ದಾಖಲೆ ಪರಿಶೀಲನೆಗಾಗಿ ಎಲ್ಲಿಂದರಲ್ಲಿ ವಾಹನ ತಡೆದು ಪರಿಶೀಲನೆ ನಡೆಸಬಾರದು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಪ್ರವೀಣ್ ಸೂದ್, ಪೊಲೀಸರಿಗೆ ಸೂಚನೆ ನೀಡಿದ್ದಾರೆ.

'ರಸ್ತೆಗಳಲ್ಲಿ ಎಲ್ಲೆಂದರಲ್ಲಿ ನಿಲ್ಲುವ ಪೊಲೀಸರು, ಕೇವಲ ದಾಖಲೆಗಾಗಿ ವಾಹನ ತಡೆದು ಪರಿಶೀಲನೆ ನಡೆಸುತ್ತಿದ್ದಾರೆ. ಇದರಿಂದ ಹಲವೆಡೆ ದಟ್ಟಣೆ ಉಂಟಾಗುತ್ತಿದ್ದು, ಜನರ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿದೆ' ಎಂಬುದಾಗಿ ಸಾರ್ವಜನಿಕರೊಬ್ಬರು ಟ್ವೀಟ್ ಮಾಡಿದ್ದರು. ಟ್ವೀಟ್‌ಗೆ ಸ್ಪಂದಿಸಿರುವ ಪ್ರವೀಣ್ ಸೂದ್, 'ದಾಖಲೆ ನೆಪದಲ್ಲಿ ವಾಹನ ತಡೆಯಬೇಡಿ. ಕಣ್ಣಿಗೆ ಕಾಣುವಂತೆ ನಿಯಮ ಉಲ್ಲಂಘನೆಯಾದರೆ ಹಾಗೂ ಡ್ರಿಂಕ್ ಆ್ಯಂಡ್ ಡ್ರೈವ್ ತಪಾಸಣೆ ಅಗತ್ಯವಿದ್ದರೆ ಮಾತ್ರ ವಾಹನ ತಡೆದು ತಪಾಸಣೆ ಮಾಡಿ' ಎಂದಿದ್ದಾರೆ.



ಬೆಂಗಳೂರು ಕಮಿಷನರ್ ಆಗಿದ್ದ ವೇಳೆಯಲ್ಲಿ ಆದೇಶ ಹೊರಡಿಸಿದ್ದ ಪ್ರವೀಣ್ ಸೂದ್, 'ಕಣ್ಣಿಗೆ ಕಾಣುವ ರೀತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆಯಾದರೆ ಮಾತ್ರ ವಾಹನಗಳನ್ನು ತಡೆದು, ದಂಡ ವಿಧಿಸಿ' ಎಂದಿದ್ದರು.

ಇದಾದ ಬಳಿಕವೂ ಹಲವೆಡೆ ಸಂಚಾರ ಪೊಲೀಸರು, ಆದೇಶ ಉಲ್ಲಂಘಿಸಿ ದಂಡ ಸಂಗ್ರಹಿಸುತ್ತಿದ್ದರು.

### 18 ಐಪಿಎಸ್ ಅಧಿಕಾರಿಗಳ ವರ್ಗಾವಣೆ

**ಬೆಂಗಳೂರು:** ಬೆಳಗಾವಿ, ಚಿಕ್ಕಬಳ್ಳಾಪುರ, ಧಾರವಾಡ, ಹಾಸನ ಮತ್ತು ಬಾಗಲಕೋಟೆ ಜಿಲ್ಲೆಗಳ ಎಸ್‌ಪಿಗಳು ಹಾಗೂ ಬೆಂಗಳೂರು ನಗರದ ನಾಲ್ವರು ಡಿಸಿಪಿಗಳು ಸೇರಿದಂತೆ 18 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಸೋಮವಾರ ಆದೇಶ ಹೊರಡಿಸಲಾಗಿದೆ.

**ವರ್ಗಾವಣೆ ವಿವರ:** ಶ್ರೀನಾಥ್ ಜೋಶಿ– ಎಸ್‌ಪಿ, ಲೋಕಾಯುಕ್ತ; ಕೆ.ಎಂ. ಶಾಂತರಾಜು– ಎಸ್‌ಪಿ, ಬೆಸ್ಕಾಂ; ಸಿ.ಕೆ. ಬಾಬಾ– ಡಿಸಿಪಿ, ಬೆಂಗಳೂರು ಆಗ್ನೇಯ; ಸಂಜೀವ್ ಎಂ. ಪಾಟೀಲ– ಎಸ್‌ಪಿ, ಬೆಳಗಾವಿ; ಕಲಾ ಕೃಷ್ಣಸ್ವಾಮಿ– ಡಿಸಿಪಿ, ಬೆಂಗಳೂರು ಪೂರ್ವ ಸಂಚಾರ ವಿಭಾಗ; ಹರೀಶ್ ಪಾಂಡೆ– ಎಸ್‌ಪಿ; ಭ್ರಷ್ಟಾಚಾರ ನಿಗ್ರಹ ದಳ; ಲಕ್ಷ್ಮಣ ನಿಂಬರಗಿ– ಡಿಸಿಪಿ, ಬೆಂಗಳೂರು ಪಶ್ಚಿಮ; ನಾಗೇಶ್ ಡಿ.ಎಲ್.– ಎಸ್‌ಪಿ, ಚಿಕ್ಕಬಳ್ಳಾಪುರ, ಲೋಕೇಶ್ ಬಿ. ಜಗಲಾಸರ್– ಎಸ್‌ಪಿ, ಧಾರವಾಡ.

ಆರ್. ಶ್ರೀನಿವಾಸ ಗೌಡ– ಡಿಸಿಪಿ, ಬೆಂಗಳೂರು ಕೇಂದ್ರ; ಜಿ.ಕೆ. ಮಿಥುನ್ ಕುಮಾರ್– ಎಸ್‌ಪಿ, ಸಿಐಡಿ; ಪಿ. ಕೃಷ್ಣಕಾಂತ್– ಡಿಸಿಪಿ, ಬೆಂಗಳೂರು ದಕ್ಷಿಣ; ಹರಿರಾಂ ಶಂಕರ್– ಎಸ್‌ಪಿ, ಹಾಸನ; ಜಯಪ್ರಕಾಶ್– ಎಸ್‌ಪಿ, ಬಾಗಲಕೋಟೆ; ಶೋಭಾ ರಾಣಿ ವಿ.ಜೆ.– ಎಸ್‌ಪಿ, ಎಸಿಬಿ; ಶಿವಾಂಶು ರಜಪೂತ್– ಸಹಾಯಕ ಎಸ್‌ಪಿ, ಹುಮ್ನಾಬಾದ್ ಉಪ ವಿಭಾಗ.

## ಬಾದಾಮಿ ಬಿಟ್ಟು ಬೆಂಗಳೂರಿಗೆ ಸಿದ್ದರಾಮಯ್ಯ?

**ಬೆಂಗಳೂರು:** 'ತಂದೆಯವರಿಗೆ (ಸಿದ್ದರಾಮಯ್ಯ) ಇದು ಕೊನೆಯ ಚುನಾವಣೆ. ವಯಸ್ಸಿನ ಸಮಸ್ಯೆ ಕಾರಣಕ್ಕೆ ಬಾದಾಮಿ ಕ್ಷೇತ್ರಕ್ಕೆ ಹೋಗಿ ಬರುವುದು ಅವರಿಗೆ ಕಷ್ಟವಾಗಲಿದೆ. ಹೀಗಾಗಿ, ಬೆಂಗಳೂರು ಸುತ್ತಮುತ್ತಲಿನ ಕ್ಷೇತ್ರವನ್ನು ಆರಿಸಿಕೊಳ್ಳಲು ಅವರು ಆಸಕ್ತಿ ಹೊಂದಿದ್ದಾರೆ' ಎಂದು ಶಾಸಕ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಯಾವ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆ ಎಂಬುದು ಅಂತಿಮವಾಗಿಲ್ಲ. ರಾಜ್ಯದ ಎಲ್ಲ ಕ್ಷೇತ್ರಗಳ ಬಗ್ಗೆ ಅವರಿಗೆ ಸಂಪೂರ್ಣ ಅರಿವು ಇದೆ. ಯಾವ ಕ್ಷೇತ್ರ ಉತ್ತಮ ಎನ್ನುವುದೂ ಗೊತ್ತಿದೆ. ಅವರು ಬಯಸಿದರೆ ವರುಣಾ ಕ್ಷೇತ್ರ ಬಿಟ್ಟು ಕೊಡಲು ಸಿದ್ಧನಿದ್ದೇನೆ. ಅವರು ಮತ್ತೆ ರಾಜ್ಯದ ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ' ಎಂದರು.

'ನಾನು ಮನೆಯಲ್ಲಿ ತಂದೆಯವರ ಆಡಳಿತ ವೈಖರಿ ನೋಡಿಕೊಂಡು ಬೆಳೆದವನು. ಅವರ ಪ್ರಾಮಾಣಿಕತೆ, ಬದ್ಧತೆ ನನಗೆ ಸ್ಫೂರ್ತಿಯಾಗಿದೆ. ತತ್ವ, ಸಿದ್ಧಾಂತದ ವಿಚಾರದಲ್ಲಿ ಅವರು ಎಂದೂ ರಾಜಿಯಾದವರಲ್ಲ. ವರುಣಾ ಕ್ಷೇತ್ರದ ಶಾಸಕನಾಗಿರುವ ಕಾರಣಕ್ಕೆ ವೃತ್ತಿಯಲ್ಲಿ ವೈದ್ಯನಾದರೂ ಸದ್ಯ ರಾಜಕೀಯಕ್ಕೆ ಆದ್ಯತೆ ನೀಡುತ್ತೇನೆ. ಈಗ ರಾಜಕೀಯ ಮಾಡುವುದು ಅಷ್ಟು ಸುಲಭವಲ್ಲ' ಎಂದರು.

ನಾಡಪ್ರಭು ಕೆಂಪೇಗೌಡ ಜಯಂತಿ: ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ

# ವಿಧಾನಸೌಧ ಆವರಣದಲ್ಲಿ ಕೆಂಪೇಗೌಡರ ಪ್ರತಿಮೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸೌಧದ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸೋಮವಾರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 513ನೇ ಜಯಂತ್ಯುತ್ಸವ ಸಮಾರಂಭದಲ್ಲಿ ಪಟ್ಟನಾಯಕನ ಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ ಈ ಬೇಡಿಕೆ ಮಂಡಿಸಿದರು. ತಮ್ಮ ಭಾಷಣದಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಮುಂದಿನ ವರ್ಷ ನಡೆಯುವ ಕೆಂಪೇಗೌಡರ ಜಯಂತಿಯ ಮೊದಲು ವಿಧಾನಸೌಧದ ಆವರಣದಲ್ಲಿ ಪ್ರತಿಮೆ ಸ್ಥಾಪಿಸಿ, ಅನಾ ವರಣ ಮಾಡಲಾಗುವುದು' ಎಂದರು.

ಬೆಂಗಳೂರನ್ನು ಕಟ್ಟಿದ ಕೆಂಪೇಗೌಡರ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಬೇಕು ಎಂಬ ನಿರ್ಣಯವನ್ನು ಬಿಬಿಎಂಪಿ ಕೌನ್ಸಿಲ್ 2012ರಲ್ಲೇ ಕೈಗೊಂಡಿತ್ತು. ಇದಕ್ಕಾಗಿ ₹ 12 ಲಕ್ಷ ಅನುದಾನವನ್ನೂ ಕಾಯ್ದಿರಿಸಿತ್ತು. ಆದರೆ, ನಂತರ ಈ ನಿರ್ಣಯ ಅನುಷ್ಠಾನಕ್ಕೆ ಬರಲಿಲ್ಲ. ಈಗ ತಮ್ಮ ಸರ್ಕಾರ ಕೆಂಪೇಗೌಡರಿಗೆ ಗೌರವ ಸಲ್ಲಿಸುವ ಕೆಲಸ ಮಾಡಲಿದೆ ಎಂದು ಹೇಳಿದರು.

ಕೆಂಪೇಗೌಡರ ಆಶಯಕ್ಕೆ ತಕ್ಕಂತೆ ನಾಲ್ಕು ದಿಕ್ಕುಗಳಲ್ಲೂ ಬೆಂಗಳೂರು ನಗರವನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿ, ಅನುಷ್ಠಾನಕ್ಕೆ ತರಲಾಗುವುದು ಎಂದರು.

ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ಕೆಂಪೇಗೌಡ ಒಬ್ಬ ಅಪ್ಪಟ ಜಾತ್ಯತೀತ ಆಡಳಿತಗಾರನಾಗಿದ್ದರು. ಅವರು ಎಲ್ಲ ಸಮುದಾಯಗಳಿಗೂ ವ್ಯಾಪಾರ, ವಹಿವಾಟಿಗೆ ಅವಕಾಶ ಕಲ್ಪಿಸಿರುವುದೇ ಇದಕ್ಕೆ ಸಾಕ್ಷಿ. ಬೆಂಗಳೂರಿನ ಅಭಿವೃದ್ಧಿಯ ಹೆಸರಿನಲ್ಲಿ ಮತ್ತಷ್ಟು ಮಂದಿ ಭೂಮಾಲೀಕರು ಕೊಳೆಗೇರಿ ನಿವಾಸಿಗಳಾಗದಂತೆ ಸರ್ಕಾರ ಎಚ್ಚರ ವಹಿಸಬೇಕು' ಎಂದು ಸಲಹೆ ನೀಡಿದರು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಸಚಿವರಾದ ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿ. ಸುನಿಲ್‌ಕುಮಾರ್, ಕೆ. ಗೋಪಾಲಯ್ಯ, ಮುನಿರತ್ನ, ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಕೃಷ್ಣಪ್ಪ, ಸಂಸದ ತೇಜಸ್ವಿ ಸೂರ್ಯ, ರಾಜ್ಯಸಭಾ ಸದಸ್ಯ ಜಗ್ಗೇಶ್, ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ವಿರೋಧ ಪಕ್ಷದ ಉಪ ನಾಯಕ ಕೆ. ಗೋವಿಂದರಾಜು ಉಪಸ್ಥಿತರಿದ್ದರು.



ನಾಡಪ್ರಭು ಕೆಂಪೇಗೌಡ ಜಯಂತ್ಯುತ್ಸವದಲ್ಲಿ ಇನ್ಫೋಸಿಸ್ ಸಂಸ್ಥಾಪಕ ಎನ್‌.ಆರ್‌. ನಾರಾಯಣಮೂರ್ತಿ ಪರವಾಗಿ ಅವರ ಪತ್ನಿ ಸುಧಾ ಮೂರ್ತಿ, ಮಾಜಿ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ ಹಾಗೂ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಪರವಾಗಿ ಅವರ ಸ್ನೇಹಿತ ವಿಮಲ್ ಕುಮಾರ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಿದರು —ಪ್ರಜಾವಾಣಿ ಚಿತ್ರ

**ಒಕ್ಕಲಿಗರು, ಲಿಂಗಾಯತರನ್ನು ಒಡೆದು ಆಳುವ ಪ್ರಯತ್ನಗಳಿಗೆ ಸರ್ಕಾರ ಬೆಂಬಲ ನೀಡಬಾರದು. ಎರಡೂ ಸಮುದಾಯಗಳ ಉಪ ಪಂಗಡಗಳ ಮಧ್ಯದ ಗೊಂದಲ ನಿವಾರಿಸಬೇಕು**
**ನಂಜಾವಧೂತ ಸ್ವಾಮೀಜಿ,** ಗುರುಗುಂಡ ಬ್ರಹ್ಮೇಶ್ವರ ಮಠ, ಪಟ್ಟನಾಯಕನಹಳ್ಳಿ

### ರಾಮಕೃಷ್ಣ ಆಶ್ರಮಕ್ಕೆ ₹ 5 ಲಕ್ಷ ದೇಣಿಗೆ

ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ ಜತೆ ನೀಡಿದ ₹ 5 ಲಕ್ಷ ಮೊತ್ತದ ಚೆಕ್ ಅನ್ನು ತಾವು ಓದಿದ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ನೀಡುವುದಾಗಿ ಎಸ್‌.ಎಂ. ಕೃಷ್ಣ ಪ್ರಕಟಿಸಿದರು.

### 'ಬಾಂಬೆ ಫೈಲ್ಸ್ ಇದೇ ವರ್ಷ ಬಿಡುಗಡೆ'

**ಮೈಸೂರು:** 'ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಧೋರಣೆ ವಿರುದ್ಧ ಸಿಡಿದೆದ್ದು ನನ್ನನ್ನೂ ಒಳಗೊಂಡಂತೆ ಶಾಸಕರು ಮುಂಬೈಗೆ ಹೋಗಿದ್ದ ದಿನಗಳನ್ನು ಕಟ್ಟಿಕೊಡುವ 'ಬಾಂಬೆ ಫೈಲ್ಸ್' ಪುಸ್ತಕವನ್ನು ಇದೇ ವರ್ಷ ಬಿಡುಗಡೆ ಮಾಡಲಿದ್ದೇನೆ' ಎಂದು ಬಿಜೆಪಿ ಶಾಸಕ ಎ.ಎಚ್. ವಿಶ್ವನಾಥ್ ತಿಳಿಸಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪುಸ್ತಕಕ್ಕೆ 'ಬಾಂಬೆ ಡೇಸ್' ಎಂದಿಡಲು ನಿರ್ಧರಿಸಿದ್ದೆ. 'ಕಾಶ್ಮೀರ್ ಫೈಲ್ಸ್' ಸಿನಿಮಾ ಬಳಿಕ 'ಬಾಂಬೆ ಫೈಲ್ಸ್' ಎಂದು ಬದಲಿಸಿದ್ದೇನೆ ಎಂದರು.

ಮುಖ್ಯಮಂತ್ರಿಗೆ ಪತ್ರ ಬರೆದ ಹಿಂದುಳಿದ–ದಲಿತ ಸ್ವಾಮೀಜಿಗಳು

# ಪರಿಷ್ಕೃತ ಪಠ್ಯ ಕೈಬಿಡಿ: ಮಠಾಧೀಶ್ವರರ ಒಕ್ಕೂಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರೋಹಿತ್ ಚಕ್ರತೀರ್ಥ ಸಮಿತಿ ಪರಿಷ್ಕರಿಸಿರುವ ಪಠ್ಯ ಪುಸ್ತಕವನ್ನು ತಕ್ಷಣ ತಡೆ ಹಿಡಿಯಬೇಕು. ಮರುಪರಿಷ್ಕರಣೆ ವಿರೋಧಿಸುತ್ತಿರುವವರ ಅಭಿಪ್ರಾಯ ಆಲಿಸಿ ವಿವಾದ ಬಗೆಹರಿಸಬೇಕು' ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಿಂದುಳಿದ, ದಲಿತ ಮಠಾಧೀಶ್ವರರ ಒಕ್ಕೂಟ ಪತ್ರ ಬರೆದಿದೆ.

ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಬಸವ ಮಾಚಿದೇವ ಸ್ವಾಮೀಜಿ, ರೇಣುಕಾನಂದ ಸ್ವಾಮೀಜಿ ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಮರು ಪರಿಷ್ಕರಣೆ ಮಾಡುವಾಗ ವಿಶೇಷವಾಗಿ ಹಿಂದುಳಿದ ವರ್ಗ ಮತ್ತು ದಲಿತ ವರ್ಗದವರಿಗೆ ಅನ್ಯಾಯ ಮಾಡಲಾಗಿರುತ್ತದೆ. ಕನ್ನಡ ಭಾಷಾ ಪಠ್ಯಗಳಿಂದ ಎಲ್ಲಾ ಹಿಂದುಳಿದ ಮತ್ತು ದಲಿತ ಬರಹಗಾರರು, ಬಹುಪಾಲು ಲೇಖಕಿಯರ ಪಾಠಗಳನ್ನು ತೆಗೆಯಲಾಗಿದೆ. ಅವೈದಿಕ ವಲಯದ ವಿಚಾರಗಳನ್ನು ಮತ್ತು ಸಾಧಕರನ್ನು ಕಡೆಗಣಿಸಲಾಗಿದೆ ಎಂದೂ ಪತ್ರದಲ್ಲಿ ಆಕ್ಷೇಪ ವ್ಯಕ್ತ ಪಡಿಸಿದ್ದಾರೆ.

'ಅಂಬೇಡ್ಕರ್ ಮತ್ತು ಬುದ್ಧ ಗುರುವಿನ ಕುರಿತ ಕನ್ನಡ ಪದ್ಯಗಳನ್ನು ಕಿತ್ತು ಹಾಕಿದ್ದು ಎಷ್ಟು ಸರಿ. ನಾರಾಯಣ ಗುರು ಕುರಿತ ಪಾಠ ಕೈಬಿಟ್ಟಿದ್ದು ತಪ್ಪಲ್ಲವೇ. ಕನಕದಾಸರ ಪಾಠದ ಜೊತೆಗಿದ್ದ ಅಕ್ಕಮಹಾದೇವಿ, ಶಿಶುನಾಳ ಷರೀಫ ಮತ್ತು ಪುರಂದರ ದಾಸರ ಪಾಠಗಳಿಗೆ ಕತ್ತರಿ ಹಾಕಿರುವುದು ಅನ್ಯಾಯ ಅಲ್ಲವೇ' ಎಂದೂ ಪ್ರಶ್ನಿಸಿದ್ದಾರೆ.

'ಮರು ಪರಿಷ್ಕರಣೆಯು ತುಂಬಾ ಅಸಮತೋಲನಕ್ಕೆ ಕಾರಣವಾಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಹಿಂದುಳಿದ ಮತ್ತು ದಲಿತ ಚೇತನಗಳಿಗೆ ಅನ್ಯಾಯ ಮಾಡಲಾಗಿದೆ. ಸಂವಿಧಾನಾತ್ಮಕ ಸಾಮಾಜಿಕ ನ್ಯಾಯವನ್ನು ಕಡೆಗಣಿಸಲಾಗಿದೆ. ಇದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಎಂದೂ ಇಲ್ಲದ ವಿವಾದ ಉಂಟಾಗಿದೆ. ಮರುಪರಿಷ್ಕರಣೆಗೆ ಆಕ್ಷೇಪ ಎತ್ತಿದವರ ಮೇಲೆ ಪ್ರತ್ಯಾರೋಪ ಮಾಡುವ ಬದಲು ಪ್ರಜಾಸತ್ತಾತ್ಮಕವಾಗಿ ಪರ್ಯಾಲೋಚನೆ ಮಾಡಬೇಕು' ಎಂದೂ ಸ್ವಾಮೀಜಿಗಳು ಸಲಹೆ ನೀಡಿದ್ದಾರೆ.

**ಸಾವಿತ್ರಿ ಬಾಯಿ ಫುಲೆ ಪಾಠವೇ ಇಲ್ಲ**

- ಸಾವಿತ್ರಿ ಬಾಯಿ ಫುಲೆ ಪಾಠವನ್ನು ತೆಗೆದು ಹಾಕಿರುವುದು ಭಾರತದ ಪ್ರಥಮ ಶಿಕ್ಷಕಿಗೆ ಮತ್ತು ದಲಿತ ಲೋಕದ ಧ್ರುವತಾರೆಗೆ ಮಾಡಿದ ಅನ್ಯಾಯ ಎಂದು ಒಕ್ಕೂಟ ಹೇಳಿದೆ.
- ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಗಳಾದ ಮೀಸಲಾತಿ ಮತ್ತು ಮಹಿಳೆಯರಿಗೆ ಮತದಾನ ಮತ್ತಿತರ ಪ್ರಮುಖ ನಿರ್ಣಯಗಳನ್ನು ಕೈಬಿಟ್ಟಿದ್ದು ತಪ್ಪು.
- ಮೈಸೂರು ಒಡೆಯರ ಬಗ್ಗೆ ಹಿಂದಿನ ಪಠ್ಯದಲ್ಲಿ ತುಂಬಾ ಕಡಿಮೆ ಇತ್ತು ಎಂದು ಸಚಿವರು ಹೇಳಿದ್ದು ಸತ್ಯವಲ್ಲ. ಏಳನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಮೈಸೂರು ಒಡೆಯರ ಬಗ್ಗೆ ಸುಮಾರು 7 ಪುಟಗಳ ವಿವರಗಳಿತ್ತು. ಅದನ್ನು ಮುಕ್ಕಾಲು-ಪುಟಕ್ಕೆ ಇಳಿಸಿ 10 ನೇ ತರಗತಿಯ ಪಠ್ಯಕ್ಕೆ ಸೇರಿಸಲಾಗಿದೆ.

### ಕನಕದಾಸರ ಚರಿತ್ರೆ ಹಿಂದಿನಂತೆ ಇರಲಿ: ಮುಖ್ಯಮಂತ್ರಿ ಬೊಮ್ಮಾಯಿ ಸೂಚನೆ

**ಬೆಂಗಳೂರು:** 'ಪಠ್ಯಪುಸ್ತಕದಲ್ಲಿ ದಾಸ ಶ್ರೇಷ್ಠ ಕನಕದಾಸರ ಜೀವನ ಚರಿತ್ರೆಯನ್ನು ಈ ಹಿಂದೆ ಇದ್ದಂತೆಯೇ ಮತ್ತೆ ಪ್ರಕಟಿಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲಿಖಿತ ಸೂಚನೆ ನೀಡಿದ್ದಾರೆ.

ಕಾಗಿನೆಲೆಯ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಅವರು ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯು ಕನಕದಾಸರ ಜೀವನ ಚರಿತ್ರೆ ಮತ್ತು ವಿವರಗಳನ್ನು ಕಡೆಗಣಿಸಿದೆ ಎಂದು ಸ್ವಾಮೀಜಿ ಹೇಳಿದರು.

ಒಂಬತ್ತನೇ ತರಗತಿ ಸಮಾಜ ವಿಜ್ಞಾನದಲ್ಲಿ ಒಂದು ಪುಟದಷ್ಟಿದ್ದ ಕನಕದಾಸರ ಜೀವನ ವಿವರಗಳನ್ನೊಳಗೊಂಡ ಪಠ್ಯ ಭಾಗವನ್ನು ಒಂದೇ ಸಾಲಿಗೆ ತಂದು ಕಡಿತಗೊಳಿಸುವ ಮೂಲಕ ಕನಕದಾಸರ ಆದರ್ಶ ಮತ್ತು ದಾರ್ಶನಿಕ ಸತ್ಯಗಳನ್ನು ಮರೆಮಾಚುವ ದೊಡ್ಡ ಹುನ್ನಾರ ನಡೆದಿದೆ ಎಂದು ಅವರು ಆಕ್ಷೇಪಿಸಿದರು.

ಇದು ಹಿಂದುಳಿದ ಸಮುದಾಯಗಳನ್ನು ಒಳಗೊಂಡಂತೆ ಈ ನೆಲದ ನಾಡು– ನುಡಿಗೆ ಮಾಡಿದ ದ್ರೋಹವಾಗಿದೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ದ್ರೋಹವಾಗಿದೆ. ತಾವು ಮಧ್ಯ ಪ್ರವೇಶಿಸಿ ಕನಕದಾಸರ ಜೀವನ ವಿವರಗಳನ್ನು ಹಿಂದಿನಂತೇ ಅಳವಡಿಸಬೇಕು ಎಂದು ಮನವಿ ಮಾಡಿದರು.

### ಕೆಂಪೇಗೌಡರಿಗೆ ಒಂದೇ ಪುಟ!

'ನಾಡಪ್ರಭು ಕೆಂಪೇಗೌಡರ ಬಗ್ಗೆ ಹಿಂದಿನ ಸಮಾಜ ವಿಜ್ಞಾನ ಪಠ್ಯದಲ್ಲಿ ಏನು ಇರಲಿಲ್ಲ ಎಂದು ಸಚಿವರು ಹೇಳಿದ್ದು ಸತ್ಯವಲ್ಲ. ಬರಗೂರರ ಪಠ್ಯದಲ್ಲಿ ಎರಡು ಪುಟಗಳಷ್ಟಿದ್ದ ಕೆಂಪೇಗೌಡರ ವಿಷಯವನ್ನು ಮರು ಪರಿಷ್ಕರಣೆಯಲ್ಲಿ ಒಂದು ಪುಟಕ್ಕೆ ಇಳಿಸಲಾಗಿದೆ. ದಾಸ ಕೂಟದವರು ಅದರಲ್ಲೂ ವಿಶೇಷವಾಗಿ ಕನಕದಾಸರಂಥಹವರು ಜಾತಿ ತಾರತಮ್ಯ ವಿರೋಧಿಸಿದ್ದನ್ನು ಪರಿಷ್ಕರಣೆಯಲ್ಲಿ ಬಿಡಲಾಗಿರುವುದು ಸರಿಯಾದ ಕ್ರಮವಲ್ಲ' ಎಂದು ಮಠಾಧೀಶರ ಒಕ್ಕೂಟ ಹೇಳಿದೆ.

### 'ವಿಲಕ್ಷಣ ವ್ಯಕ್ತಿತ್ವದವರನ್ನು ನೇಮಿಸಬೇಡಿ'

**ಬೆಂಗಳೂರು:** ಶಾಲಾ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಗಳಿಗೆ ವಿಲಕ್ಷಣ ವ್ಯಕ್ತಿತ್ವದವರನ್ನು ನೇಮಿಸಬಾರದು. ಪವಿತ್ರವಾದ ನಾಡ ಬಾವುಟವನ್ನು ಯಾವುದೋ ಒಂದು ವಸ್ತುವಿಗೆ (ಚಡ್ಡಿ) ಹೋಲಿಸಿದ ವ್ಯಕ್ತಿಯನ್ನು ಪಠ್ಯಪುಸ್ತಕ ಪರಿಷ್ಕರಣೆಗೆ ನೇಮಿಸಿದ್ದು ಸರಿಯಲ್ಲ ಎಂದು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ಕೆಂಪೇಗೌಡ ಜಯಂತಿ ಸಮಾರಂಭದ ವೇದಿಕೆಯಲ್ಲೇ ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಆಕ್ಷೇಪ ವ್ಯಕ್ತಪಡಿಸಿದ ಸ್ವಾಮೀಜಿ, ರೋಹಿತ್ ಚಕ್ರತೀರ್ಥ ಅವರನ್ನು ಪಠ್ಯಪುಸ್ತಕ ಪರಿಶೀಲನಾ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದನ್ನು ವಿರೋಧಿಸಿದರು.

'ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಸರ್ಕಾರ ರೂಪಿಸಿದ ಪಠ್ಯವನ್ನು ಓದಿ, ಕಲಿತು, ಪರೀಕ್ಷೆ ಬರೆಯಬೇಕು. ತಪ್ಪು ಓದಿ, ತಪ್ಪು ಗ್ರಹಿಸಿಕೊಂಡು ಅದೇ ಸತ್ಯ ಎಂದು ಮಕ್ಕಳು ನಂಬಬೇಕಾದ ಸ್ಥಿತಿ ನಿರ್ಮಿಸಬಾರದು. ಅಂತಹ ಪಠ್ಯ ರೂಪಿಸುವವರು ಎಡ, ಬಲ ಅಥವಾ ಇನ್ನಿತರ ಸಿದ್ಧಾಂತದ ಹಿಂಬಾಲಕರು ಆಗಿರಬಾರದು. ಸಮಚಿತ್ತದಿಂದ ಎಲ್ಲವನ್ನೂ ನೋಡುವ, ಆಳವಾದ ಅಧ್ಯಯನಶೀಲತೆ ಹೊಂದಿರುವವರನ್ನು ಇದಕ್ಕೆ ನೇಮಿಸಬೇಕು' ಎಂದರು.

ವಿವಿಧ ಸಂಘಟನೆಗಳ ದುಂಡುಮೇಜಿನ ಸಭೆಯಲ್ಲಿ ಘೋಷಣೆ

# ಒಡೆದು ಆಳುವ ನೀತಿ ವಿರುದ್ಧ ಸಂಘಟಿತ ಹೋರಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಾತಿ, ಧರ್ಮ ಮತ್ತು ಭಾಷೆಯ ಹೆಸರಿನಲ್ಲಿ ಜನರನ್ನು ಒಡೆದು ಆಳುವ ನೀತಿಯ ವಿರುದ್ಧ ರೈತ, ಕಾರ್ಮಿಕ, ದಲಿತ, ಹಿಂದುಳಿದ ವರ್ಗಗಳು, ಕಲೆ ಮತ್ತು ಸಾಂಸ್ಕೃತಿಕ ಸಂಘಟನೆಗಳು ಹಾಗೂ ಜನಪರ ರಾಜಕೀಯ ಪಕ್ಷಗಳು ಒಗ್ಗೂಡಿ ಹೋರಾಟ ನಡೆಸುವ ಘೋಷಣೆಯನ್ನು ಜನ ಸಂಗ್ರಾಮ ಪರಿಷತ್ ನೇತೃತ್ವದಲ್ಲಿ ನಗರದ ಗಾಂಧಿ ಭವನದಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಮಾಡಲಾಗಿದೆ.

ಯುವಜನರು, ಕಲೆ ಮತ್ತು ಸಾಂಸ್ಕೃತಿಕ ಸಂಘಟನೆಗಳು, ಮಾನವಹಕ್ಕು ಸಂಘಟನೆಗಳು, ರಾಜಕೀಯೇತರ ಸಂಘಟನೆಗಳು, ಮಾಧ್ಯಮ ಕ್ಷೇತ್ರ, ಸಮಾಜ ಸೇವೆಯಲ್ಲಿ ನಿರತವಾಗಿರುವ ವ್ಯಕ್ತಿ ಮತ್ತು ಗುಂಪುಗಳನ್ನು ಒಗ್ಗೂಡಿಸಿಕೊಂಡು ಹೋರಾಡುವ ತೀರ್ಮಾನವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ಸಿಟಿಜನ್ ಫಾರ್ ಡೆಮಾಕ್ರಸಿಯ ರಾಷ್ಟ್ರೀಯ ಅಧ್ಯಕ್ಷ ಎಸ್.ಆರ್. ಹಿರೇಮಠ, ಸೊಸೈಟಿ ಫಾರ್ ಕಮ್ಯುನಲ್ ಹಾರ್ಮನಿಯ ಅಧ್ಯಕ್ಷ ಪ್ರೊ. ಆನಂದ್ ಕುಮಾರ್, ಹೋರಾಟಗಾರ ದತ್ತ ದೇಸಾಯಿ, ಉತ್ತರ ಪ್ರದೇಶದ ನಿವೃತ್ತ ಐಪಿಎಸ್ ಅಧಿಕಾರಿ ಡಿ.ಆರ್. ದಾರಾಪುರಿ ಮತ್ತು ಸಿಟಿಜನ್ ಫಾರ್ ಡೆಮಾಕ್ರಸಿಯ ಪ್ರಧಾನ ಕಾರ್ಯದರ್ಶಿ ಎನ್.ಡಿ. ಪಾಂಚೋಲಿ ಅವರು 'ಬೆಂಗಳೂರು ದುಂಡುಮೇಜಿನ ಸಭೆಯ ಘೋಷಣೆ'ಗೆ ಸಹಿ ಮಾಡಿದ್ದಾರೆ.

'ಕೇಂದ್ರದಲ್ಲಿ ಅಧಿಕಾರದಲ್ಲಿರುವ ಎನ್‌ಡಿಎ ಸರ್ಕಾರ ಅಂತರ ರಾಷ್ಟ್ರೀಯಮಟ್ಟದ ಹಣಕಾಸು ಮತ್ತು ಕಾರ್ಪೊರೇಟ್ ಶಕ್ತಿಗಳು ಹಾಗೂ ಕೋಮುವಾದಿ ಶಕ್ತಿಗಳ ಜತೆ ಕೈಜೋಡಿಸಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿದೆ. ಕೃಷಿ ಸಂಬಂಧಿ ಕಾಯ್ದೆಗಳ ತಿದ್ದುಪಡಿ, ಪೌರತ್ವ ತಿದ್ದುಪಡಿ ಕಾಯ್ದೆಯಂತಹ ಜನವಿರೋಧಿ ಕಾನೂನುಗಳನ್ನು ಜಾರಿಗೊಳಿಸಿದ ಕೇಂದ್ರ ಸರ್ಕಾರ, ಸಂವಿಧಾನದ ಆಶಯಗಳಿಗೆ ತದ್ವಿರುದ್ಧವಾಗಿ ನಡೆದುಕೊಂಡಿದೆ. ಈಗ 'ಅಗ್ನಿವೀರರ' ನೇಮಕಾತಿ ಹೆಸರಿನಲ್ಲಿ ಸೇನಾಪಡೆಗಳ ನೇಮಕಾತಿ ಬದಲಿಸಲು ಹೊರಟಿದೆ' ಎಂದು ಘೋಷಣೆಯಲ್ಲಿ ಆರೋಪಿಸಲಾಗಿದೆ.

'ಕೃಷಿ ಸಂಬಂಧಿ ಮೂರು ಕಾಯ್ದೆಗಳ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ವಾಪಸ್ ಪಡೆದರೂ, ಕರ್ನಾಟಕ ಸರ್ಕಾರ ವಾಪಸ್ ಪಡೆದಿಲ್ಲ. ವಿಧಾನ ಮಂಡಲದ ಮುಂದಿನ ಅಧಿವೇಶನದಲ್ಲೇ ವಾಪಸ್ ಪಡೆಯುವಂತೆ ಆಗ್ರಹಿಸಿ ಹೋರಾಟ ನಡೆಸಬೇಕಿದೆ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹೆಸರಿನಲ್ಲಿ ಶಿಕ್ಷಣ ಕ್ಷೇತ್ರದ ಮೇಲೆ ಹಿಡಿತ ಸಾಧಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ. ಅದನ್ನು ತಡೆಯಲೇಬೇಕಿದೆ' ಎಂಬ ನಿರ್ಣಯವನ್ನು ದುಂಡುಮೇಜಿನ ಸಭೆ ಕೈಗೊಂಡಿದೆ.

ಜಾತಿ, ಧರ್ಮಗಳ ಹೆಸರಿನಲ್ಲಿ ದಾಳಿಗಳು ನಡೆಯುತ್ತಿವೆ. ಸರ್ಕಾರವೇ ಅಂತಹ ಹಿಂಸೆಯನ್ನು ಪ್ರಚೋದಿಸುತ್ತಿದೆ. ಪೌರತ್ವ ಮತ್ತು ರಾಷ್ಟ್ರೀಯತೆಯ ವಿಚಾರದಲ್ಲಿ ಸುಳ್ಳು ಮಾಹಿತಿಯನ್ನು ಹರಿಬಿಡಲಾಗುತ್ತಿದೆ. 'ವಸುಧೈವ ಕುಟುಂಬಕಂ' ಎಂಬ ತತ್ವದ ಆಧಾರ ದಲ್ಲಿ ಜನರ ನಡುವೆ ಸೌಹಾರ್ದ ಮತ್ತು ಭ್ರಾತೃತ್ವ ಬಿತ್ತುವ ಕೆಲಸಕ್ಕೆ ಉತ್ತೇಜನ ನೀಡಬೇಕು ಎಂದೂ ದುಂಡುಮೇಜಿನ ಸಭೆಯ ಘೋಷಣೆಯಲ್ಲಿ ಉಲ್ಲೇಖಿಸಿದ್ದಾರೆ.

ಸರ್ಕಾರದ ವಿರುದ್ಧ ಬಿಜೆಪಿಯ ಮಾಣಿಪ್ಪಾಡಿ ವಾಗ್ದಾಳಿ

# ಅಲ್ಪಸಂಖ್ಯಾತರ ಹಕ್ಕುಗಳಿಗೆ ಸಿಗದ ರಕ್ಷಣೆ

ಪ್ರಜಾವಾಣಿ ವಾರ್ತೆ



ಅನ್ವರ್ ಮಾಣಿಪ್ಪಾಡಿ

**ಮಂಗಳೂರು:** 'ರಾಜ್ಯದಲ್ಲಿ 'ಸಬ್ ಕಾ ಸಾಥ್– ಸಬ್ ಕಾ ವಿಕಾಸ್' ಧ್ಯೇಯವಾಕ್ಯ ಪಾಲನೆಯಾಗುತ್ತಿಲ್ಲ. ಸಂವಿಧಾನ ಬದ್ಧವಾಗಿ ಮುಸ್ಲಿಮರಿಗೆ ಸಿಗಬೇಕಾದ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ' ಎಂದು ಬಿಜೆಪಿ ಜಂಟಿ ವಕ್ತಾರ ಅನ್ವರ್ ಮಾಣಿಪ್ಪಾಡಿ ಆರೋಪಿಸಿದರು.

ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನಗೆ ನೀಡಿರುವ ಗನ್‌ಮ್ಯಾನ್ ಭದ್ರತೆಯನ್ನು ಹಾಗೂ ಇತರ ಸವಲತ್ತುಗಳನ್ನು ಸರ್ಕಾರದ ನಡವಳಿಕೆಯನ್ನು ಪ್ರತಿಭಟಿಸುವ ಸಲುವಾಗಿ ತ್ಯಜಿಸುತ್ತಿದ್ದೇನೆ' ಎಂದರು.

'ಜಾತ್ರೆ ಸಂದರ್ಭದಲ್ಲಿ ಮುಸ್ಲಿಮರು ವ್ಯಾಪಾರ ನಡೆಸಲು ನಿರ್ಬಂಧಿಸಲಾಗುತ್ತಿದೆ. ಹಲಾಲ್ ಬಗ್ಗೆ ವಿನಾಕಾರಣ ಅಪಪ್ರಚಾರ ಮಾಡಲಾಗುತ್ತಿದೆ. ಈ ಹಿಂದೆ ಎಷ್ಟೇ ದೊಡ್ಡ ಪ್ರಮಾಣದ ಕೋಮುಗಲಭೆಗಳು ನಡೆದಾಗಲೂ, ಈಗಿನಂತೆ ಜಾತ್ರೆಗಳಲ್ಲೂ ಹಿಂದೂ– ಮುಸ್ಲಿಂ ಎಂದು ತಾರತಮ್ಯ ಮಾಡುವ ವಾತಾವರಣ ಎದುರಾಗಿರಲಿಲ್ಲ. ಬಿಜೆಪಿಯಲ್ಲಿದ್ದೇನೆ ಎಂದ ಮಾತ್ರಕ್ಕೆ ಸತ್ಯವನ್ನು ಅದುಮಿಡಬೇಕೆಂದೇನಿಲ್ಲ. ನಾನು ಹೇಳಿದ್ದರಲ್ಲಿ ಸತ್ಯಾಂಶ ಇಲ್ಲದಿದ್ದರೆ ಸಾಬೀತುಪಡಿಸಲಿ' ಎಂದು ಸವಾಲು ಹಾಕಿದರು.

'₹ 2.3 ಲಕ್ಷ ಕೋಟಿ ಮೌಲ್ಯದ ವಕ್ಫ್ ಆಸ್ತಿ ಕಬಳಿಕೆಗೆ ಸಂಬಂಧಿಸಿ ನಾನು ನೀಡಿದ ವರದಿಯನ್ನು ಸರ್ಕಾರ ಇನ್ನೂ ವಿಧಾನಮಂಡಲದಲ್ಲಿ ಮಂಡಿಸಿಲ್ಲ. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಧಾನಿ ನರೇಂದ್ರ ಮೋದಿ ಅವರಿಗೂ ಪತ್ರ ಬರೆದಿದ್ದೇನೆ. ಆದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲ' ಎಂದರು.

'ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನ ವಕ್ಫ್ ಸ್ವತ್ತು. ಅದನ್ನು ಉಳಿಸಿಕೊಳ್ಳುವ ಪ್ರಯತ್ನವನ್ನೂ ಮಂಡಳಿ ನಡೆಸುತ್ತಿಲ್ಲ. ಸುಳ್ಯದಲ್ಲಿ ಮುಸ್ಲಿಮರ ದಫನಭೂಮಿಯನ್ನು ಸರ್ಕಾರ ಹಿಂಪಡೆಯಲು ಮುಂದಾಗಿರುವುದು ನೋವಿನ ಸಂಗತಿ. ವಕ್ಫ್ ಮಂಡಳಿ ಈಗಿನ ಅಧ್ಯಕ್ಷ ಶಾಫಿ ಸಅದಿ ಅವರು ವಕ್ಫ್ ಆಸ್ತಿಗಳನ್ನು ಉಳಿಸಲು ಕ್ರಮ ಕೈಗೊಳ್ಳುವ ಬದಲು, ಭೂಕಬಳಿಕೆ ಮಾಡಿದವರ ರಕ್ಷಣೆಗೆ ಸರ್ಕಾರದ ನಡುವೆ ಮಧ್ಯವರ್ತಿಯಂತೆ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಅವರು ಆರೋಪಿಸಿದರು.

### 'ಹೋರಾಟ ಕೈಬಿಡಲು ಹಣದ ಆಮಿಷ'

'ವಕ್ಫ್ ಆಸ್ತಿಗಳ ರಕ್ಷಣೆ ನಾನು ನಡೆಸುತ್ತಿರುವ ಹೋರಾಟವನ್ನು ಕೈಬಿಡುವಂತೆ ಒತ್ತಾಯಿಸಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ವಿಜಯೇಂದ್ರ ನನಗೆ ಕೋಟಿಗಟ್ಟಲೆ ಹಣ ನೀಡಲು ಮುಂದಾಗಿದ್ದರು. ನಾನು ಅದನ್ನು ನಿರಾಕರಿಸಿದ್ದೆ. ಭೂಕಬಳಿಕೆ ಮಾಡಿದವರನ್ನು ತಂದೆ ಮಗ ಸೇರಿ ರಕ್ಷಣೆ ಮಾಡುತ್ತಿದ್ದಾರೆ ಎಂದೂ ಬಹಿರಂಗವಾಗಿಯೇ ಹೇಳಿದ್ದೆ' ಎಂದು ಅನ್ವರ್ ಮಾಣಿಪ್ಪಾಡಿ ತಿಳಿಸಿದರು.

ಪುತ್ತೂರು ಕ್ಷೇತ್ರ ಶಿಕ್ಷಣಾಧಿಕಾರಿ ಆಲೋಚನೆ, ಶಿಕ್ಷಕಿ ಗೀತಾಮಣಿ ಪ್ರಯತ್ನ

# ಬಡ ವಿದ್ಯಾರ್ಥಿನಿಗೆ ಮನೆ 'ಉಡುಗೊರೆ'

ಪ್ರಜಾವಾಣಿ ವಾರ್ತೆ

**ಪುತ್ತೂರು (ದಕ್ಷಿಣ ಕನ್ನಡ):** ಸಂಕಷ್ಟದಲ್ಲಿದ್ದ ಬಡ ವಿದ್ಯಾರ್ಥಿನಿಗೆ ದಾನಿಗಳ ನೆರವಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಶಿಕ್ಷಕಿಯೊಬ್ಬರು ಮನೆ ನಿರ್ಮಿಸಿ ಕೊಟ್ಟಿದ್ದು, ಜುಲೈ 1ರಂದು ಅದರ ಹಸ್ತಾಂತರ ನಡೆಯಲಿದೆ.

ಕಳೆದ ಶೈಕ್ಷಣಿಕ ಸಾಲಿನಲ್ಲಿ ಪುತ್ತೂರಿನ ಕೊಂಬೆಟ್ಟು ಸರ್ಕಾರಿ ಪ್ರೌಢ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿಯಾಗಿದ್ದ ಅನಿತಾ, ತಾಲ್ಲೂಕಿನ ಕೊಡಿಪ್ಪಾಡಿ ಗ್ರಾಮದ ಪೆರಿಯತ್ತೋಡಿಯಲ್ಲಿ ಮಣ್ಣಿನಗೋಡೆ, ಟಾರ್ಪಲ್ ಹೊದಿಕೆ, ಸೀರೆಯನ್ನೇ ಅಡ್ಡಲಾಗಿ ಕಟ್ಟಿದ್ದ ಶಿಥಿಲಗೊಂಡ ಮನೆಯಲ್ಲಿ ವಾಸವಿದ್ದಳು.

ಅನಿತಾ ಅವರ ತಾಯಿ ಸುನಂದಾ, ಕೂಲಿ ಮಾಡಿ ತನ್ನಿಬ್ಬರು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದು, ಹಿರಿಯ ಪುತ್ರಿ ಲಾವಣ್ಯ ಪದವಿಯಲ್ಲಿ ಓದುತ್ತಿದ್ದಾರೆ.

**ಭೇಟಿ:** ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಯ ನಿಟ್ಟಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್ ಸಿ. ಹಾಗೂ ಶಾಲೆಯ ಶಿಕ್ಷಕರು ಅನಿತಾ ಮನೆಗೆ ಭೇಟಿ ನೀಡಿದ್ದರು. ಕಿತ್ತು ತಿನ್ನುವ ಬಡತನದಲ್ಲೂ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿರುವ ತಾಯಿ ಸುನಂದಾ ಅವರ ಛಲ ಕಂಡ ಕ್ಷೇತ್ರ ಶಿಕ್ಷಣಾಧಿಕಾರಿ, ಈ ಕುಟುಂಬಕ್ಕೆ ಮನೆ ನಿರ್ಮಿಸಿಕೊಡುವ ಬಗ್ಗೆ ಪ್ರೌಢ ಶಾಲೆಯ ಶಿಕ್ಷಕಿ ಗೀತಾಮಣಿ ಜೊತೆ ಚರ್ಚಿಸಿದ್ದರು.

ಗೀತಾಮಣಿ ಅವರು ಸಂಘ ಸಂಸ್ಥೆಗಳ ಸಹಾಯ ಯಾಚಿಸುವ ಮೂಲಕ ಕಾರ್ಯ ಪ್ರವೃತ್ತರಾಗಿದರು. ಪುತ್ತೂರಿನ ರೋಟರಿ ಸಂಸ್ಥೆ ಹಾಗೂ ದಾನಿಗಳು ಕೈ ಜೋಡಿಸಿದರು. ನಗರಸಭೆ ಹಾಗೂ ಪ್ರಮುಖರು ಸಹಕರಿಸಿದರು. ₹6 ಲಕ್ಷ ವೆಚ್ಚದಲ್ಲಿ 750 ಚದರ ಅಡಿಯ ಆರ್‌ಸಿಸಿ ಮನೆ ನಿರ್ಮಾಣವು ಅಂತಿಮ ಹಂತಕ್ಕೆ ಬಂದಿದೆ.

ಇನ್ನರ್‌ವೀಲ್ ಕ್ಲಬ್ ವಿದ್ಯುತ್ ಸಂಪರ್ಕ ಕಲ್ಪಿಸಿದೆ. ವಿವೇಕಾನಂದ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಶ್ರಮದಾನದ ಮೂಲಕ ಸಹಕರಿಸಿದರು. ಪುತ್ತೂರು ಸೇಂಟ್ ವಿಕ್ಟರ್ ಬಾಲಿಕಾ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘವು ಶೌಚಾಲಯ, ಸ್ನಾನಗೃಹದ ಜತೆಗೆ ಶೆಡ್ ನಿರ್ಮಿಸಲು ಮುಂದೆ ಬಂದಿದೆ.

ಅನಿತಾ ಎಸ್ಸೆಸ್ಸೆಲ್ಸಿಯಲ್ಲಿ 568 ಅಂಕ ಪಡೆದಿದ್ದು, ಕೊಂಬೆಟ್ಟು ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಕಲಿಯುತ್ತಿದ್ದಾರೆ.



ಪುತ್ತೂರಿನ ತಾಲ್ಲೂಕಿನ ಕೊಡಿಪ್ಪಾಡಿ ಗ್ರಾಮದ ಪೆರಿಯತ್ತೋಡಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮನೆ

**ಅನಿತಾ ಕುಟುಂಬದ ಸ್ಥಿತಿ ತೀರಾ ಶೋಚನೀಯವಾಗಿತ್ತು. ನಾವು ಕುಟುಂಬಕ್ಕೆ ಸೂರು ಒದಗಿಸುವ ಪ್ರಯತ್ನಕ್ಕಿಳಿದಿದ್ದೆವು. ಎಲ್ಲರೂ ಸಹಕರಿಸಿದರು**
**ಗೀತಾಮಣಿ,** ಶಿಕ್ಷಕಿ, ಕೊಂಬೆಟ್ಟು ಪ್ರೌಢಶಾಲೆ

**ಅನಿತಾ ಮನೆಯ ಸ್ಥಿತಿ ಕಂಡು, ಮನೆ ನಿರ್ಮಿಸುವ ಬಗ್ಗೆ ಶಿಕ್ಷಕಿ ಗೀತಾಮಣಿ ಅವರಲ್ಲಿ ಹೇಳಿದ್ದೆ. ಅವರು ಕಾರ್ಯಗತಗೊಳಿಸಿದರು**
**ಲೋಕೇಶ್ ಸಿ.** ಕ್ಷೇತ್ರ ಶಿಕ್ಷಣಾಧಿಕಾರಿ, ಪುತ್ತೂರು

ಮಂಗಳವಾರ, ಜೂನ್ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 178 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕ್ಷೇಮ ಕುಶಲ**

ಹವ್ಯಾಸಗಳು ನಮ್ಮ ಜಡವಾದ ಜೀವನಕ್ಕೆ ಉಲ್ಲಾಸವನ್ನು ಕೊಡುತ್ತವೆ. ಆದರೆ ಅವು ಚಟ ಆಗಬಾರದು.



**ಆಳ-ಅಗಲ** ಮುರ್ಮು-ಸಿನ್ಹಾ ರಾಷ್ಟ್ರಪತಿ ಹುದ್ದೆಗೆ ಪೈಪೋಟಿ

ಅಗ್ನಿಪಥ: ವಾಯುಪಡೆಗೆ 94 ಸಾವಿರ ಅರ್ಜಿ ಸಲ್ಲಿಕೆ 5

ರಾವುತ್‌ಗೆ ಇ.ಡಿ. ಸಮನ್ಸ್ 5

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 53,161 ▲ | 15,832 ▲ | ₹52,830 (ಬೆಂಗಳೂರು) ▲ | ₹62,100 (ಬೆಂಗಳೂರು) ▲ | 78.37 ▼ |

ರೋಹಿತ್ ಚಕ್ರತೀರ್ಥ ಸಮಿತಿ ಕೈಬಿಟ್ಟಿರುವ, ತಿದ್ದಿರುವ ಪಠ್ಯ ಮರು ಪರಿಷ್ಕರಣೆಗೆ ‘ತಿದ್ದೋಲೆ’

# ಪಠ್ಯ ವಿವಾದ: ಮಣಿದ ಸರ್ಕಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಶೀಲನಾ ಸಮಿತಿ ಪರಿಷ್ಕರಿಸಿದ ಪಠ್ಯ ಪುಸ್ತಕದ ವಿಚಾರದಲ್ಲಿ ವಿರೋಧ ಪಕ್ಷಗಳು, ನಾನಾ ಮಠಾಧೀಶರು, ವಿವಿಧ ಸಂಘಟನೆಗಳ ಬೇಡಿಕೆಗೆ ಕೊನೆಗೂ ರಾಜ್ಯ ಸರ್ಕಾರ ಮಣಿದಿದೆ. ಸಮಿತಿ ಕೈಬಿಟ್ಟ, ತಿದ್ದುಪಡಿ ಮಾಡಿದ್ದ ಪಠ್ಯಗಳನ್ನು ಮರು ಪರಿಷ್ಕರಿಸಲು ನಿರ್ಧರಿಸಿದೆ.

ಪರಿಷ್ಕೃತ ಪಠ್ಯದಲ್ಲಿ ಅಂಬೇಡ್ಕರ್ ಕುರಿತ ‘ಸಂವಿಧಾನ ಶಿಲ್ಪಿ’ ಪದ, ಹಿಂದುಳಿದವರಲ್ಲಿ ಸ್ವಾಭಿಮಾನದ ಕಿಚ್ಚು ಹೊತ್ತಿಸಿರುವ ಬ್ರಹ್ಮಶ್ರೀ ನಾರಾಯಣಗುರು, ಭಗತ್ ಸಿಂಗ್ ಕುರಿತ ಪಾಠ, ‘ಭಕ್ತಿ ಪಂಥ ಹಾಗೂ ಸೂಫಿ ಸಂತರು’ ಪಾಠ, ಸಿದ್ದಗಂಗಾ ಮಠ ಹಾಗೂ ಆದಿ ಚುಂಚನಗಿರಿ ಮಠದ ಕುರಿತು ವಿವರಗಳನ್ನು ಸಮಿತಿ ಕೈಬಿಟ್ಟಿತ್ತು. ಬಸವಣ್ಣನವರ ಕುರಿತ ವಿಷಯಾಂಶ ತಿದ್ದುಪಡಿ ಮಾಡಿತ್ತು. ಈ ಪರಿಷ್ಕೃತ ಪಠ್ಯಪುಸ್ತಕಗಳು ಮುದ್ರಣ ಹಂತದಲ್ಲಿರುವಾಗಲೇ ಕೈಬಿಟ್ಟಿದ್ದ ಮತ್ತು ತಿದ್ದುಪಡಿ ಮಾಡಿದ್ದ ಅಂಶಗಳಿಗೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

‘ಚಕ್ರತೀರ್ಥ ಸಮಿತಿಯು ಉದ್ದೇಶಪೂರ್ವಕವಾಗಿ ಕೆಲವರ ಪರಿಚಯದ ಪಾಠವನ್ನು ಕೈಬಿಟ್ಟಿದೆ, ಕೆಲವನ್ನು ತಿರುಚಿದೆ’ ಎಂದು ಸಾಹಿತಿಗಳು, ಹೋರಾಟಗಾರರು ದಾಖಲೆ ಸಮೇತ ಸಾರ್ವಜನಿಕರ ಮುಂದಿಟ್ಟಿದ್ದರು. ಪರಿಷ್ಕರಿಸಿರುವ ಪಠ್ಯಪುಸ್ತಕಗಳನ್ನು ವಾಪಸ್ ಪಡೆದು, ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿ ಪರಿಷ್ಕರಿಸಿದ್ದ ಹಿಂದಿನ ಪಠ್ಯಪುಸ್ತಕಗಳನ್ನೇ ಈ ವರ್ಷವೇ ನೀಡಬೇಕು ಎಂದು ‘ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ’ ಆಗ್ರಹಿಸಿತ್ತು. ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರು ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದರು.

ಇದೆಲ್ಲ ಆದ ಬಳಿಕವೂ, ಕಂದಾಯ ಸಚಿವ ಆರ್. ಅಶೋಕ ನೇತೃತ್ವದಲ್ಲಿ ಸುದ್ದಿಗೋಷ್ಠಿ ನಡೆಸಿದ್ದ ನಾಲ್ವರು ಸಚಿವರಿದ್ದ ತಂಡ, ಪರಿಷ್ಕರಣೆಯಲ್ಲಿ ಪ್ರಮಾದವೇ ಆಗಿಲ್ಲ; ಸಣ್ಣ ಪುಟ್ಟ ತಪ್ಪುಗಳಾಗಿವೆ ಎಂದು ಸಮರ್ಥನೆಯನ್ನೂ ಮಾಡಿದ್ದರು. ಸರ್ಕಾರವು, ಸೋಮವಾರ ಹೊರಡಿಸಿರುವ ಆದೇಶದಲ್ಲಿ, ಚಕ್ರತೀರ್ಥ ಸಮಿತಿ ಎಸಗಿದ್ದ ತಪ್ಪುಗಳನ್ನು ಪಟ್ಟಿ ಮಾಡಿದ್ದಲ್ಲದೇ, ಅದಕ್ಕೆ ತಿದ್ದೋಲೆಯನ್ನೂ ಹೊರಡಿಸಿದೆ.

‘ಸಾಮಾನ್ಯವಾಗಿ ಪಠ್ಯ ಪುಸ್ತಕಗಳ ರಚನೆ, ಪರಿಷ್ಕರಣೆಗೆ ಒಳಗಾದಾಗ ಅಗತ್ಯವಾದ ತಿದ್ದುಪಡಿಗಳನ್ನು ತಿದ್ದೋಲೆ ರೂಪದಲ್ಲಿ ನೀಡುವುದು ಈ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪ್ರಕ್ರಿಯೆ’ ಎಂದು ಆದೇಶದಲ್ಲಿ ಹೇಳಿದೆ.

ಚಕ್ರತೀರ್ಥ ಸಮಿತಿ ಕೈಬಿಟ್ಟಿದ್ದ 9ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರ ‘ನಮ್ಮ ಸಂವಿಧಾನ’ ಪಾಠದಲ್ಲಿದ್ದ ‘ಸಂವಿಧಾನ ಶಿಲ್ಪಿ’ ಪದ, 7ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿನ ‘ಭಕ್ತಿ ಪಂಥ ಹಾಗೂ ಸೂಫಿ ಸಂತರು’ ಪಾಠ, 9ನೇ ತರಗತಿಯ ಸಮಾಜ ವಿಜ್ಞಾನ ಭಾಗ-1 ಪಠ್ಯಪುಸ್ತಕದಲ್ಲಿ ‘ಭಾರತದ ಮತ ಪರಿವರ್ತಕರು’ ಪಾಠದಲ್ಲಿರುವ ಬಸವಣ್ಣನವರ ಕುರಿತ ವಿಷಯಾಂಶವನ್ನು ಮತ್ತೆ ಸೇರಿಸಲು ಸರ್ಕಾರ ತೀರ್ಮಾನಿಸಿದೆ.

‘ಪಠ್ಯಪುಸ್ತಕಗಳ ಮುದ್ರಣಕ್ಕೆ ಕಾರ್ಯಾದೇಶ ಪಡೆದಿರುವ ಮುದ್ರಕರಿಂದ ತಿದ್ದುಪಡಿಗೆ ಸಂಬಂಧಿಸಿದ ತಿದ್ದೋಲೆಯ ಪ್ರತಿಗಳನ್ನು ಮುದ್ರಿಸಿ ಎಲ್ಲ ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲೆಗಳಿಗೆ ಉಚಿತವಾಗಿ ತಲಾ ಒಂದು ಪ್ರತಿ ವಿತರಿಸಲಾಗುವುದು. ಅಲ್ಲದೆ, ತಿದ್ದುಪಡಿ ಮಾಡಿರುವ ಅಂಶಗಳನ್ನು ಕರ್ನಾಟಕ ಪಠ್ಯ ಪುಸ್ತಕ ಸಂಘದ ಜಾಲತಾಣದಲ್ಲಿರುವ ಮೂಲ ಪುಸ್ತಕಗಳ ಸಾಫ್ಟ್ ಪ್ರತಿಯಲ್ಲಿಯೂ ಅಳವಡಿಸಲಾಗುವುದು’ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

5ನೇ ಪುಟ ನೋಡಿ

## ‘ಪ್ರಜಾವಾಣಿ’ ಅಭಿಯಾನ ಪರಿಣಾಮ




ಪಠ್ಯಪುಸ್ತಕ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನೇಮಿಸಲಾಗಿದ್ದ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿ ಪಠ್ಯಪರಿಷ್ಕರಣೆ ಮೂಲಕ ಮಾಡಿದ್ದ ತಪ್ಪುಗಳನ್ನು ಸರಿಪಡಿಸಲು ಸರ್ಕಾರ ಕೊನೆಗೂ ಮುಂದಾಗಿದೆ.

ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಆಗಿರುವ ಲೋಪ-ದೋಷಗಳಿಗೆ ಸಂಬಂಧಿಸಿದಂತೆ ಮೇ 18 ರಿಂದ ‘ಪ್ರಜಾವಾಣಿ’ ನಿರಂತರ ವರದಿ-ವಿಶ್ಲೇಷಣೆಗಳನ್ನು ಪ್ರಕಟಿಸಿದೆ.

ಆರ್‌ಎಸ್‌ಎಸ್ ಸಂಸ್ಥಾಪಕ ಕೇಶವ ಬಲಿರಾಮ ಹೆಡಗೇವಾರ್ ಅವರ ಭಾಷಣವನ್ನು ಪಠ್ಯವಾಗಿ ಸೇರಿಸಿದ್ದಲ್ಲದೇ, ದೇಶದ ಹಲವು ದಾರ್ಶನಿಕರು ನೀಡಿದ್ದ ಕೊಡುಗೆಯನ್ನು ಪರಿಚಯಿಸುವ ಹಲವು ಪಠ್ಯಗಳನ್ನು ಕೈಬಿಟ್ಟಿರುವ ಬಗ್ಗೆ ವರದಿ ಮಾಡಿದ್ದಲ್ಲದೇ, ವಿಸ್ತೃತವಾಗಿ ವಿಶ್ಲೇಷಣೆಗೂ ಒಳಪಡಿಸಲಾಗಿತ್ತು. ಪತ್ರಿಕೆಯ ವರದಿಗಳು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಯಿತು. ಸರ್ಕಾರದ ನಡೆಯ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಹಲವು ಸಂಘಟನೆಗಳೂ ಆಕ್ಷೇಪ ವ್ಯಕ್ತಪಡಿಸಿ ಹೋರಾಟಗಳನ್ನೂ ಹಮ್ಮಿಕೊಂಡಿದ್ದವು.

# ಜುಲೈ 1ರಿಂದ ವಿದ್ಯುತ್ ದರ ಮತ್ತೆ ಏರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಜುಲೈ 1ರಿಂದ ಪ್ರತಿ ತಿಂಗಳ ವಿದ್ಯುತ್ ದರ ಮತ್ತಷ್ಟು ಹೆಚ್ಚಳವಾಗಲಿದೆ.


ಪ್ರತಿ ತಿಂಗಳು 100 ಯೂನಿಟ್ ಬಳಸುವ ಗ್ರಾಹಕರು ಹೆಚ್ಚುವರಿಯಾಗಿ ₹19ರಿಂದ ₹31ರವರೆಗೆ ಪಾವತಿಸಬೇಕಾಗುತ್ತದೆ. ಈ ದರ ಆಯಾ ವಿದ್ಯುತ್ ವಿತರಣಾ ಕಂಪನಿಗಳ ಮೇಲೆ ಅವಲಂಬನೆಯಾಗಿದೆ.

2021-22ನೇ ಸಾಲಿನ ಕೊನೆಯ ಎರಡು ತ್ರೈಮಾಸಿಕದಲ್ಲಿ ಕಲ್ಲಿದ್ದಲು ದರ ಹೆಚ್ಚಳವಾಗಿದೆ. ಹೀಗಾಗಿ, ಕಲ್ಲಿದ್ದಲು ಖರೀದಿಗೆ ಮಾಡಿರುವ ವೆಚ್ಚವನ್ನು ಗ್ರಾಹಕರಿಂದ ಪಡೆಯಲು ಅವಕಾಶ ಕಲ್ಪಿಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಎಸ್ಕಾಂಗಳು ಪ್ರಸ್ತಾವ ಸಲ್ಲಿಸಿದ್ದವು.

ಇಂಧನ ವೆಚ್ಚ ಹೊಂದಾಣಿಕೆ ಶುಲ್ಕವನ್ನು (ಎಫ್‌ಎಸಿ) ಪ್ರತಿ ಯೂನಿಟ್‌ಗೆ ₹38ರಿಂದ ₹55 ವಸೂಲಿ ಮಾಡಲು ಎಸ್ಕಾಂಗಳು ಕೋರಿದ್ದವು. ಬೆಸ್ಕಾಂ ₹55.28, ಮೆಸ್ಕಾಂ ₹38.98, ಸೆಸ್ಕ್ ₹40.47, ಹೆಸ್ಕಾಂ ₹49.54, ಗೆಸ್ಕಾಂ ₹39.36 ವಿಧಿಸುವಂತೆ ಪ್ರಸ್ತಾವದಲ್ಲಿ ಉಲ್ಲೇಖಿಸಿದ್ದವು.

ಈ ಪ್ರಸ್ತಾವನೆಗೆ ಕೆಇಆರ್‌ಸಿ ಅನುಮೋದನೆ ನೀಡಿದ್ದರೂ, ಎಸ್ಕಾಂಗಳು ನಿಗದಿಪಡಿಸಿದ್ದ ದರಗಳನ್ನು ಕಡಿತಗೊಳಿಸಿದೆ. ಕೋವಿಡ್ ಕಾರಣದಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ಗ್ರಾಹಕರಿಗೆ ಎಸ್ಕಾಂಗಳು ನಿಗದಿಪಡಿಸಿರುವ ದರಗಳಿಂದ ಹೊರೆಯಾಗಲಿದೆ ಎಂದು ಅಭಿಪ್ರಾಯಪಟ್ಟಿದೆ.

**ಎಸ್ಕಾಂಗಳು: ಎಫ್‌ಎಸಿ ದರ (ಪ್ರತಿ ಯೂನಿಟ್‌ಗೆ ಪೈಸೆಯಲ್ಲಿ)**




2022ರ ಜುಲೈ 1ರಿಂದ ಡಿಸೆಂಬರ್ 31ರವರೆಗಿನ ಅವಧಿಯಲ್ಲಿ (ಆರು ತಿಂಗಳು) ಇಂಧನ ವೆಚ್ಚ ಹೊಂದಾಣಿ ಶುಲ್ಕವನ್ನು (ಎಫ್‌ಎಸಿ) ವಸೂಲಿ ಮಾಡುವ ಅವಕಾಶವನ್ನು ಕೆಇಆರ್‌ಸಿ ಕಲ್ಪಿಸಿದೆ.

ಮೆಸ್ಕಾಂ ವಸೂಲಿ ಮಾಡುವ ದರಗಳು ವಿಶೇಷ ಆರ್ಥಿಕ ವಲಯಕ್ಕೂ ಅನ್ವಯವಾಗಲಿದೆ. ಇದೇ ರೀತಿಯಲ್ಲಿ ಹೆಸ್ಕಾಂ ಪಡೆಯುವ ದರಗಳು ಹುಕ್ಕೇರಿ ಆರ್‌ಇಸಿಎಸ್ ಮತ್ತು ಏಕಸ್ ವಿಶೇಷ ಆರ್ಥಿಕ ವಲಯಕ್ಕೆ ಅನ್ವಯವಾಗಲಿದೆ.

ಶಾಖೋತ್ಪನ್ನ ವಿದ್ಯುತ್ ಘಟಕಗಳಲ್ಲಿ ಉತ್ಪಾದನೆಯ ವೆಚ್ಚ ಹೆಚ್ಚಾಗಿದೆ. ಇದರಿಂದ, ವಿದ್ಯುತ್ ಖರೀದಿಸಲು ಎಸ್ಕಾಂಗಳು ಮಾಡುವ ಒಟ್ಟಾರೆ ವೆಚ್ಚದಲ್ಲಿಯೂ ಪ್ರತಿ ಯೂನಿಟ್‌ಗೆ 29 ಪೈಸೆಯಷ್ಟು ಹೆಚ್ಚಳವಾಗಿತ್ತು ಎಂದು ಕೆಇಆರ್‌ಸಿ ತಿಳಿಸಿದೆ.

‘ಕಳೆದ ಒಂದು ವರ್ಷದಿಂದ ಕಲ್ಲಿದ್ದಲು ಪೂರೈಕೆಯಲ್ಲಿ ಸಮಸ್ಯೆಯಾಗಿತ್ತು. ಈಗ ಎಲ್ಲ ಗ್ರಾಹಕರಿಗೂ ಏಕರೂಪದಲ್ಲಿ ದರ ಹೆಚ್ಚಿಸಲಾಗಿದೆ. ಅತಿ ಹೆಚ್ಚಿನ ದರ ವಿಧಿಸಲು ಬೆಸ್ಕಾಂಗೆ ಅವಕಾಶ ನೀಡಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಇದು ತಾತ್ಕಾಲಿಕ ಮಾತ್ರ. ವಸೂಲಿ ಸಂಪೂರ್ಣ ಮುಕ್ತಾಯವಾದರೆ ಮತ್ತೆ ದರಗಳು ಯಥಾಸ್ಥಿತಿಗೆ ಬರಲಿವೆ. ಎಸ್ಕಾಂಗಳ ನಷ್ಟದ ಪ್ರಮಾಣವನ್ನು ಪರಿಗಣಿಸಿ ಇಂಧನ ವೆಚ್ಚ ಹೊಂದಾಣಿಕೆ ಶುಲ್ಕ ವಸೂಲಿಗೆ ಅವಕಾಶ ಕಲ್ಪಿಸಲಾಗಿದೆ. ಕಲ್ಲಿದ್ದಲು ದರ ಸಹ ಹೆಚ್ಚಳವಾಗಿದೆ. ಹೀಗಾಗಿ, ಎಲ್ಲ ಅಂಶಗಳನ್ನು ಪರಿಗಣಿಸಿ ಈ ಆದೇಶ ನೀಡಲಾಗಿದೆ’ ಎಂದು ಕೆಇಆರ್‌ಸಿ ಅಧ್ಯಕ್ಷ ಪಿ. ರವಿಕುಮಾರ್ ತಿಳಿಸಿದ್ದಾರೆ.

## ಪಂಜಾಬ್: ಜುಲೈ 1ರಿಂದ ತಿಂಗಳಿಗೆ 300 ಯೂನಿಟ್ ಉಚಿತ ವಿದ್ಯುತ್

**ಚಂಡೀಗಢ (ಪಿಟಿಐ):** ಪಂಜಾಬ್‌ನಲ್ಲಿ ಜುಲೈ 1ರಿಂದ ಗೃಹ ಬಳಕೆಗಾಗಿ ತಿಂಗಳಿಗೆ 300 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ಪೂರೈಸಲಾಗುವುದು.

ರಾಜ್ಯದಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿರುವ ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ಸರ್ಕಾರವು ಸೋಮವಾರ ಮಂಡಿಸಿದ ತನ್ನ ಮೊದಲ ಬಜೆಟ್‌ನಲ್ಲಿ ಇದನ್ನು ಪ್ರಕಟಿಸಿದೆ. ಚುನಾವಣಾ ಪ್ರಚಾರದ ವೇಳೆ ಪಕ್ಷ ನೀಡಿದ ಪ್ರಮುಖ ಭರವಸೆಗಳಲ್ಲಿ ಇದೂ ಒಂದಾಗಿತ್ತು.



## ಭಿನ್ನರು ಜುಲೈ 12ರವರೆಗೆ ನಿರಾಳ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ವಿರುದ್ಧ ಸಚಿವ ಏಕನಾಥ ಶಿಂಧೆ ನೇತೃತ್ವದಲ್ಲಿ ಬಂಡಾಯ ಎದ್ದಿರುವ 16 ಶಾಸಕರ ಅನರ್ಹತೆಯ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಅಮಾನತಿನಲ್ಲಿ ಇರಿಸಿದೆ. ಅನರ್ಹತೆಗೆ ಸಂಬಂಧಿಸಿ ಡೆಪ್ಯುಟಿ ಸ್ಪೀಕರ್ ನೀಡಿರುವ ನೋಟಿಸ್‌ಗೆ ಪ್ರತಿಕ್ರಿಯೆ ನೀಡಲು ಜುಲೈ 12ರವರೆಗೆ ಸಮಯಾವಕಾಶ ಕೊಟ್ಟಿದೆ. ನೋಟಿಸ್‌ಗೆ ಪ್ರತಿಕ್ರಿಯೆ ನೀಡಲು ಶಾಸಕರಿಗೆ ಉಪಸ್ಪೀಕರ್ ಸೋಮವಾರ ಸಂಜೆ 5.30ರವರೆಗೆ ಸಮಯ ಕೊಟ್ಟಿದ್ದರು.

ವಾದ-ಪ್ರತಿವಾದಗಳನ್ನು ಆಲಿಸಿ ಒಂದು ನಿರ್ಧಾರಕ್ಕೆ ಬರುವುದಕ್ಕೆ ಯಥಾಸ್ಥಿತಿ ಕಾಯ್ದುಕೊಳ್ಳುವ ಅಗತ್ಯ ಇದೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪರ್ದಿವಾಲಾ ಅವರು ಪೀಠವು ಹೇಳಿದೆ.

‘ಅನರ್ಹತೆ ವಿಚಾರದಲ್ಲಿ ಕ್ರಮ ಕೈಗೊಳ್ಳಲು ಉಪಸ್ಪೀಕರ್‌ಗೆ ಅಧಿಕಾರ ಇದೆಯೇ ಎಂಬುದನ್ನು ಪರಿಶೀಲಿಸಬೇಕಿದೆ’ ಎಂದು ಪೀಠವು ಹೇಳಿದೆ.



ಬಂಡಾಯ ಶಾಸಕರ ನಾಯಕ ಏಕನಾಥ್ ಶಿಂಧೆ ಬೆಂಬಲಿಗರು ಸಂಸದ ಸಂಜಯ್ ರಾವುತ್ ಅವರ ಪ್ರತಿಕೃತಿಯನ್ನು ಠಾಣೆ ಮಹಾನಗರ ಪಾಲಿಕೆ ಮುಂಭಾಗ ಸೋಮವಾರ ದಹಿಸಿದರು – ಪಿಟಿಐ ಚಿತ್ರ

ಸುಪ್ರೀಂ ಕೋರ್ಟ್‌ನ ಈ ಆದೇಶವು, ಗುವಾಹಟಿಯ ಪಂಚತಾರಾ ಹೋಟೆಲ್‌ನಲ್ಲಿ ತಂಗಿರುವ ಬಂಡಾಯ ಶಾಸಕರಿಗೆ ನಿರಾಳ ತಂದಿದೆ.

ಉಪಸ್ಪೀಕರ್ ಅವರು ತಮ್ಮದೇ ಪ್ರಕರಣದಲ್ಲಿ ನ್ಯಾಯಾಧೀಶರಾಗಲು ಮತ್ತು ಅವರನ್ನು ವಜಾ ಮಾಡಬೇಕು ಎಂಬ ಬೇಡಿಕೆಯು ಮೌಲಿಕವಲ್ಲ ಎನ್ನಲು ಸಾಧ್ಯವೇ ಎಂದು ಪೀಠವು ಪ್ರಶ್ನಿಸಿದೆ.

ಉಪಸ್ಪೀಕರ್ ಅವರ ಬಗ್ಗೆ ಅವಿಶ್ವಾಸ ನೋಟಿಸ್ ಅನ್ನು ಬಂಡಾಯ ಶಾಸಕರು ನೀಡಿದ್ದಾರೆ. ಈ ವಿಚಾರವು ತೀರ್ಮಾನವಾಗುವ ಮುನ್ನವೇ ಅನರ್ಹತೆ ಪ್ರಕ್ರಿಯೆಯನ್ನು ನಡೆಸಬಹುದೇ ಎಂಬುದನ್ನು ವಿವರಿಸಿ ಪ್ರಮಾಣಪತ್ರ ಸಲ್ಲಿಸುವಂತೆ ಉಪಸ್ಪೀಕರ್‌ಗೆ ಪೀಠ ಸೂಚಿಸಿದೆ.

5ನೇ ಪುಟ ನೋಡಿ

## ತೀಸ್ತಾ ಬಂಧನ: ಪ್ರತಿಭಟನೆ

**ನವದೆಹಲಿ (ಪಿಟಿಐ):** ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಬಂಧನ ವಿರೋಧಿಸಿ ಜಂತರ್ ಮಂತರ್‌ನಲ್ಲಿ ಸೋಮವಾರ ವಿದ್ಯಾರ್ಥಿಗಳು, ಶಿಕ್ಷಕರು, ಹೋರಾಟಗಾರರು ಪ್ರತಿಭಟನೆ ನಡೆಸಿದರು.

## ಇಂದು ಜಿಎಸ್‌ಟಿ ಸಭೆ: ಸಿಕ್ಕೀತೇ ಪರಿಹಾರ?

**ನವದೆಹಲಿ (ಪಿಟಿಐ):** ರಾಜ್ಯಗಳಿಗೆ ವರಮಾನ ನಷ್ಟ ತುಂಬಿಕೊಡುವುದು ಹೇಗೆ, ಕೆಲವು ಉತ್ಪನ್ನಗಳ ಮೇಲಿನ ತೆರಿಗೆ ಪ್ರಮಾಣದಲ್ಲಿ ಯಾವ ಬದಲಾವಣೆ ಆಗಬೇಕು ಎಂಬ ಬಗ್ಗೆ ಮಂಗಳವಾರದಿಂದ ಶುರುವಾಗುವ ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಚರ್ಚೆಯಾಗುವ ನಿರೀಕ್ಷೆ ಇದೆ.

ಜಿಎಸ್‌ಟಿ ಅಡಿಯಲ್ಲಿ ರಾಜ್ಯಗಳಿಗೆ ಆಗುವ ವರಮಾನ ನಷ್ಟವನ್ನು ಕೇಂದ್ರವು ಭರಿಸುವ ವ್ಯವಸ್ಥೆಯು ಈ ತಿಂಗಳಾಂತ್ಯಕ್ಕೆ ಕೊನೆಗೊಳ್ಳಲಿದೆ. ಆದರೆ, ಇದನ್ನು ಮುಂದುವರಿಸುವಂತೆ ಬಿಜೆಪಿಯೇತರ ಪಕ್ಷಗಳ ಆಡಳಿತದ ರಾಜ್ಯ ಸರ್ಕಾರಗಳು ಆಗ್ರಹಿಸುತ್ತಿವೆ.

## ರಷ್ಯಾ ವಿದೇಶಿ ಸಾಲ ಸುಸ್ತಿದಾರ!

**ಮಾಸ್ಕೊ:** ಉಕ್ರೇನ್ ಮೇಲಿನ ಆಕ್ರಮಣಕ್ಕಾಗಿ ಅಮೆರಿಕ ಸೇರಿ ಐರೋಪ್ಯ ರಾಷ್ಟ್ರಗಳು ಕಠಿಣ ನಿರ್ಬಂಧಗಳನ್ನು ವಿಧಿಸಿದ ಪರಿಣಾಮ ರಷ್ಯಾ 1918ರ ನಂತರ ಇದೇ ಮೊದಲ ಬಾರಿ ವಿದೇಶಿ ಸಾಲ ತೀರಿಸದೇ ಸುಸ್ತಿದಾರನಾಗಿದೆ.

ವಿದೇಶಿ ಹೂಡಿಕೆದಾರರಿಗೆ ಮೇ 27ರಂದೇ ₹7,800 ಕೋಟಿ ಬಡ್ಡಿ ಪಾವತಿಸಲು ರಷ್ಯಾಕ್ಕೆ ಅಂತಿಮ ಗಡುವು ನೀಡಲಾಗಿತ್ತು. ಆಗ ಪಾವತಿ ಅಸಾಧ್ಯವಾಗಿದ್ದಕ್ಕೆ ಮತ್ತೆ ತಿಂಗಳ ಹೆಚ್ಚುವರಿ ಕಾಲಾವಕಾಶ ನೀಡಲಾಗಿತ್ತು. ಸೋಮವಾರ (ಜೂ.27) ಆ ಗಡುವೂ ಮುಗಿದಿದೆ. ಪಶ್ಚಿಮದ ರಾಷ್ಟ್ರಗಳ ನಿರ್ಬಂಧಗಳಿಂದಾಗಿ ಜಾಗತಿಕ ಮಾರುಕಟ್ಟೆಯಿಂದ ರಷ್ಯಾವನ್ನು ಹೊರಗಿಟ್ಟ ಪರಿಣಾಮ, ವಿದೇಶಿ ಸಾಲ ಪಾವತಿಸಲು ಅದಕ್ಕೆ ಸಾಧ್ಯವಾಗದಂತಾಗಿದೆ ಎಂದು ‘ನ್ಯೂಯಾರ್ಕ್ ಟೈಮ್ಸ್’ ವರದಿ ಮಾಡಿದೆ.

## ಚಿನಕುರಳಿ

ಪ್ರಕಾಶ್ ಶೆಟ್ಟಿ




**ಪ್ರಮುಖ ಸುದ್ದಿಗಳು**

ರಾಷ್ಟ್ರಪತಿ ಚುನಾವಣೆ: ಸಿನ್ಹಾ ನಾಮಪತ್ರ ಸಲ್ಲಿಕೆ 5

2.35 ಕೋಟಿಗೆ ಏರಲಿದೆ ಗಿಗ್ ಕೆಲಸ 8

ಪ್ರವಾಹ: ಮೃತರ ಸಂಖ್ಯೆ 126ಕ್ಕೆ ಏರಿಕೆ 8

ದೀಪಕ್ ಹೂಡಾ ಆಟಕ್ಕೆ ಒಲಿದ ಗೆಲುವು 10

ವಿಂಬಲ್ಡನ್ ಟೆನಿಸ್: ಜೊಕೊವಿಚ್ ಶುಭಾರಂಭ 9



## ಬಿಎಂಟಿಸಿ: ಸಂಚಾರ ವ್ಯತ್ಯಯ ಇಲ್ಲ

ಬೆಂಗಳೂರು: ಡೀಸೆಲ್ ಕೊರತೆಯ ಕಾರಣಕ್ಕೆ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯವಾಗಿಲ್ಲ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಜಿ.ಸತ್ಯವತಿ ತಿಳಿಸಿದರು.

'ಸಗಟು ಖರೀದಿ ದರ ಪ್ರತಿ ಲೀಟರ್ ಡೀಸೆಲ್‌ಗೆ ₹119 ಇದ್ದರೆ, ಚಿಲ್ಲರೆ ವ್ಯಾಪಾರದಲ್ಲಿ ಡೀಸೆಲ್ ದರ ಲೀಟರ್‌ಗೆ ₹87 ಇದೆ. ₹30 ವ್ಯತ್ಯಾಸ ಇರುವುದರಿಂದ ಚಿಲ್ಲರೆ ವ್ಯಾಪಾರದಿಂದಲೇ ಡೀಸೆಲ್ ಖರೀದಿಸುತ್ತಿದ್ದೇವೆ' ಎಂದು ಹೇಳಿದರು.

'ಇದಕ್ಕೂ ಅಡ್ಡಿಪಡಿಸುವ ಪ್ರಯತ್ನ ನಡೆದಿದೆ. ಹಲವು ಡಿಪೋಗಳಲ್ಲಿ ಇನ್ನೂ ಮೂರು ದಿನಕ್ಕೆ ಸಾಕಾಗುವಷ್ಟು ಡೀಸೆಲ್ ದಾಸ್ತಾನಿದೆ. ಇಲ್ಲದಿರುವ ಕಡೆ ಪೆಟ್ರೋಲ್ ಬಂಕ್‌ಗಳಿಗೆ ಹೋಗಿ ಡೀಸೆಲ್ ತುಂಬಿಸಲಾಗುತ್ತಿದೆ. ಸಂಚಾರ ದಟ್ಟಣೆ ಆಗದಂತೆ ನಿಗಾ ವಹಿಸಲಾಗಿದೆ. ಈ ಸಮಸ್ಯೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ಗಮನಕ್ಕೆ ತರಲಾಗಿದೆ' ಎಂದು ಹೇಳಿದರು.



## ಕರ್ನಾಟಕ ರೆಡ್ಡಿ ಜನ ಸಂಘದ ಸಂಸ್ಥಾಪಕರ ದಿನಾಚರಣೆ

# 'ಸಮುದಾಯದ ಏಳಿಗೆಗೆ ದುಡಿದವರ ಸ್ಮರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಡ್ಡಿ ಸಮುದಾಯದ ಏಳಿಗೆಗೆ ಶ್ರಮಿಸಿದ ಸಂಸ್ಥಾಪಕರನ್ನು ಸ್ಮರಿಸಬೇಕು. ಜೊತೆಗೆ ಮುಂದಿನ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಕರೆ ನೀಡಿದರು.

ಕೋರಮಂಗಲದ ವೇಮನ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸೋಮವಾರ ನಡೆದ 'ಕರ್ನಾಟಕ ರೆಡ್ಡಿ ಜನ ಸಂಘದ ಸಂಸ್ಥಾಪಕರ ದಿನಾಚರಣೆ ಸಮಾರಂಭ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಘದ ಆಡಳಿತ ಮಂಡಳಿಗೆ ಇವರೆಗೂ ಚುನಾವಣೆ ನಡೆಯದೇ ಅವಿರೋಧವಾಗಿ ಆಯ್ಕೆ ಮಾಡುತ್ತಿರುವುದು ಸಮುದಾಯದಲ್ಲಿರುವ ಸಮನ್ವಯತೆಗೆ ಸಾಕ್ಷಿ ಎಂದು ಹೇಳಿದರು.



ಕರ್ನಾಟಕ ರೆಡ್ಡಿ ಜನ ಸಂಘದ ಸಂಸ್ಥಾಪಕರ ದಿನಾಚರಣೆ ಸಮಾರಂಭದಲ್ಲಿ ಸಂಘದ ಸಂಸ್ಥಾಪಕರ ಕುಟುಂಬದವರನ್ನು ಸನ್ಮಾನಿಸಲಾಯಿತು

1919ರಲ್ಲಿ ರೆಡ್ಡಿ ಸಮುದಾಯದ ವಿದ್ಯಾರ್ಥಿಗಳಿಗೆ ವಸತಿನಿಲಯ ಸ್ಥಾಪಿಸಿ, ಸಂಘ ಪ್ರಾರಂಭವಾಗಿತ್ತು. 1925ರಲ್ಲಿ ಜಂಗಮ ಸುಬ್ಬಾರೆಡ್ಡಿ, ಎಲ್.ರಾಮಸ್ವಾಮಿ ರೆಡ್ಡಿ, ಬಿ.ವಿ.ನಾರಾಯಣ ರೆಡ್ಡಿ, ಎಸ್.ಲಕ್ಷ್ಮಯ್ಯ ರೆಡ್ಡಿ, ಎಸ್.ರಾಮಯ್ಯ ರೆಡ್ಡಿ, ಅಣ್ಣಯ್ಯ ರೆಡ್ಡಿ, ಹನುಮಪ್ಪ ರೆಡ್ಡಿ, ಮಂಡಿ ರೆಡ್ಡಿ ಕೊಂಡಪ್ಪ ಪರಿಶ್ರಮದಿಂದ ರೆಡ್ಡಿ ಜನಸಂಘ ಅಸ್ತಿತ್ವಕ್ಕೆ ಬಂದಿತ್ತು ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ರೆಡ್ಡಿ ಜನಸಂಘದ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಸಂಘದ ಸಂಸ್ಥಾಪಕರ ಕುಟುಂಬದವರನ್ನು ಸನ್ಮಾನಿಸಲಾಯಿತು.

ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಸತೀಶ್ ರೆಡ್ಡಿ, ಶಾಸಕ ಶಿವಶಂಕರ್ ರೆಡ್ಡಿ, ದೊಡ್ಡನಗೌಡ ಪಾಟೀಲ್, ರಾಮಚಂದ್ರರೆಡ್ಡಿ, ಜ್ಯೋತಿ ರೆಡ್ಡಿ, ರೆಡ್ಡಿ ಜನಸಂಘದ ಅಧ್ಯಕ್ಷ ಎಸ್.ಜಯರಾಮ ರೆಡ್ಡಿ ಮತ್ತಿತರರು ಇದ್ದರು.

## ಬಿಬಿಎಂಪಿ ವಾರ್ಡ್ ಮರುವಿಂಗಡಣೆ

# ಆರ್.ಆರ್. ನಗರದಲ್ಲೇ ಇತಿಹಾಸ ಪುರುಷರು ಹೆಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ಕ್ಷೇತ್ರದಲ್ಲೇ ಹೆಚ್ಚು ಇತಿಹಾಸ ಪುರುಷರಿದ್ದಾರೆ! ಹೌದು, ಬಿಬಿಎಂಪಿ ವಾರ್ಡ್ ಮರುವಿಂಗಡಣೆ ವೇಳೆ ಇತಿಹಾಸ ಪುರುಷರ ಹೆಸರಿರುವ ವಾರ್ಡ್‌ಗಳೆಲ್ಲವೂ ಬಹುತೇಕ ಇದೇ ಕ್ಷೇತ್ರದಲ್ಲಿಯೇ ಇವೆ.

ಈ ಹಿಂದೆ ಇದ್ದ ಜಾಲಹಳ್ಳಿ ವಾರ್ಡ್ ಈಗ ಕನ್ನೇಶ್ವರರಾಮ ಎಂದೂ, ಜೆ.ಪಿ. ಪಾರ್ಕ್ ವಾರ್ಡ್ ವೀರಮದಕರಿ ಎಂದೂ ಬದಲಾಗಿದೆ. ಯಶವಂತಪುರ ವಾರ್ಡ್ ಈಗ ಜೆ.ಪಿ. ಪಾರ್ಕ್ ಆಗಿದ್ದು, ಭೌತಿಕವಾಗಿ ಜೆ.ಪಿ.ಪಾರ್ಕ್ ಕೂಡ ಇದೇ ವಾರ್ಡ್‌ಗೆ ಸೇರ್ಪಡೆಯಾಗಿದೆ.

ಲಕ್ಷ್ಮಿದೇವಿನಗರ ವಾರ್ಡ್‌ಗೆ ಚಾಣಕ್ಯ, ಲಗ್ಗೆರೆ ವಾರ್ಡ್‌ಗೆ ಛತ್ರಪತಿ ಶಿವಾಜಿ, ಹೊಸ ವಾರ್ಡ್‌ಗಳಿಗೆ ರಣಧೀರ ಕಂಠೀರವ, ವೀರ ಸಿಂಧೂರ ಲಕ್ಷ್ಮಣ, ವಿಜಯನಗರ ಕೃಷ್ಣದೇವರಾಯ, ಸರ್ ಎಂ.ವಿಶ್ವೇಶ್ವರಯ್ಯ, ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರುಗಳನ್ನು ಇಡಲಾಗಿದೆ. ಇವೆಲ್ಲವೂ ಇದೇ ಕ್ಷೇತ್ರದಲ್ಲಿ ಇರುವುದು ವಿಶೇಷ.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲೂ ಚಿಕ್ಕಲಸಂದ್ರ ವಾರ್ಡ್ ಹೆಸರು ವಿಕ್ರಮನಗರ ಎಂದೂ ಬದಲಾಗಿದೆ. ಹೊಸದಾಗಿ ಸೇರ್ಪಡೆಯಾಗಿರುವ ವಾರ್ಡ್‌ವೊಂದಕ್ಕೆ ದೀನ್ ದಯಾಳು ವಾರ್ಡ್ ಎಂದು ಹೆಸರಿಸಲಾಗಿದೆ.

ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿ ಈ ಹಿಂದೆ ಇದ್ದ ವಾರ್ಡ್‌ಗಳ ಚಿತ್ರಣವೂ ಸಂಪೂರ್ಣ ಬದಲಾಗಿದೆ. ಛತ್ರಪತಿ ಶಿವಾಜಿ ವಾರ್ಡ್, ಜೆ.ಪಿ. ಪಾರ್ಕ್ ವಾರ್ಡ್‌ಗಳ ನಕ್ಷೆ ನೋಡಿದರೆ ಚಿತ್ರ-ವಿಚಿತ್ರವಾಗಿ ವಿಂಗಡಣೆ ಆಗಿರುವುದು ಗೊತ್ತಾಗುತ್ತದೆ.

### ವಾರ್ಡ್ ವೀಕ್ಷಣೆ ಸುಲಭವಲ್ಲ

ವಾರ್ಡ್ ವಿಂಗಡಣೆಯ ನಕ್ಷೆ ಸಹಿತ ಸಂಪೂರ್ಣ ಮಾಹಿತಿಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದೆ. ಆದರೆ, ಅಲ್ಲಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಇಲ್ಲ. ಜತೆಗೆ ವೀಕ್ಷಣೆ ಮಾಡಬೇಕೆಂದರೆ ತಿಣುಕಾಡಬೇಕಾಗಿದೆ.

ಲ್ಯಾಪ್‌ಟಾಪ್ ಅಥವಾ ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳಲ್ಲಿ ಮಾತ್ರ ವೀಕ್ಷಣೆಗೆ ಅವಕಾಶ ಇದೆ. ಮೊಬೈಲ್ ಫೋನ್‌ನಲ್ಲಿ ವೀಕ್ಷಣೆ ಮಾಡಲು ಮುಂದಾದರೆ, ಕ್ಷೇತ್ರವಾರು, ವಾರ್ಡ್‌ವಾರು ಮಾಹಿತಿಯೇ ಲಭ್ಯವಾಗುವುದಿಲ್ಲ.

### ವೆಬ್‌ಸೈಟ್‌ನಲ್ಲಿ ಆಕ್ಷೇಪಣೆಗೆ ಅವಕಾಶ ಬೇಕು

ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆಯ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಆನ್‌ಲೈನ್‌ನಲ್ಲೂ ಅವಕಾಶ ಕಲ್ಪಿಸಬೇಕು ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ ಒತ್ತಾಯಿಸಿದೆ.

ಕೆಲವೆಡೆ ವಾರ್ಡ್‌ನ ಹೆಸರು ಮತ್ತು ಮರುವಿಂಗಡಣೆಯಲ್ಲಿ ಲೋಪಗಳು ಆಗಿವೆ. ಈ ಬಗ್ಗೆ ಆಕ್ಷೇಪಣೆ ಸಲ್ಲಿಸಲು ವಿಕಾಸಸೌಧಕ್ಕೆ ಹೋಗಬೇಕಾದ ಅನಿವಾರ್ಯ ಇದೆ. ಅದರ ಬದಲು ಆನ್‌ಲೈನ್‌ನಲ್ಲೂ ಅವಕಾಶ ಲಭ್ಯವಾಗುವಂತೆ ಮಾಡಬೇಕು ಎಂದು ವೇದಿಕೆ ಅಧ್ಯಕ್ಷ ಬಿ.ಎಂ. ಶಿವಕುಮಾರ್ ಮನವಿ ಮಾಡಿದ್ದಾರೆ.







## ಕೋವಿಡ್: ಸಕ್ರಿಯ ಪ್ರಕರಣ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ 617 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಆದರೆ, ಸಕ್ರಿಯ ಪ್ರಕರಣಗಳು 4,288ಕ್ಕೆ ಇಳಿಕೆಯಾಗಿವೆ.

ಸೋಂಕು ದೃಢ ಪ್ರಮಾಣ ಶೇ 3.12ರಷ್ಟು ವರದಿಯಾಗಿದೆ. ಬೆಂಗಳೂರು ನಗರದಲ್ಲಿ 592 ಮಂದಿ ಸೋಂಕಿತರಾಗಿದ್ದಾರೆ.

## ನಗರದಲ್ಲಿ ಇಂದು

**1 ಲಕ್ಷ ಉಚಿತ ನೋಟ್‌ಬುಕ್ ವಿತರಣಾ ಕಾರ್ಯಕ್ರಮ:** ಅಧ್ಯಕ್ಷತೆ: ಆರ್. ಅಶೋಕ್, ಅತಿಥಿಗಳು: ತಿಪ್ಪೇಸ್ವಾಮಿ, ಡಾ.ಸಿ.ಎನ್. ಮಂಜುನಾಥ್, ತೇಜಸ್ವಿ ಸೂರ್ಯ, ಸತೀಶ್.ರೆಡ್ಡಿ.ಎಂ., ಎಂ.ಕೃಷ್ಣಪ್ಪ, ಉದಯ ಬಿ. ಗರುಡಾಚಾರ್, ಮಸಾಲ ಜಯರಾಮ್, ತೇಜಸ್ವಿನಿ ಅನಂತಕುಮಾರ್, ಎನ್.ಆರ್. ರಮೇಶ್, ಸಿ.ಕೆ. ರಾಮಮೂರ್ತಿ, ಆಯೋಜನೆ: ರಕ್ಷಾ ಫೌಂಡೇಷನ್, ಸ್ಥಳ: ಚಂದ್ರಗುಪ್ತ ಮೌರ್ಯ(ಶಾಲಿನಿ) ಆಟದ ಮೈದಾನ, ಜಯನಗರ, ಬೆಳಿಗ್ಗೆ 9.30

**ಡಾ.ಜೆ. ಶ್ರೀನಿವಾಸಮೂರ್ತಿ ಅಭಿನಂದನಾ ಕಾರ್ಯಕ್ರಮ:** ಅತಿಥಿಗಳು: ಎಚ್.ಎಸ್. ಶಿವಪ್ರಕಾಶ್, ಡಾ.ಕೆ.ವಿ.ನಾರಾಯಣ, ಎಚ್.ಎಸ್.ವೇಣುಗೋಪಾಲ್, ವಿಜಯಾ, ಸುರೇಶ ಆನಗಳ್ಳಿ, ಭೀಮಸೇನ, ರಾ.ನಂ.ಚಂದ್ರಶೇಖರ, ಶೋಭಾ, ಎಚ್. ಎಸ್.ರಾಘವೇಂದ್ರ ರಾವ್, ಜಿ.ಎನ್. ಮೋಹನ್, ಹಾ.ಸಾ.ಕೃ., ಕಾ.ತ.ಚಿಕ್ಕಣ್ಣ, ಎಂ.ಆರ್. ಸತ್ಯನಾರಾಯಣ, ಆಯೋಜನೆ: ಸಮಸ್ತರು ರಂಗ ಸಂಶೋಧನಾ ಕೇಂದ್ರ, ಬೆಂಗಳೂರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 10



ಡಾ.ಸಿ.ಎನ್. ಮಂಜುನಾಥ್













## ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಆರಂಭ

ಬೆಂಗಳೂರು: ರಾಜ್ಯದಾದ್ಯಂತ 2021-22ನೇ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಸೋಮವಾರ ಆರಂಭವಾಗಿದೆ.

ಸೋಮವಾರ ನಡೆದ ವಿಜ್ಞಾನ ವಿಷಯದ ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದವರ ಪೈಕಿ 36,265 (ಶೇ 84.22) ವಿದ್ಯಾರ್ಥಿಗಳು ಹಾಜರಾಗಿದ್ದಾರೆ ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ತಿಳಿಸಿದೆ.

ವಿಜ್ಞಾನ ವಿಷಯದ ಪರೀಕ್ಷೆಗೆ 28,184 ರೆಗ್ಯೂಲರ್ ವಿದ್ಯಾರ್ಥಿಗಳು, 14,878 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿ ಒಟ್ಟು 43,062 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಆ ಪೈಕಿ, 3,297 ರೆಗ್ಯೂಲರ್, 3,500 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿ ಒಟ್ಟು 6,797 ವಿದ್ಯಾರ್ಥಿಗಳು ಗೈರಾಗಿದ್ದಾರೆ.

'15 ವಿದ್ಯಾರ್ಥಿಗಳು ಅನಾರೋಗ್ಯ ಕಾರಣದಿಂದ ವಿಶೇಷ ಕೊಠಡಿಯಲ್ಲಿ ಪರೀಕ್ಷೆ ಬರೆದಿದ್ದಾರೆ. ಯಾವುದೇ ಕೋವಿಡ್ ಪ್ರಕರಣ ದಾಖಲಾಗಿಲ್ಲ' ಎಂದೂ ಮಂಡಳಿ ಮಾಹಿತಿ ನೀಡಿದೆ.

ರಾಜ್ಯದಾದ್ಯಂತ 423 ಕೇಂದ್ರಗಳಲ್ಲಿ ಪೂರಕ ಪರೀಕ್ಷೆ ನಡೆಯುತ್ತಿದೆ. ಒಟ್ಟು 11,415 ಶಾಲೆಗಳಿಂದ, 63,363 ವಿದ್ಯಾರ್ಥಿಗಳು, 31,283 ವಿದ್ಯಾರ್ಥಿನಿಯರು,ಮೂವರು ತೃತೀಯ ಲಿಂಗಿಗಳು ಸೇರಿ ಒಟ್ಟು 94,649 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ.

## ಬೇಡಿಕೆ ಈಡೇರಿಕೆಗೆ ಹಕ್ಕಿಪಿಕ್ಕಿ ಸಂಘಟನೆ ಆಗ್ರಹ

ಬೆಂಗಳೂರು: ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಹಕ್ಕಿಪಿಕ್ಕಿ ಬುಡಕಟ್ಟು ಯುವ ಸಂಘಟನೆ ಒತ್ತಾಯಿಸಿದೆ.

'ರಾಜ್ಯದಲ್ಲಿ ಆದಿವಾಸಿ ಅಲೆಮಾರಿ ಬುಡಕಟ್ಟು ಜನಾಂಗ(ಪರಿಶಿಷ್ಟ ಪಂಗಡ)ಕ್ಕೆ ಸೇರಿದ 7 ಲಕ್ಷಕ್ಕೂ ಅಧಿಕ ಹಕ್ಕಿಪಿಕ್ಕಿಗಳಿದ್ದಾರೆ. ಈಗಲೂ ಅವರು ನಿರ್ಗತಿಕರಾಗಿದ್ದು, ಶಿಕ್ಷಣದಿಂದ ವಂಚಿತ ರಾಗಿ ಟೆಂಟುಗಳಲ್ಲಿ ಜೀವನ ನಡೆಸು ತ್ತಿದ್ದಾರೆ. ಮತ ಚಲಾವಣೆಗಷ್ಟೇ ಸಮುದಾಯದವರು ಸೀಮಿತರಾಗಿದ್ದೇವೆ' ಎಂದು ಸಂಘಟನೆ ಅಧ್ಯಕ್ಷ ಪುನೀತ್‌ಕುಮಾರ್ ಆರ್. ಆಕ್ರೋಶ ವ್ಯಕ್ತಪಡಿಸಿದರು.

'ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿದ್ದು, ನಾಗರಿಕ ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದೇವೆ. ಯಾವುದೇ ಸರ್ಕಾರಿ ಸೌಲಭ್ಯಗಳು ದೊರೆಯುತ್ತಿಲ್ಲ' ಎಂದು ಆರೋಪಿಸಿದರು.

'ರಾಜಧಾನಿಯಲ್ಲಿ ಹಕ್ಕಿಪಿಕ್ಕಿಗಳ ಭವನ ನಿರ್ಮಿಸಬೇಕು. ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ನಿಗಮ ಸ್ಥಾಪಿಸಿ, ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಶಾಲೆ ಮತ್ತು ವಸತಿ ನಿಲಯಗಳ ವ್ಯವಸ್ಥೆ ಕಲ್ಪಿಸಬೇಕು. ಹಕ್ಕಿಪಿಕ್ಕಿ ಸಮುದಾಯದ ಬಗ್ಗೆ ಸಂಶೋಧನೆ ನಡೆಸಲು ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಪೀಠ ಸ್ಥಾಪಿಸಬೇಕು. ಹಕ್ಕಿಪಿಕ್ಕಿ ಜನಾಂಗದ 'ವಾಗ್ರೀ ಬೋಲಿಯನ್ನು' ಸಂರಕ್ಷಿಸಿ ನಮ್ಮ ಸಂಸ್ಕೃತಿ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದರು.

ಗುರುಚರಣ್ ಸಮಿತಿ ವರದಿ • ಹೆಚ್ಚುವರಿ ಸಂಪನ್ಮೂಲ ಸಂಗ್ರಹಕ್ಕೆ ಸಲಹೆ

# ವಿದ್ಯುತ್ ಕಂಪನಿಗೆ 'ಕಾರ್ಪೊರೇಟ್ ಛಾಪು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ವಿದ್ಯುತ್ ಸರಬರಾಜು ಕಂಪನಿಗಳ ಸರ್ವಾಂಗೀಣ ಅಭಿವೃದ್ಧಿ ಕುರಿತು ಐಎಎಸ್ ಅಧಿಕಾರಿ ಗುರುಚರಣ್ ಅಧ್ಯಕ್ಷತೆಯ ಏಕಸದಸ್ಯ ಸಮಿತಿ ಮುಖ್ಯಮಂತ್ರಿಯವರಿಗೆ ಸೋಮವಾರ ವರದಿ ಸಲ್ಲಿಸಿದ್ದು, ಕಾರ್ಪೊರೇಟ್ ಮಾದರಿಯ ಆಡಳಿತ ಮತ್ತು ವೃತ್ತಿಪರತೆ ತರಲು 'ರಾಜ್ಯ ಇಂಧನ ಯೋಜನಾ ಮಂಡಳಿ' ಮತ್ತು 'ಇಂಧನ ನಿರ್ದೇಶನಾಲಯ' ಸ್ಥಾಪಿಸಬೇಕು ಎಂದು ಶಿಫಾರಸು ಮಾಡಿದೆ.

ಸ್ಟೇಟ್ ಲೋಡ್ ಡಿಸ್ಪ್ಯಾಚ್ ಸೆಂಟರ್ (ಎಸ್‌ಎಲ್‌ಡಿಸಿ) ಬಲಪಡಿಸಲು ಮತ್ತು ಹಣವನ್ನು ಉದ್ದೇಶಿತ ಕಾರ್ಯಕ್ರಮಗಳಿಗೇ ಬಳಸುವುದನ್ನು ಖಾತರಿ ಪಡಿಸಲು 'ಹೋಲ್ಡಿಂಗ್ ಕಂಪನಿ' ರಚಿಸಬೇಕು. ಎಲ್ಲ ಎಸ್ಕಾಂಗಳಲ್ಲಿ 'ಬಿಜಿನೆಸ್ ಪ್ಲಾನಿಂಗ್ ಯೂನಿಟ್'ಗಳನ್ನೂ ಸ್ಥಾಪಿಸಬೇಕು ಎಂದು ವರದಿಯಲ್ಲಿ ಹೇಳಿದೆ.

ವಿದ್ಯುತ್ ದರವನ್ನು ತರ್ಕಬದ್ಧವಾಗಿ ನಿರ್ಧರಿಸಲು ಯೋಜನೆ ರೂಪಿಸಬೇಕು. ವಿದ್ಯುತ್ ತೆರಿಗೆ, ಓಎ(ಓಪನ್ ಆಕ್ಸೆಸ್) ಬಳಕೆ, ಕ್ಯಾಪ್ಟಿವ್ ಬಳಕೆಯ ಮೇಲೆ ತೆರಿಗೆ ಹೆಚ್ಚಿಸುವುದಕ್ಕಾಗಿ 'ರೆಗ್ಯುಲೇಟರಿ ರೀಸರ್ಚ್ ಅಂಡ್ ಅನಾಲಿಸಿಸ್ ವಿಂಗ್' ಸ್ಥಾಪಿಸಬೇಕು, ಐಟಿ ಸೆಟ್‌ಗಳಿಗೆ ಮೀಟರ್‌ಗಳನ್ನು ಅಳವಡಿಸಬೇಕು ಎಂದೂ ಶಿಫಾರಸು ಮಾಡಿದೆ.

ವಿದ್ಯುತ್ ಕಂಪನಿಗಳು ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸುವ ಮೂಲ ಹಣಕಾಸಿನ ಸ್ವಾವಲಂಬನೆ ಸಾಧಿಸಲು ಸಲಹೆ ನೀಡಿದೆ. ವಿದ್ಯುತ್ ದರದ ವಿಷಯದಲ್ಲಿ ಮಧ್ಯ ಪ್ರವೇಶ ಮಾಡುವುದರಿಂದ ₹750 ಕೋಟಿ, ಆಡಳಿತಾತ್ಮಕ ಕ್ರಮಗಳಿಂದ ₹4,500 ಕೋಟಿ, ಕ್ಷಮತೆಯ ಕ್ರಮಗಳಿಂದ ₹400 ಕೋಟಿ, ಹೊಸ ಬಗೆಯ ಕ್ರಮಗಳಿಂದ ₹974 ಕೋಟಿ, ಈ ರೀತಿ ಒಟ್ಟು ₹6,624 ಕೋಟಿ ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಲು ಸಾಧ್ಯವೆಂದು ಹೇಳಿದೆ.

ಎಚ್‌ಟಿ ಬಳಕೆಗಾರರಿಗೆ 1000 ಮೆ.ವ್ಯಾ ವರೆಗಿನ ವಿದ್ಯುತ್ ಅನ್ನು ಯುನಿಟ್‌ಗೆ ₹5 ರಂತೆ (ರಿಯಾಯ್ತಿ ದರದಲ್ಲಿ) ಮಾರಾಟ ಮಾಡಬಹುದು, ಗೃಹ ಬಳಕೆಯ ಗ್ರಾಹಕರಿಗೆ ನೀಡುವ ಸಬ್ಸಿಡಿಯನ್ನು ಶೇ 40 ರಷ್ಟು ಇಳಿಕೆ ಮಾಡಬಹುದು, ನೀರು ಪೂರೈಕೆ ಮತ್ತು ಇತರ ಎಚ್‌ಟಿ ಬಳಕೆದಾರರಿಗೆ ನೀಡುತ್ತಿರುವ ಸಬ್ಸಿಡಿಯಲ್ಲಿ ಶೇ 50 ರಷ್ಟು ಕಡಿಮೆ ಮಾಡಬಹುದು. ಎಲ್‌ಟಿ ಕಮರ್ಷಿಯಲ್ ಶೇ 34 ರಿಂದ ಶೇ 30, ಎಚ್‌ಟಿ ಇಂಡಸ್ಟ್ರಿಯಲ್ ಗ್ರಾಹಕರಿಗೆ ಶೇ 26 ರಿಂದ ಶೇ 23 ಮತ್ತು ಎಚ್‌ಟಿ ಕಮರ್ಷಿಯಲ್ ಶೇ 71 ರಿಂದ ಶೇ 50 ಕ್ಕೆ ಇಳಿಸಬೇಕು ಎಂದೂ ಶಿಫಾರಸು ಮಾಡಿದೆ.



ವರದಿಯ ಕಡತ ಪ್ರದರ್ಶಿಸಿದ ಸರ್ಕಾರದ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮ, ಹೆಚ್ಚುವರಿ ಮುಖ್ಯಕಾರ್ಯದರ್ಶಿ ಕುಮಾರ್ ನಾಯಕ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಿವೃತ್ತ ಐಎಎಸ್ ಅಧಿಕಾರಿ ಗುರುಚರಣ್ ಮತ್ತು ಇಂಧನ ಸಚಿವ ವಿ.ಸುನಿಲ್ ಕುಮಾರ್ –ಪ್ರಜಾವಾಣಿ ಚಿತ್ರ

### ಇತರ ಪ್ರಮುಖ ಶಿಫಾರಸುಗಳು

- ನೀರಾವರಿ ಪಂಪ್‌ಸೆಟ್‌ಗಳನ್ನು ನಿಧಿಯ ಹೊಣೆಗಾರಿಕೆಯಾಗಿ (ಫಂಡೆಡ್ ಲಯಬಿಲಿಟಿ) ಪರಿವರ್ತಿಸಿದರೆ ರಾಜ್ಯ ಆಯವ್ಯಯದ ಮೇಲೆ ಹೊರೆ ಕಡಿಮೆ ಆಗುತ್ತದೆ.
- ಕೃಷಿ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಬೇಕು. ನಿಧಿಗೆ ಸಂಪನ್ಮೂಲ ಸಂಗ್ರಹಿಸಲು ಎಲ್ಲ ವಿಧದ ವಿದ್ಯುತ್ ಬಳಕೆದಾರರ ವಿದ್ಯುತ್ ತೆರಿಗೆಯ ಮೇಲೆ ಶೇ 10ರಷ್ಟು ವಿದ್ಯುತ್ ಸೆಸ್ ವಿಧಿಸಬೇಕು (10 ಎಚ್‌ಪಿ ಮತ್ತು ಅದಕ್ಕಿಂತ ಕಡಿಮೆ ಸಾಮರ್ಥ್ಯ ಐಪಿ ಸೆಟ್ ಬಳಕೆದಾರರಿಗೆ ಅನ್ವಯ ಆಗುವುದಿಲ್ಲ)
- ಕೃಷಿ ಉದ್ದೇಶದ ಫೀಡರ್‌ಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಬೇಕು.
- ಫಲಾನುಭವಿಗಳಿಗೆ ನೇರ ವರ್ಗಾವಣೆ (ಡಿಬಿಟಿ) ಯೋಜನೆಯನ್ನು ಜಾರಿಗೆ ತರಬೇಕು.
- ಪಿಎಂ ಕುಸುಮ್ ಯೋಜನೆಯನ್ನು ಜಾರಿ ಮಾಡಬೇಕು.

### ಸಮಿತಿ ಅವಧಿ ಮುಂದುವರಿಕೆ: ಬೊಮ್ಮಾಯಿ

ಈ ವರದಿಯ ಶಿಫಾರಸುಗಳ ಅನುಷ್ಠಾನದ ಸಂದರ್ಭದಲ್ಲಿ ಸಲಹೆ ಮತ್ತು ಮಾರ್ಗದರ್ಶನ ಪಡೆಯಲು ಗುರುಚರಣ್ ಸಮಿತಿಯ ಅವಧಿಯನ್ನು ವಿಸ್ತರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ವರದಿಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವಸ್ತುಸ್ಥಿತಿ, ಸುಧಾರಣೆಗಳ ಅಗತ್ಯತೆ ಮತ್ತು ಅನುಷ್ಠಾನ ಬಗ್ಗೆ ವಿವರವಾದ ವಿವರಣೆ ನೀಡುವುದರೊಂದಿಗೆ ರಚನಾತ್ಮಕ ಬದಲಾವಣೆ, ಮಧ್ಯಮ ಮತ್ತು ದೀರ್ಘಾವಧಿ ಸುಧಾರಣೆ ಬಗ್ಗೆ ವಿವರವಿದೆ. ಸುಧಾರಣಾ ಕಾರ್ಯಗಳನ್ನು ಜಾರಿಗೊಳಿಸಲು ವಿವರವಾಗಿ ಚರ್ಚಿಸಿ, ಕ್ರಿಯಾ ಯೋಜನೆ ರೂಪಿಸಬೇಕು ಎಂದು ಹೇಳಿದರು.

## ಅಧ್ಯಕ್ಷರಾಗಿ ಆಯ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್‌ನ 2022–24ನೇ ಸಾಲಿನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಸುಕುಮಾರ್.ಕೆ. ಆಯ್ಕೆಯಾಗಿದ್ದಾರೆ.



ಸುಕುಮಾರ್ ಕೆ.

ಚಂದ್ರಶೇಖರ್.ಎಸ್.ಸಿ.(ಉಪಾಧ್ಯಕ್ಷ), ಲಕ್ಷ್ಮೀಶಚಂದ್ರ(ಕಾರ್ಯದರ್ಶಿ), ವಿರೂಪಾಕ್ಷ ಬಿ.ಪಿ. (ಖಜಾಂಚಿ) ನೇಮಕವಾಗಿದ್ದಾರೆ. ಆಡಳಿತ ಮಂಡಳಿ ಸದಸ್ಯರಾಗಿ ಅನಿಲ್ ಕುಮಾರ್ ಬಿ.ಕೆ., ಗಜೇಂದ್ರಕುಮಾರ್ ಬಿ.ವಿ., ಡಾ.ಜಯಪ್ರಕಾಶ್.ಆರ್., ಮನೀಷ್.ಬಿ., ಪುರುಷೋತ್ತಮ್.ಎಂ.ಎಸ್., ಎಸ್.ರಾಜೇಂದ್ರ ಪ್ರಸಾದ್., ರವಿ.ಆರ್.ಗರಣಿ, ಆರ್.ಎಸ್. ಸತೀಶ್ ಬಾಬು, ವಿನಯ್.ಎಸ್.ಎಂ. ಚುನಾಯಿತರಾಗಿದ್ದಾರೆ ಎಂದು ವ್ಯವಸ್ಥಾಪಕ ಎಂ.ಅನಂತರಾಜು ತಿಳಿಸಿದ್ದಾರೆ.

## ಹದಗೆಟ್ಟ ರಸ್ತೆಗಳ ಗುರುತಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಾದ್ಯಂತ ಸಂಚಾರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿರುವುದರಿಂದ ವಿವಿಧ ಇಲಾಖೆಗಳ ಪ್ರತಿನಿಧಿಗಳು ಸೋಮವಾರ ಸಮನ್ವಯ ಸಭೆ ನಡೆಸಿದರು.

'ನಗರದ ವಿವಿಧ ಜಂಕ್ಷನ್‌ಗಳಲ್ಲಿ ವಾಹನ ಸಂಚಾರ ದಟ್ಟಣೆ ಆಗುತ್ತಿರುವುದಕ್ಕೆ ಕಾರಣಗಳೇನು ಎಂದು ಅರಿಯುವುದು ಸಭೆಯ ಉದ್ದೇಶವಾಗಿತ್ತು. ಹದಗೆಟ್ಟ ರಸ್ತೆಗಳು, ನೀರು ಸರಾಗವಾಗಿ ಹರಿಯದೇ ನಿಲ್ಲುವುದು.. ಇಂತಹ ಕೆಲವು ಪ್ರಮುಖ ಸಮಸ್ಯೆಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು' ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ತಿಳಿಸಿದರು.

'ಸಂಚಾರ ದಟ್ಟಣೆ ಸಮಸ್ಯೆಗೆ ಅಲ್ಪಾವಧಿ ಹಾಗೂ ದೀರ್ಘಾವಧಿ ಪರಿಹಾರೋಪಾಯಗಳನ್ನು ಚರ್ಚಿಸಲಾಯಿತು' ಎಂದು ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಅಲ್ಪಾವಧಿ ಪರಿಹಾರ ಯೋಜನೆಗಳನ್ನು ಇನ್ನೊಂದೆರಡು ವಾರಗಳಲ್ಲೇ ಜಾರಿಗೆ ತರುತ್ತೇವೆ. ದೀರ್ಘಾವಧಿ ಯೋಜನೆಗಳಿಗೆ ಆದಷ್ಟು ಬೇಗ ಟೆಂಡರ್ ಕರೆದು ಕಾಮಗಾರಿ ನಡೆಸಲು ಅನುಮತಿ ನೀಡಲಾಗುವುದು. ಸಣ್ಣಪುಟ್ಟ ಪರಿಹಾರೋಪಾಯಗಳಿಂದ ಸಂಚಾರ ದಟ್ಟಣೆ ಸಮಸ್ಯೆಯ ಶೇ 20ರಷ್ಟನ್ನು ಬಗೆಹರಿಸಬಹುದು' ಎಂದರು.

'ಬೆಂಗಳೂರು ಸಂಚಾರ ಪೊಲೀಸರು ಹದಗೆಟ್ಟ ರಸ್ತೆಗಳಿರುವ 54 ಜಾಗಗಳನ್ನು ಗುರುತಿಸಿದ್ದಾರೆ. ಈ ರಸ್ತೆಗಳನ್ನು ದುರಸ್ತಿಗೊಳಿಸಲಾಗುವುದು. ಎಷ್ಟು ರಸ್ತೆಗುಂಡಿಗಳಿವೆ ಎಂದು ಪಟ್ಟಿ ಕೊಡುವಂತೆ ಸಂಚಾರ ಪೊಲೀಸರನ್ನು ಕೇಳಿದ್ದೇವೆ. ಅದು ಲಭ್ಯವಾಗುತ್ತಿದ್ದಂತೆ ಗುಂಡಿ ಮುಚ್ಚುವ ಕಾಮಗಾರಿ ಪ್ರಾರಂಭಿಸಲಾಗುವುದು' ಎಂದೂ ಅವರು ತಿಳಿಸಿದರು.

ವಿವಿಧ ಇಲಾಖೆಗಳವರು ಟ್ರಾಫಿಕ್ ಸಮಸ್ಯೆ ಬಗೆಹರಿಸುವಲ್ಲಿ ಯಾವ ಯಾವ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂಬುದನ್ನೂ ಸಭೆಯಲ್ಲಿ ಚರ್ಚಿಸಲಾಯಿತು. ಬಿಬಿಎಂಪಿ ಹಾಗೂ ಬಿಡಿಎ ಟ್ರಾಫಿಕ್ ಸಮಸ್ಯೆ ಬಗೆಹರಿಸುವ ಮಾರ್ಗೋಪಾಯಗಳನ್ನು ಜಾರಿಗೆ ತರಲು ಗಡುವು ಹಾಕಿಕೊಳ್ಳಬೇಕು. ಜನಸಂಚಾರ ವ್ಯಾಪಕವಾಗಿರುವ ಹೊತ್ತಿನಲ್ಲಿ ವಾಹನ ಸಂಚಾರ ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಲು ಸಂಚಾರ ಪೊಲೀಸ್ ಇಲಾಖೆ ಹೆಚ್ಚುವರಿ ಟ್ರಾಫಿಕ್ ಪೊಲೀಸರನ್ನು ನಿಯೋಜಿಸಬೇಕು ಎಂದು ರಾಕೇಶ್ ಸಿಂಗ್ ಹೇಳಿದರು.

ಸಿಲ್ಕ್ ಬೋರ್ಡ್, ಕೆ.ಆರ್. ಪುರ, ಹೆಬ್ಬಾಳ ಜಂಕ್ಷನ್‌ಗಳನ್ನು ಮಂಗಳವಾರ ಅಧಿಕಾರಿಗಳು ಪರಿಶೀಲಿಸಲಿದ್ದಾರೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯೆಲ್ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಬಿಎಂಆರ್‌ಸಿಎಲ್ ಹಾಗೂ ಬೆಂಗಳೂರು ಪೊಲೀಸ್ ಇಲಾಖೆಯ ಪ್ರನಿತಿಧಿಗಳು ಇದ್ದರು.

ಲೋಕ ಅದಾಲತ್: 7 ಲಕ್ಷಕ್ಕೂ ಹೆಚ್ಚು ಪ್ರಕರಣ ವಿಲೇವಾರಿ

# ಮತ್ತೆ ಒಂದಾದ 80 ವರ್ಷ ಮೀರಿದ ದಂಪತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕಳೆದ ಐವತ್ತು ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದ 80 ವರ್ಷದ ದೂರುದಾರಾದ ವೃದ್ಧೆ ಹಾಗೂ 85 ವರ್ಷದ ವೃದ್ಧ ಎದುರುದಾರರು ಒಂದಾಗುವ ಮೂಲಕ ದಾಂಪತ್ಯ ಪುನರ್ ಸ್ಥಾಪಿಸಿಕೊಂಡಿರುವುದು ಈ ಬಾರಿಯ ಲೋಕ ಅದಾಲತ್ ವಿಶೇಷವಾಗಿದೆ' ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಬಿ.ವೀರಪ್ಪ ಬಣ್ಣಿಸಿದರು.

ಈ ಕುರಿತಂತೆ ಸೋಮವಾರ ಹೈಕೋರ್ಟ್‌ನಲ್ಲಿ ಮಾಧ್ಯಮಗೋಷ್ಠಿಯಲ್ಲಿ ವಿವರ ನೀಡಿದ ಅವರು, 'ಇದೇ 25ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ 7 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು, ಅವುಗಳಲ್ಲಿ ವಿಚಾರಣೆಗೆ ಬಾಕಿ ಇದ್ದ 2,64,464 ಹಾಗೂ 5,00,613 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ' ಎಂದು ತಿಳಿಸಿದರು.



ಮಾಧ್ಯಮ ಗೋಷ್ಠಿಯಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್‌.ಸುದರ್ಶನ ಶೆಟ್ಟಿ, ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಬಿ.ವೀರಪ್ಪ, ಉಪ ಕಾರ್ಯದರ್ಶಿ ಕಾವೇರಿ, ಬೆಂಗಳೂರು ನಗರ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಪುರುಷೋತ್ತಮ ಇದ್ದರು. ಪ್ರಜಾವಾಣಿ ಚಿತ್ರ

'ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ವೈವಾಹಿಕ ಪ್ರಕರಣಗಳನ್ನು ಹೆಚ್ಚು ಇತ್ಯರ್ಥಪಡಿಸುವಂತೆ ಉತ್ತೇಜಿಸಲಾಗಿತ್ತು. ಈ ದಿಸೆಯಲ್ಲಿ ಒಟ್ಟು 1,128 ವೈವಾಹಿಕ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. 107ಕ್ಕಿಂತಲೂ ಹೆಚ್ಚಿನ ಪ್ರಕರಣಗಳಲ್ಲಿ ರಾಜಿ ಸಂಧಾನದಿಂದ ದಂಪತಿ ಪುನಃ ಒಂದಾಗಿ ಜೀವನ ನಡೆಸಲು ತೀರ್ಮಾನಿಸಿದ್ದಾರೆ' ಎಂದು ಹೇಳಿದರು.

'ವಿಚ್ಛೇದನ ಬಯಸಿದ್ದ ಪ್ರಕರಣಗಳಲ್ಲಿ ಮೈಸೂರಿನ 40, ಬೆಂಗಳೂರಿನ 30 ಹಾಗೂ ಬೇರೆ ಬೇರೆ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ದಂಪತಿಗಳು ಲೋಕ ಅದಾಲತ್ ರಾಜಿ ಸಂಧಾನದ ಮೂಲಕ ಪುನಃ ಒಂದಾಗಿ ಜೀವನ ನಡೆಸಲು ಒಪ್ಪಿಕೊಂಡಿರುವುದು ಹೆಗ್ಗಳಿಕೆ' ಎಂದರು.

**ವಾಣಿಜ್ಯ ದಾವೆ:** 'ಬೆಂಗಳೂರಿನ ಎಂಟು ವಾಣಿಜ್ಯ ನ್ಯಾಯಾಲಯಗಳಲ್ಲಿ ಒಟ್ಟು 226 ದಾವೆಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿ ಪರಿಹಾರದ ಮೊತ್ತ ₹ 7.96 ಕೋಟಿ ಪಾವತಿಸಲಾಗಿದೆ' ಎಂದರು.

### ಡ್ರಾಮಾ ಜ್ಯೂನಿಯರ್‌ನಲ್ಲೂ ಅದಾಲತ್..!

'ಝೀ ಕನ್ನಡ ವಾಹಿನಿಯ ಡ್ರಾಮಾ ಜ್ಯೂನಿಯರ್ ಹೆಸರಿನ ರಿಯಾಲಿಟಿ ಶೋನಲ್ಲಿ ಮಕ್ಕಳಿಂದ ಲೋಕ ಅದಾಲತ್ ಕುರಿತು ಕಿರು ನಾಟಕ ಪ್ರದರ್ಶಿಸಲಾಗಿದೆ' ಎಂದು ನ್ಯಾ.ವೀರಪ್ಪ ತಿಳಿಸಿದರು.

'ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ನೀಡಲಾಗುವ ಟಿಕೆಟ್‌ಗಳಲ್ಲಿ ಅದಾಲತ್ ಕುರಿತ ಸಂದೇಶ ಮುದ್ರಿಸಲಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಅಳವಡಿಸಲಾಗಿರುವ ಎಲ್‌ಇಡಿ ಸ್ಕ್ರೀನ್‌ಗಳಲ್ಲಿ ಲೋಕ ಅದಾಲತ್ ಬ್ಯಾನರ್‌ಗಳನ್ನು ಪ್ರದರ್ಶಿಸಲಾಗಿದೆ. ಟೆಲಿಗ್ರಾಮ್ ಗ್ರೂಪ್ ಮತ್ತು ಕರ್ನಾಟಕ ರಾಜ್ ಕಾನೂನು ಸೇವೆಗಳ ಪ್ರಾಧಿಕಾರದ ಟೆಲಿಗ್ರಾಮ್ ಚಾನೆಲ್ ರೂಪಿಸಲಾಗಿದೆ' ಎಂದರು

ವಿಚಾರ ಸಂಕಿರಣದಲ್ಲಿ ರವಿವರ್ಮ ಕುಮಾರ್ ಆತಂಕ

# ಒಕ್ಕೂಟ ವ್ಯವಸ್ಥೆ ನಾಶಕ್ಕೆ ಹುನ್ನಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆಯನ್ನೇ ನಾಶಪಡಿಸುವ ಹುನ್ನಾರ ನಡೆಸುತ್ತಿದೆ' ಎಂದು ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯದ ವ್ಯವಸ್ಥಾಪಕ ಟ್ರಸ್ಟಿ ಮತ್ತು ಹಿರಿಯ ವಕೀಲ ರವಿವರ್ಮ ಕುಮಾರ್ ಆತಂಕ ವ್ಯಕ್ತಪಡಿಸಿದರು.

ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯದಿಂದ ಶನಿವಾರ ನಗರದಲ್ಲಿ ಆಯೋಜಿಸಿದ್ದ 'ತುರ್ತು ಪರಿಸ್ಥಿತಿ ನೆನಪಿನಲ್ಲಿ ಸಂವಿಧಾನ ಅವಲೋಕನ' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

'ರಾಷ್ಟ್ರದಲ್ಲಿ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತಿದೆ. ತುರ್ತು ಪರಿಸ್ಥಿತಿಗಿಂತಲೂ ಈಗಿನ ಕಾಲ ಭೀಕರವಾಗಿದೆ. ಬಿಜೆಪಿ ಇತಿಹಾಸವನ್ನೇ ಬಿಡುಮೇಲು ಮಾಡುತ್ತಿದೆ. ಮುಂದಿನ ರಾಷ್ಟ್ರಪತಿ ಅಭ್ಯರ್ಥಿಯನ್ನು ರಬ್ಬರ್ ಸ್ಟ್ಯಾಂಪ್ ಮಾಡಿಕೊಳ್ಳಲು ಆಯ್ಕೆ ಮಾಡಿಕೊಂಡಂತೆ ಕಾಣಿಸುತ್ತಿದೆ' ಎಂದರು.



ವಿಚಾರ ಸಂಕಿರಣದಲ್ಲಿ ಹಿರಿಯ ವಕೀಲ ಪ್ರೊ.ರವಿವರ್ಮಕುಮಾರ್ ಮಾತನಾಡಿದರು. (ಕುಳಿತವರು ಎಡದಿಂದ) ಹೈಕೋರ್ಟ್ ನಿವೃತ್ತ ನ್ಯಾಯಾಮೂರ್ತಿ ಎಚ್‌.ಎನ್‌. ನಾಗಮೋಹನದಾಸ್, ಅಮೃತ ಭೂಮಿ ಇಂಟರ್‌ನ್ಯಾಷನಲ್ ಸೆಂಟರ್ ನಿರ್ವಾಹಕ ನಿರ್ದೇಶಕಿ ಚುಕ್ಕಿ ನಂಜುಂಡಸ್ವಾಮಿ, ಚಿಂತಕ ಪ.ಮಲ್ಲೇಶ್, ಮಂಗ್ಳೂರು ವಿಜಯ ಇದ್ದಾರೆ ಪ್ರಜಾವಾಣಿ ಚಿತ್ರ

ಚಿಂತಕ ಪ.ಮಲ್ಲೇಶ್ ಮಾತನಾಡಿ, 'ಇಷ್ಟು ದಿವಸ ಜನರ ತಲೆಗೆ ಕೈಹಾಕಿದ್ದ ಮೋದಿ, ಜಿಎಸ್‌ಟಿ ಜಾರಿಗೊಳಿಸಿ ಜನರ ಜೇಬಿಗೂ ಕೈಹಾಕಿದ್ದಾರೆ. ಬಿಜೆಪಿ ಆಡಳಿತದಿಂದ ಇಡೀ ದೇಶದಲ್ಲಿ ತಲ್ಲಣದ ವಾತಾವರಣ ಇದೆ. ಪಠ್ಯಪುಸ್ತಕ ಪರಿಷ್ಕರಣೆಯ ನೆಪದಲ್ಲಿ ಎಳೆಯ ಮಕ್ಕಳ ಮೇಲೆ ಹಿಂದುತ್ವದ ಹೇರುವ ಹುನ್ನಾರ ನಡೆಯುತ್ತಿದೆ' ಎಂದು ದೂರಿದರು.

ಹೈಕೋರ್ಟ್‌ನಿವೃತ್ತನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಮಾತನಾಡಿದರು. ಚಾಮರಾಜನಗರ ಅಮೃತಭೂಮಿ ಇಂಟರ್‌ನ್ಯಾಷನಲ್ ಸೆಂಟರ್‌ನ ನಿರ್ದೇಶಕಿ ಚುಕ್ಕಿ ನಂಜುಂಡಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

## ಕ್ಷಮೆ ಕೇಳಿದ ನಿರ್ದೇಶಕ

**ಬೆಂಗಳೂರು:** ಇತ್ತೀಚೆಗೆ ಯೂಟ್ಯೂಬ್‌ನಲ್ಲಿ ಬಿಡುಗಡೆಯಾದ 'ಬ್ರ್ಯಾಂಡೆಡ್ ಭಾಗ್ಯಮ್ಮ' ಕಿರುಚಿತ್ರದ ಅಂತ್ಯದಲ್ಲಿ ಕೊರಮ ಜನಾಂಗದ ಬಗ್ಗೆ ಅವಹೇಳನ ಮಾಡಲಾಗಿದೆ ಎಂದು ಕೊರಮ ಜನಾಂಗದವರು ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಕಾರಣ ಕಿರುಚಿತ್ರದ ನಿರ್ದೇಶಕ ಅಮಿತ್ ರಾಜ್ ಸೋಮವಾರ ಕ್ಷಮೆಯಾಚಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮಿತ್ ರಾಜ್, 'ಆ ಸಂದರ್ಭದಲ್ಲಿ ಉಪಯೋಗವಾದ ಕೊರಮ ಎಂಬ ಪದದ ಹೆಸರಿನಲ್ಲಿ ಒಂದು ಜನಾಂಗ (ಸಮಾಜ) ಇದೆ ಎಂಬುದು ನಮ್ಮ ಅರಿವಿಗೆ ಬಂದಿರಲಿಲ್ಲ. ಯಾವುದೇ ಜನಾಂಗವನ್ನು ಕೀಳುಮಟ್ಟದಲ್ಲಿ ಬಿಂಬಿಸುವುದು ನಮ್ಮ ಉದ್ದೇಶವಲ್ಲ. ಈ ಪದ ಪ್ರಯೋಗದಿಂದ ಅವಮಾನವಾಗಿದೆ ಎಂದು ಕೊರಮ ಸಮಾಜದವರು ಮನದಟ್ಟು ಮಾಡಿದ್ದಾರೆ. ವಿಡಿಯೋದಲ್ಲಿರುವ ಕೊರಮ ಎಂಬ ಪದವನ್ನು ಕೇಳದಂತೆ 'ಮ್ಯೂಟ್' ಮಾಡಲಾಗಿದೆ. ಇಡೀ ಕೊರಮ ಸಮಾಜಕ್ಕೆ ಕ್ಷಮೆಯಾಚಿಸುತ್ತಿದ್ದೇನೆ' ತಿಳಿಸಿದರು.

ಎಲ್ಲಾ ಕಡೆ ಸಿಸಿಟಿವಿ ಕ್ಯಾಮೆರಾ, ಪ್ಯಾನಿಕ್ ಬಟನ್ ಅಳವಡಿಕೆ: ಸುರಕ್ಷತೆ, ಸ್ವಚ್ಛತೆಗೂ ಆದ್ಯತೆ

# ಪಾದಚಾರಿ ಸುರಂಗ ಮಾರ್ಗ ಇನ್ನು ಜನಸ್ನೇಹಿ

• ವಿಜಯಕುಮಾರ್ ಎಸ್.ಕೆ.



ಪಾದಚಾರಿ ಸುರಂಗ ಮಾರ್ಗದಲ್ಲಿ ಗೃಹ ರಕ್ಷಕ ಸಿಬ್ಬಂದಿಯ ಕಾವಲು —ಪ್ರಜಾವಾಣಿ ಚಿತ್ರ/ರಂಜು ಪಿ.

**ಬೆಂಗಳೂರು:** ಕತ್ತಲೆಯ ಗವಿಗಳಾಗಿ ಇತಿಹಾಸದ ಪುಟ ಸೇರಿದ್ದ ಪಾದಚಾರಿ ಸುರಂಗ ಮಾರ್ಗಗಳ ಚಿತ್ರಣ ಬದಲಿಸುವ ಕಾರ್ಯವನ್ನು ಬಿಬಿಎಂಪಿ ಕೈಗೊಂಡಿದ್ದು, ನವೀಕರಣಗೊಳಿಸಿ ಜನಸ್ನೇಹಿ ಆಗಿಸುತ್ತಿದೆ.

ಒಂದಿಲ್ಲೊಂದು ಕಾರಣಕ್ಕೆ ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸಲು ಸಿಲಿಕಾನ್ ಸಿಟಿಯ ಜನರು ನಿತ್ಯ ತಿಣುಕಾಡುತ್ತಾರೆ. ವಾಹನ ಸವಾರರಿಗೆ ತಮ್ಮ ಗುರಿ ತಲುಪುವ ಅವಸರವಾದರೆ, ಪಾದಚಾರಿಗಳಿಗೆ ರಸ್ತೆ ದಾಟುವ ಧಾವಂತ.

ವಾಹನ ಸಂಚಾರ ಕಡಿಮೆ ಇರುವಾಗ ಧೈರ್ಯ ಮಾಡಿ ರಸ್ತೆ ದಾಟೋಣವೆಂದರೆ ಅದಕ್ಕೂ ಅಡ್ಡಿಗಳಿವೆ. ರಸ್ತೆ ವಿಭಜಕಗಳನ್ನು ಎಲ್ಲೆಡೆ ಎದೆ ಮಟ್ಟಕ್ಕೆ ಎತ್ತರಿಸಲಾಗಿದ್ದು, ಅವುಗಳನ್ನು ದಾಟುವುದು ಅಸಾಧ್ಯ. ರಸ್ತೆ ದಾಟಲು ಯೂಟರ್ನ್ ಕ್ರಾಸಿಂಗ್ ತಲುಪಲು ಕಿಲೋ ಮೀಟರ್‌ಗಟ್ಟಲೆ ನಡೆದು ಹೋಗಬೇಕು. ಹಸಿರು ದೀಪ ಮಿನುಗುವವರೆಗೆ ಅಲ್ಲಿ ಕಾದು ನಿಲ್ಲಬೇಕು.

ಪಾದಚಾರಿಗಳಿಗೆ ಮತ್ತು ವಾಹನ ಸವಾರರಿಗೆ ಕಿರಿಕಿರಿ ಆಗದಂತೆ ಪಾಲಿಕೆ ಅಲ್ಲಲ್ಲಿ ಪಾದಚಾರಿ ಸುರಂಗ ಮಾರ್ಗಗಳನ್ನು (ಸಬ್‌ವೇ) ನಿರ್ಮಿಸಿದೆ. ಆದರೆ, ನಿರ್ವಹಣೆ ಇಲ್ಲದೇ ಈ ಸುರಂಗ ಮಾರ್ಗಗಳು ಅವ್ಯವಸ್ಥೆಯ ಗೂಡಾಗಿದ್ದವು. ಅನೈತಿಕ ಚಟುವಟಿಕೆಯ ತಾಣವಾಗಿ ಬದಲಾಗಿದ್ದವು. ಅದ್ದರಿಂದ ಹಲವು ಸುರಂಗ ಮಾರ್ಗಗಳಿಗೆ ಬೀಗ ಜಡಿಯಲಾಗಿತ್ತು.

ಅನುಪಯುಕ್ತವಾಗಿದ್ದ ಈ ಪಾದಚಾರಿ ಮಾರ್ಗಗಳ ಸುಧಾರಣೆಗೆ ಸರ್ಕಾರದ ಈ ಹಿಂದಿನ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಬಿಬಿಎಂಪಿಗೆ ಸೂಚನೆ ನೀಡಿದ್ದರು. ಫೆಬ್ರುವರಿಯಲ್ಲಿ ಉನ್ನತಾಧಿಕಾರಿಗಳ ಸಭೆಯಲ್ಲಿ ಅವರು ಈ ಮಾರ್ಗಗಳನ್ನು ಜನಸ್ನೇಹಿಯಾಗಿಸಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

ಪರಿಣಾಮವಾಗಿ ಈಗ ಧರ್ಮಾಂಬುಧಿ ರಸ್ತೆ, ಸುಬೇದಾರ ಛತ್ರಂ ರಸ್ತೆ, ಶೇಷಾದ್ರಿ ರಸ್ತೆ, ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಸಂಚಿರಿ ಕ್ರಾಸ್, ರಾಜಭವನ ರಸ್ತೆ, ಬಸವೇಶ್ವರ ವೃತ್ತ, ಹೆಬ್ಬಾಳ, ಬಳ್ಳಾರಿ ರಸ್ತೆಯ ಆನಂದನಗರ, ಸಂಪಿಗೆ ರಸ್ತೆ, ಕಾರ್ಡ್ ರಸ್ತೆ, ಎಸ್.ಆರ್. ರಸ್ತೆ ಮತ್ತು ರಾಜ್‌ಕುಮಾರ್ ಸಮಾಧಿ ರಸ್ತೆಯಲ್ಲಿನ ಸುರಂಗ ಮಾರ್ಗಗಳು ಗೃಹ ರಕ್ಷಕ ಸಿಬ್ಬಂದಿ ಕಾವಲಿನ ಜತೆಗೆ ಪಾದಚಾರಿ ಸ್ನೇಹಿಯಾಗಿ ಮಾರ್ಪಟ್ಟಿವೆ.

ಬಿಬಿಎಂಪಿ ಮೂಲಸೌಕರ್ಯ ವಿಭಾಗದಿಂದ ನವೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ₹63 ಲಕ್ಷ ವೆಚ್ಚದಲ್ಲಿ ಪ್ರತಿ ಸುರಂಗ ಮಾರ್ಗಕ್ಕೆ ತಲಾ ಎರಡು ಸಿಸಿಟಿವಿ ಕ್ಯಾಮೆರಾ ಮತ್ತು ಆತಂಕದ ಪರಿಸ್ಥಿತಿಯಲ್ಲಿ ಒತ್ತಬಹುದಾದ ಗುಂಡಿ (ಪ್ಯಾನಿಕ್ ಬಟನ್) ಅಳವಡಿಸಲಾಗಿದೆ. ಮಳೆ ಬಂದಾಗ ನೀರು ತುಂಬಿಕೊಂಡರೆ ಕೂಡಲೇ ಹೊರಹಾಕುವುದೂ ಸೇರಿ ನಿರಂತರವಾಗಿ ಸ್ವಚ್ಛಗೊಳಿಸಲು ಸಿಬ್ಬಂದಿಯನ್ನೂ ಬಿಬಿಎಂಪಿ ನಿಯೋಜಿಸಿಕೊಂಡಿದೆ.

ಬೆಳಿಗ್ಗೆ 7ರಿಂದ ರಾತ್ರಿ 9.30ರ ತನಕ ಈ ಪಾದಚಾರಿ ಸುರಂಗ ಮಾರ್ಗಗಳು ತೆರೆದಿರಲಿವೆ. ಈ ಸಂದರ್ಭದಲ್ಲಿ ಪಾದಚಾರಿಗಳ ಸುರಕ್ಷತೆ ಒದಗಿಸಲು ಗೃಹ ರಕ್ಷಕ ಸಿಬ್ಬಂದಿ ಎರಡು ಪಾಳಿಯಲ್ಲಿ ಕಾವಲಿದ್ದಾರೆ. ಗೃಹ ರಕ್ಷಕ ಸಿಬ್ಬಂದಿ ಬದಲಿಗೆ ಕೆಲವೆಡೆ ಖಾಸಗಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲಾಗಿದೆ.

'ಸುರಂಗ ಮಾರ್ಗಗಳನ್ನು ದಿನಕ್ಕೆ ಎರಡು ಬಾರಿ ಸ್ವಚ್ಛಗೊಳಿಸಲಾಗುತ್ತಿದೆ. ನಾವು ಎರಡು ಪಾಳಿಯಲ್ಲಿ ಕಾವಲಿರುತ್ತೇವೆ. ಕಾನೂನುಬಾಹಿರ ಚಟುವಟಿಕೆ ಕಂಡ ಕೂಡಲೇ ಪಾಲಿಕೆ ಮೇಲಧಿಕಾರಿಗಳ ಗಮನಕ್ಕೆ ತರುತ್ತೇವೆ' ಎಂದು ಕೆ.ಆರ್. ವೃತ್ತದಲ್ಲಿ ಕೆಲಸ ಮಾಡುತ್ತಿರುವ ಗೃಹ ರಕ್ಷಕ ಸಿಬ್ಬಂದಿ ಹೇಳಿದರು.

## ಸುರಂಗ ಮಾರ್ಗ ಬಳಕೆ ವಿರಳ

ಸುರಂಗ ಮಾರ್ಗಗಳು ಜನಸ್ನೇಹಿ ಆಗಿದ್ದರೂ ಪಾದಚಾರಿಗಳು ಈ ಮಾರ್ಗಗಳನ್ನು ಬಳಸುವುದು ವಿರಳವಾಗಿದೆ.

ಸುರಂಗ ಮಾರ್ಗಗಳು ಸುಸ್ಥಿತಿಯಲ್ಲಿ ಇರುವುದು ಇನ್ನೂ ಹಲವು ಪಾದಚಾರಿಗಳಿಗೆ ಗೊತ್ತಿಲ್ಲ. ಸುರಕ್ಷತೆ ಮತ್ತು ಸ್ವಚ್ಛತೆ ಇಲ್ಲ ಎಂದು ಭಾವಿಸಿ ಸುರಂಗ ಮಾರ್ಗಗಳ ಪಕ್ಕದಲ್ಲೇ ಪ್ರಾಣ ಪಣಕ್ಕಿಟ್ಟು ರಸ್ತೆ ದಾಟುತ್ತಿದ್ದಾರೆ.

ಮೆಟ್ಟಿಲುಗಳನ್ನು ಇಳಿದು ಸುರಂಗಗಳಲ್ಲಿ ಹಾದು ಹೋಗುವುದು ವೃದ್ಧರು ಮತ್ತು ಮಕ್ಕಳಿಗೆ ಕೊಂಚ ಪ್ರಯಾಸದ ಕೆಲಸ. ಆದ್ದರಿಂದ ವಾಹನಗಳ ನಡುವೆಯೇ ರಸ್ತೆ ದಾಟಲು ಪ್ರಯತ್ನಿಸುತ್ತಾರೆ. ಲಿಫ್ಟ್ ಅಥವಾ ಎಸ್ಕಲೇಟರ್‌ಗಳಿದ್ದರೆ ಸಹಾಯವಾಗುತ್ತಿತ್ತು ಎಂಬುದು ಪಾದಚಾರಿಗಳ ಅನಿಸಿಕೆ.

## ಮೆಜೆಸ್ಟಿಕ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ವಿರೋಧ

ಮೆಜೆಸ್ಟಿಕ್‌ನಲ್ಲಿ ಇರುವ ಎರಡು ಸುರಂಗ ಮಾರ್ಗಗಳಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಸ್ಥಳೀಯ ವ್ಯಾಪಾರಿಗಳಿಂದ ವಿರೋಧ ವ್ಯಕ್ತವಾಗಿದೆ.

ಸ್ಥಳೀಯರು ಈ ಸುರಂಗ ಮಾರ್ಗಗಳಲ್ಲಿ ವ್ಯಾಪಾರ-ವಹಿವಾಟು ನಡೆಸುತ್ತಿದ್ದಾರೆ. ಸಿಸಿಟಿವಿ ಕ್ಯಾಮೆರಾ ಅಳವಡಿಸಿದರೆ ವಹಿವಾಟಿಗೆ ತೊಂದರೆ ಆಗಬಹುದು ಎಂಬ ಆತಂಕದಿಂದ ವಿರೋಧ ವ್ಯಕ್ತವಾಗಿದೆ. ಈ ಸಂಬಂಧ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು, ಅವರ ನೆರವಿನೊಂದಿಗೆ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

## ಪೊಲೀಸ್ ನಿಯಂತ್ರಣಾ ಕೊಠಡಿಯಿಂದ ನಿಗಾ

ಸುರಂಗ ಮಾರ್ಗಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾ ಮತ್ತು ಪ್ಯಾನಿಕ್ ಬಟನ್‌ಗಳ ಮಾಹಿತಿ ನೇರವಾಗಿ ಪೊಲೀಸ್ ನಿಯಂತ್ರಣಾ ಕೊಠಡಿಗೆ ರವಾನೆ ಆಗುವಂತೆ ವ್ಯವಸ್ಥೆ ಮಾಡಲಾಗಿದೆ.

ನೃಪತುಂಗ ರಸ್ತೆಯಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಕಚೇರಿ ಬಳಿ ಇರುವ ಸುರಂಗ ಮಾರ್ಗದಲ್ಲಿ ಮಾಡಿರುವ ಪ್ರಯೋಗ ಯಶಸ್ವಿಯಾಗಿದೆ. ಎಲ್ಲಾ ಸುರಂಗ ಮಾರ್ಗಗಳ ಕಾರ್ಯಚಟುವಟಿಕೆಗಳ ಮೇಲೆ ಪೊಲೀಸ್ ನಿಯಂತ್ರಣಾ ಕೊಠಡಿ ನಿಗಾ ವಹಿಸಲಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಕೆ.ಆರ್.ಮಾರುಕಟ್ಟೆಯಲ್ಲಿನ ಸುರಂಗ ಮಾರ್ಗವನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಆದ್ದರಿಂದ ಈ ಯೋಜನೆಯಿಂದ ಅದನ್ನು ಕೈಬಿಡಲಾಗಿದೆ. ಉಳಿದ ಎಲ್ಲಾ ಕಡೆಯೂ ಸುರಂಗ ಮಾರ್ಗಗಳನ್ನು ಸುಸ್ಥಿತಿಗೊಳಿಸಲಾಗಿದೆ ಎಂದರು.

## ಬಣ್ಣ ಬಳಿಯಲು ಯೋಜನೆ

'ಸುರಂಗ ಮಾರ್ಗಗಳಲ್ಲಿ ಸುರಕ್ಷತಾ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ. ಬಣ್ಣ ಬಳಿಯುವುದು ಮತ್ತು ಹಾಳಾಗಿರುವ ಗೇಟ್‌ಗಳನ್ನು ಬದಲಿಸಲು ₹1.50 ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದೆ' ಎಂದು ಬಿಬಿಎಂಪಿ ಮೂಲಸೌಕರ್ಯ ವಿಭಾಗದ ಎಂಜಿನಿಯರ್ ಒಬ್ಬರು ಹೇಳಿದರು.

'ಎರಡು-ಮೂರು ದಿನಗಳಲ್ಲಿ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಇನ್ನು ಮೂರು ತಿಂಗಳಲ್ಲಿ ಸುರಂಗ ಮಾರ್ಗಗಳ ಸ್ವರೂಪವೇ ಬದಲಾಗಲಿದೆ. ಇನ್ನಷ್ಟು ಜನಸ್ನೇಹಿ ಆಗಲಿವೆ' ಎಂದರು.



# ಎಎಸ್‌ಐ, ಕಾನ್‌ಸ್ಟೆಬಲ್ ಅಮಾನತು

## ಅಕ್ರಮವಾಗಿ ಕಾರು ಅಡ್ಡಗಟ್ಟಿ ಸಂಚಾರ ಪೊಲೀಸರಿಂದ ₹ 2,500 ವಸೂಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇರಳದಿಂದ ನಗರಕ್ಕೆ ಬರುತ್ತಿದ್ದ ಕಾರೊಂದನ್ನು ದಾಖಲೆ ಪರಿಶೀಲನೆ ನೆಪದಲ್ಲಿ ಅಕ್ರಮವಾಗಿ ತಡೆದು ₹ 2,500 ವಸೂಲಿ ಮಾಡಿದ್ದ ಆರೋಪದಡಿ ಹಲಸೂರು ಗೇಟ್ ಸಂಚಾರ ಠಾಣೆಯ ಎಎಸ್‌ಐ ಡಿ.ಸಿ. ಮಹೇಶ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಗಂಗಾಧರಪ್ಪ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ನಗರದ ದೇವಾಂಗ ವೃತ್ತದಲ್ಲಿ ಜೂನ್ 10ರಂದು ಕರ್ತವ್ಯ ನಿರ್ವಹಿಸುತ್ತಿದ್ದ ಎಎಸ್‌ಐ ಹಾಗೂ ಹೆಡ್ ಕಾನ್‌ಸ್ಟೆಬಲ್ ಕಾರು ಅಡ್ಡಗಟ್ಟಿ ಹಣ ವಸೂಲಿ ಮಾಡಿದ್ದರು. ಈ ಬಗ್ಗೆ ಕಾರು ಮಾಲೀಕ ಸಂತೋಷ್‌ಕುಮಾರ್ ಇ-ಮೇಲ್ ಮೂಲಕ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿ ಕಾಂತೇಗೌಡರಿಗೆ ದೂರು ನೀಡಿದ್ದರು.

ದೂರಿನ ಪರಿಶೀಲನೆ ನಡೆಸಿದ್ದ ರವಿಕಾಂತೇಗೌಡ, ಎಎಸ್‌ಐ ಹಾಗೂ ಹೆಡ್ ಕಾನ್‌ಸ್ಟೆಬಲ್ ಅವರನ್ನು ಅಮಾನತು ಮಾಡಿ ಸೋಮವಾರ ಆದೇಶ ಹೊರಡಿಸಿದ್ದಾರೆ.

**ಕಾರು ಜಪ್ತಿ ಮಾಡುವ ಬೆದರಿಕೆ:** 'ಕೇರಳದ ನಿವಾಸಿ ಸಂತೋಷ್‌ಕುಮಾರ್ ಕಾರಿನಲ್ಲಿ ನಗರಕ್ಕೆ ಬರುತ್ತಿದ್ದರು. ಕಾರಿನಲ್ಲಿ ಸಣ್ಣ ವಾಷ್ ಬೇಸಿನ್ ಇತ್ತು. ಕಾರು ಅಡ್ಡಗಟ್ಟಿದ್ದ ಎಎಸ್‌ಐ ಹಾಗೂ ಹೆಡ್‌ಕಾನ್‌ಸ್ಟೆಬಲ್, 'ಕಾರಿನಲ್ಲಿ ವಾಷ್ ಬೇಸಿನ್ ಸಾಗಿಸುವುದು ನಿಯಮಬಾಹಿರ. ಕಾರು ಜಪ್ತಿ ಮಾಡುತ್ತೇವೆ. ನ್ಯಾಯಾಲಯದಲ್ಲಿ ₹ 20 ಸಾವಿರ ಪಾವತಿಸಬೇಕಾಗುತ್ತದೆ' ಎಂಬುದಾಗಿ ಬೆದರಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಾರು ಜಪ್ತಿ ಮಾಡಬಾರದೆಂದರೆ, ಇಲ್ಲಿಯೇ ಹಣ ನೀಡಿ. ಬಿಟ್ಟು ಕಳುಹಿಸುತ್ತೇವೆ' ಎಂದುಎಎಸ್‌ಐ ಹೇಳಿದ್ದರು. ಹೆದರಿದ್ದ ಸಂತೋಷ್ ಕುಮಾರ್, ₹ 2,500 ನೀಡಿದ್ದರು. ಹಣ ಪಡೆದಿದ್ದ ಎಎಸ್‌ಐ, ಯಾವುದೇ ರಶೀದಿ ಸಹ ಕೊಟ್ಟಿರಲಿಲ್ಲ' ಎಂದೂ ತಿಳಿಸಿವೆ.

**ಕ್ಯಾಮೆರಾ ಧರಿಸದ ಎಎಸ್‌ಐ:** 'ದಂಡ ಸಂಗ್ರಹ ಪ್ರಕ್ರಿಯೆ ಪಾರದರ್ಶಕವಾಗಿರಬೇಕೆಂಬ ಕಾರಣಕ್ಕೆ ನಗರದ ಸಂಚಾರ ಪೊಲೀಸರಿಗೆ ಬಾಡಿವೋರ್ನ್ ಕ್ಯಾಮೆರಾ ನೀಡಲಾಗಿದೆ. ಆದರೆ, ಎಎಸ್‌ಐ ಮಹೇಶ್ ಹಾಗೂ ಹೆಡ್ ಕಾನ್‌ಸ್ಟೆಬಲ್ ಗಂಗಾಧರಪ್ಪ, ಬಾಡಿವೋರ್ನ್ ಕ್ಯಾಮೆರಾ ಇಲ್ಲದೆ ಕರ್ತವ್ಯ ನಿರ್ವಹಿಸುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಕ್ರಮವಾಗಿ ಹಣ ವಸೂಲಿ ಮಾಡಲೆಂದೇ ಎಎಸ್‌ಐ-ಹೆಡ್‌ಕಾನ್‌ಸ್ಟೆಬಲ್, ಕ್ಯಾಮೆರಾ ಧರಿಸಿರಲಿಲ್ಲ. ಇದರ ವಿರುದ್ಧವೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದು ರವಿಕಾಂತೇಗೌಡ ಆದೇಶದಲ್ಲಿ ತಿಳಿಸಿದ್ದಾರೆ.

# ಕೆಲಸ ಆಮಿಷ: ₹ 3 ಕೋಟಿ ವಂಚನೆ

**ಬೆಂಗಳೂರು:** ಬೆಸ್ಕಾಂನಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ಅಭ್ಯರ್ಥಿಗಳಿಂದ ₹ 3 ಕೋಟಿ ಪಡೆದು ವಂಚಿಸಲಾಗಿದ್ದು, ಹಲಸೂರು ಗೇಟ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

'ಸರ್ಕಾರಿ ಆಯೋಗವೊಂದರ ಕಚೇರಿ ಡಿ-ಗ್ರೂಪ್ ನೌಕರರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಇಮ್ರಾನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ, ಎರಡು ವರ್ಷಗಳ ಹಿಂದೆ ಸಂಬಂಧಿಕರ ಮದುವೆಗೆಂದು ಗೌರಿಬಿದನೂರಿಗೆ ಹೋಗಿದ್ದರು. ಅಲ್ಲಿ ಪರಿಚಯವಾಗಿದ್ದ ಆರೋಪಿ ಇಮ್ರಾನ್, ಕಾವೇರಿ ಭವನದಲ್ಲಿರುವ ಬೆಸ್ಕಾಂ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು, ಸರ್ಕಾರಿ ಕೆಲಸ ಖಾಲಿ ಇರುವುದಾಗಿ ಹೇಳಿದ್ದ. ಯಾರಾದರೂ ಅಭ್ಯರ್ಥಿಗಳಿದ್ದರೆ ತಿಳಿಸುವಂತೆ ಕೋರಿದ್ದ. ಆತನ ಮಾತು ನಂಬಿದ್ದ ದೂರುದಾರ, ತಾವೇ ಮಧ್ಯವರ್ತಿಗಳಾಗಿ ಕೆಲ ಅಭ್ಯರ್ಥಿಗಳನ್ನು ಪರಿಚಯ ಮಾಡಿಕೊಟ್ಟಿದ್ದರು. ಎಲ್ಲ ಅಭ್ಯರ್ಥಿಗಳಿಂದ ಆರೋಪಿ ಹಂತ ಹಂತವಾಗಿ ₹ 3 ಕೋಟಿ ಪಡೆದ ನಂತರ ನಾಪತ್ತೆಯಾಗಿದ್ದ. ಬೆಸ್ಕಾಂ ಕಚೇರಿಗೆ ಹೋಗಿ ವಿಚಾರಿಸಿದಾಗ, ಆತ ಅಲ್ಲಿ ಕೆಲಸ ಮಾಡುತ್ತಿಲ್ಲವೆಂಬುದು ಗೊತ್ತಾಗಿದೆ' ಎಂದೂ ಮೂಲಗಳು ತಿಳಿಸಿವೆ.


ವಿಶ್ವ ಸಂವಾದ ಕೇಂದ್ರದ ವತಿಯಿಂದ ಡಾ.ಎಚ್.ಎಸ್. ಪ್ರೇಮಾ ಅವರಿಗೆ ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿ, ದು.ಗು.ಲಕ್ಷ್ಮಣ ಅವರಿಗೆ ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ, ಗುರುವಪ್ಪ.ಎನ್.ಟಿ. ಬಾಳೆಪುಣಿ ಅವರಿಗೆ ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ, ಮತ್ತು ಚೀ.ಜ. ರಾಜೀವ್ ಅವರಿಗೆ ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿ ಭಾನುವಾರ ಪ್ರದಾನ ಮಾಡಲಾಯಿತು

# ಅತ್ಯಾಚಾರ: 20 ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಬಾಲಕಿಯನ್ನು ಮದುವೆಯಾಗುವುದಾಗಿ ಪುಸಲಾಯಿಸಿ ಹಠಸಂಭೋಗ ನಡೆಸಿದ ಆರೋಪಿಗೆ ಇಲ್ಲಿನ 3ನೇ ಹೆಚ್ಚುವರಿ ತ್ವರಿತ ವಿಚಾರಣೆಯ ವಿಶೇಷ ನ್ಯಾಯಾಲಯವು 20 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಪ್ರಕರಣವನ್ನು ನ್ಯಾಯಾಧೀಶ ಇಷ್ರತ್ ಜಹಾನ್ ವಿಚಾರಣೆ ನಡೆಸಿ, 'ಆರೋಪಿ ಬಾಬು ಅಲಿಯಾಸ್ ಚಿಟ್ಟಿಬಾಬು, ಅತ್ಯಾಚಾರ, ಅಪಹರಣ ಮತ್ತು ಅಪ್ರಾಪ್ತ ವಯಸ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಸಾಬೀತಾಗಿದ್ದು, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ–2012ರ (ಪೋಕ್ಸೊ) ಅಡಿಯಲ್ಲಿ ಶಿಕ್ಷೆ ವಿಧಿಸಲಾಗುತ್ತಿದೆ' ಎಂದು ಆದೇಶಿಸಿದರು.

ಅತ್ಯಾಚಾರ ಪ್ರಕರಣಕ್ಕೆ 10 ವರ್ಷ ಕಠಿಣ ಜೈಲು ಶಿಕ್ಷೆ, ₹ 5 ಸಾವಿರ ದಂಡ ಮತ್ತು ಅಪಹರಣ ಆರೋಪಕ್ಕೆ ಏಳು ವರ್ಷ ಜೈಲು ಶಿಕ್ಷೆ ಮತ್ತು ₹ 5 ಸಾವಿರ ದಂಡ ವಿಧಿಸಲಾಗಿದೆ. ಶಿಕ್ಷೆಯನ್ನು ಏಕಕಾಲದಲ್ಲಿ ಅನುಭವಿಸಬೇಕು ಎಂದು ಸ್ಪಷ್ಟಪಡಿಸಿರುವ ನ್ಯಾಯಾಧೀಶರು, ಪರಿಹಾರವಾಗಿ ಸಂತ್ರಸ್ತೆಗೆ ₹ 4 ಲಕ್ಷ ನೀಡುವಂತೆ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನಿರ್ದೇಶಿಸಿದ್ದಾರೆ. ಆರೋಪಿಗೆ ವಿಧಿಸಿರುವ ದಂಡದಲ್ಲಿ ₹ 10 ಸಾವಿರವನ್ನು ಸಂತ್ರಸ್ತೆಗೆ ನೀಡಬೇಕು ಎಂದು ಸರ್ಕಾರಕ್ಕೆ ಆದೇಶಿಸಿದ್ದಾರೆ.

ಪ್ರಕರಣವೇನು?: ಬನಶಂಕರಿಯ ಇಟ್ಟಮಡು ನಿವಾಸಿಯಾದ ವಿವಾಹಿತ ಬಾಬು, 17 ವರ್ಷದ ಬಾಲಕಿಯನ್ನು ಪ್ರೀತಿಸುತ್ತಿರುವ ನಾಟಕವಾಡಿದ್ದ. ಮದುವೆಯಾಗಿಲ್ಲ ಎಂದು ಹೇಳಿಕೊಂಡಿದ್ದ ಆತ ತನ್ನನ್ನು ಪ್ರೀತಿಸುವಂತೆ ಬಾಲಕಿಯನ್ನು ಒತ್ತಾಯಿಸುತ್ತಿದ್ದ. ಆಕೆ ಅದಕ್ಕೆ ಒಪ್ಪದಿದ್ದಾಗ ಮನೆಯವರನ್ನು ಕೊಲೆ ಮಾಡುವುದಾಗಿ ಬೆದರಿಸಿದ್ದ. ಬಲವಂತವಾಗಿ ಆಕೆಯನ್ನು ಮನೆಯಿಂದ ಕರೆದೊಯ್ದು ಸುತ್ತಾಡಿಸಿದ್ದ ವೇಳೆ ಲೈಂಗಿಕ ಹಿಂಸೆ ನೀಡಿದ್ದ.

ಬಾಲಕಿಯನ್ನು ಸ್ನೇಹಿತರ ಮನೆಗೆ ಕರೆದೊಯಿದ್ದ ಬಾಬು ಆಕೆಯನ್ನು ಮದುವೆಯಾಗಿ ಪುಸಲಾಯಿಸಿ ಆಕೆಯ ಇಚ್ಛೆಗೆ ವಿರುದ್ಧವಾಗಿ 2017ರ ಡಿಸೆಂಬರ್ 23ರಂದು ಹಠಸಂಭೋಗ ನಡೆಸಿದ್ದ. ಈ ಕುರಿತು ಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ತನಿಖೆ ನಡೆಸಿ ಅತ್ಯಾಚಾರ, ಅಪಹರಣ ಮತ್ತು ಪೋಕ್ಸೊ ಕಾಯ್ದೆಯ ವಿವಿಧ ಕಲಂಗಳಡಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

# ಎಎಸ್‌ಐ ಮಗ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿ ಪ್ರಶಾಂತ್ (21) ನೇಣು ಹಾಕಿಕೊಂಡು ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಎಚ್‌ಎಸ್‌ಆರ್ ಲೇಔಟ್ ಠಾಣೆ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ನಾಗರಾಜ್ ಅವರ ಮಗ ಪ್ರಶಾಂತ್, ಬಿ.ಕಾಂ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆಯ ಕೊಠಡಿಯಲ್ಲೇ ಪ್ರಶಾಂತ್ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಸ್ಥಳದಲ್ಲಿ ಯಾವುದೇ ಮರಣಪತ್ರ ಸಿಕ್ಕಿಲ್ಲ' ಎಂದೂ ತಿಳಿಸಿವೆ.

# ಹೆಣ್ಣುಮಗು ಕೊಲೆಗೆ ಯತ್ನ: ತಂದೆ ಬಂಧನ

**ಬೆಂಗಳೂರು:** ಐದು ವರ್ಷದ ಹೆಣ್ಣು ಮಗುವನ್ನು ಕತ್ತು ಹಿಸುಕಿ ಕೊಲೆ ಮಾಡಲು ಯತ್ನಿಸಿದ್ದ ಆರೋಪದಡಿ ವೆಂಕಟೇಶ್ವರ್ ರಾವ್ (29) ಎಂಬುವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತೆಲಂಗಾಣದ ವೆಂಕಟೇಶ್ವರ್ ರಾವ್, ಸಿವಿಲ್ ಗುತ್ತಿಗೆದಾರ. ತನ್ನ ಮಗಳನ್ನೇ ಕೊಲೆ ಮಾಡಲು ಯತ್ನಿಸಿ ಪರಾರಿಯಾಗಿದ್ದ. ತೆಲಂಗಾಣದಲ್ಲೇ ಈತನನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರು ಎಚ್‌ಎಎಲ್ ನಿವಾಸಿ ನಯನಾ ಅವರನ್ನು 2016ರಲ್ಲಿ ವೆಂಕಟೇಶ್ವರ್ ರಾವ್ ಮದುವೆಯಾಗಿದ್ದ. ನಯನಾ ಅವರು ಹೆಣ್ಣುಮಗುವಿಗೆ ಜನ್ಮ ನೀಡಿದ್ದರು. ಹೆಣ್ಣು ಹುಟ್ಟಿತೆಂಬ ಕಾರಣಕ್ಕೆ ಆರೋಪಿಯು ಪತ್ನಿಗೆ ಕಿರುಕುಳ ನೀಡಲಾರಂಭಿಸಿದ್ದ.'

'ಎರಡನೇ ಬಾರಿ ಗರ್ಭ ಧರಿಸಿದ್ದ ನಯನಾ, ಹೆರಿಗೆಗೆಂದು ತವರು ಮನೆಗೆ ಬಂದಿದ್ದರು. ತಮ್ಮ ಐದು ವರ್ಷದ ಮಗಳನ್ನೂ ಜೊತೆಯಲ್ಲೇ ಕರೆತಂದಿದ್ದರು. 10 ದಿನಗಳ ಹಿಂದೆಯಷ್ಟೇ ನಯನಾ ಅವರಿಗೆ ಹೆಣ್ಣುಮಗು ಜನಿಸಿತ್ತು. ಸುದ್ದಿ ತಿಳಿಯುತ್ತಿದ್ದಂತೆ ಜೂನ್ 20ರಂದು ಬೆಂಗಳೂರಿಗೆ ಬಂದಿದ್ದ ಆರೋಪಿ, ನಯನಾ ಹಾಗೂ ಅವರ ಕುಟುಂಬದವರ ಜೊತೆ ಗಲಾಟೆ ಮಾಡಿದ್ದ. ಮೊದಲ ಮಗಳನ್ನು ಕತ್ತು ಹಿಸುಕಿ ಕೊಲೆ ಮಾಡಲು ಮುಂದಾಗಿದ್ದ' ಎಂದು ಮೂಲಗಳು ತಿಳಿಸಿವೆ.

'ಗಲಾಟೆ ವೇಳೆ ಸ್ಥಳೀಯರು ಮಧ್ಯ ಪ್ರವೇಶಿಸುತ್ತಿದ್ದಂತೆ ಆರೋಪಿ ಓಡಿಹೋಗಿದ್ದ. ಗಾಯಗೊಂಡಿದ್ದ ಮಗುವನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದು ಹೇಳಿವೆ.

'ಗಂಡುಮಗು ಬೇಕಿತ್ತು. ಎರಡನೇ ಬಾರಿಯೂ ಪತ್ನಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ. ಇದರಿಂದ ಕೋಪಗೊಂಡು ಮೊದಲ ಮಗಳನ್ನು ಕೊಲೆ ಮಾಡಲು ತೀರ್ಮಾನಿಸಿದ್ದೆ' ಎಂಬುದಾಗಿ ಆರೋಪಿ ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ.

# ಜಿಎಸ್‌ಟಿ ಕಚೇರಿ ಕೆಲಸಗಾರ ಆತ್ಮಹತ್ಯೆ

**ಬೆಂಗಳೂರು:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪ್ರಧಾನ ಕಚೇರಿಯ ಸ್ವಚ್ಛತಾ ಕೆಲಸಗಾರ ಲಕ್ಷ್ಮಣ (26) ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಾಜಾಜಿನಗರ ನಿವಾಸಿ ಲಕ್ಷ್ಮಣ, ಜಿಎಸ್‌ಟಿ ಕಚೇರಿಯಲ್ಲಿ ವರ್ಷದಿಂದ ಕೆಲಸ ಮಾಡುತ್ತಿದ್ದರು. ಕಚೇರಿ ಕಟ್ಟಡದ ಐದನೇ ಮಹಡಿಯಿಂದ ಜಿಗಿದು ಸೋಮವಾರ ಬೆಳಿಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಕಾರಣವೇನು ಎಂಬುದು ಗೊತ್ತಾಗಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.







ರಾಜ್ಯ ಒಕ್ಕಲಿಗರ ಸಂಘದ ಕಿಮ್ಸ್ ಹಾಸ್ಪಿಟಲ್ ಆವರಣದಲ್ಲಿ ಕೆಂಪೇಗೌಡರ ಪ್ರತಿಮೆಗೆ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಅವರು ಪುಷ್ಪಾರ್ಚನೆ ಮಾಡಿದರು. ಒಕ್ಕಲಿಗರ ಸಂಘದ ಅಧ್ಯಕ್ಷ ಬಾಲಕೃಷ್ಣ, ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್‌ಕೃಷ್ಣಪ್ಪ ಹಾಜರಿದ್ದರು (ಎಡಚಿತ್ರ). 'ರಾಜ್ಯ ಒಕ್ಕಲಿಗರ ಸಂಘ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಶಿವಪ್ರಿಯ' ನೃತ್ಯ ಶಾಲೆಯ ವಿದ್ಯಾರ್ಥಿಗಳು ಕೆಂಪೇಗೌಡ ನೃತ್ಯ ರೂಪಕ ಪ್ರದರ್ಶಿಸಿದರು (ಮಧ್ಯ ಚಿತ್ರ). ಜಾನಪದ ತಂಡಗಳ ಮೆರವಣಿಗೆಯಲ್ಲಿ ಗಮನಸೆಳೆದ ಕೆಂಪೇಗೌಡರ ವೇಷಧಾರಿ —ಪ್ರಜಾವಾಣಿ ಚಿತ್ರಗಳು

### ರಾಜಧಾನಿಯಲ್ಲಿ 513ನೇ ಜಯಂತಿ, ನಾಡಪ್ರಭು ಪ್ರತಿಮೆಗೆ ಮಾಲಾರ್ಪಣೆ, ಸಾಧನೆ ಕೊಂಡಾಡಿದ ಗಣ್ಯರು

# ಕೆಂಪೇಗೌಡರ ದೂರದೃಷ್ಟಿ: ವಿಶ್ವದ ಗಮನಸೆಳೆದ ಬೆಂಗಳೂರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಧಾನಿಯಲ್ಲಿ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿಯು ಸೋಮವಾರ ಅದ್ದೂರಿಯಿಂದ ನಡೆಯಿತು. ವಿವಿಧ ಸಂಘ–ಸಂಸ್ಥೆಗಳ ಆಶ್ರಯದಲ್ಲಿ ನಡೆದ ಜಯಂತ್ಯುತ್ಸವದಲ್ಲಿ ಕೆಂಪೇಗೌಡರ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿ, ಕೆಂಪೇಗೌಡರ ದೂರದೃಷ್ಟಿ ಕೊಂಡಾಡಿದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ವಿ.ಸೋಮಣ್ಣ ಪ್ರತಿಷ್ಠಾನದಿಂದ ನಡೆದ ಜಯಂತಿಯಲ್ಲಿ ವಸತಿ ಸಚಿವ ವಿ.ಸೋಮಣ್ಣ, 'ಕೆಂಪೇಗೌಡರು ದೂರದೃಷ್ಟಿಯಿಂದ ನಿರ್ಮಿಸಿದ ಕನಸಿನ ಬೆಂಗಳೂರು ವಿಶ್ವದ ಗಮನ ಸೆಳದಿದೆ. ಸಮರ್ಥ, ಶ್ರೇಷ್ಠ ಆಡಳಿತಗಾರ, ಜಾತ್ಯತೀತ ಸಿದ್ಧಾಂತದ ಹರಿಕಾರ ಕೆಂಪೇಗೌಡರು. ಕಾಯಕ ಸಮಾಜಕ್ಕೆ ಅನುಗುಣವಾಗಿ ವೃತ್ತಿಯ ಆಧಾರದಲ್ಲಿ 64 ಪೇಟೆಗಳನ್ನು ನಿರ್ಮಿಸಿದ್ದರು. ಕಬ್ಬನ್‌ಪೇಟೆ, ಅರಳೆಪೇಟೆ, ಗಾಣಿಗರಪೇಟೆ, ಮಡಿವಾಳಪೇಟೆ, ಅಕ್ಕಿಪೇಟೆ, ಹೂವಾಡಿಗರ ಪೇಟೆ, ತರಗುಪೇಟೆ... ಹೀಗೆ ವೃತ್ತಿಗೆ ತಕ್ಕಂತೆ ಪೇಟೆ ನಿರ್ಮಿಸಿದ್ದರು' ಎಂದರು.

'ವಾಜಪೇಯಿ ಆಡಳಿತಾವಧಿಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 'ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ' ಎಂದು ಹೆಸರಿಡಲಾಯಿತು. ಯಲಹಂಕದಲ್ಲಿ ಅತಿ ಎತ್ತರದ ಕೆಂಪೇಗೌಡರ ಪ್ರತಿಮೆ ಲೋಕಾರ್ಪಣೆ ಆಗಲಿದೆ' ಎಂದರು.

ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ದಿವ್ಯಾ ಅವಿನಾಶ್, ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಕನ್ನಡ ಪರ ಹೋರಾಟಗಾರ ಪಾಲನೇತ್ರ, ಬಿ.ಬಿ.ಎಂ.ಪಿ ಮಾಜಿ ಸದಸ್ಯರಾದ ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್ ವಾಗೇಶ್, ಡಾ.ಎಸ್.ರಾಜು, ದಾಸೇಗೌಡರು, ಜಯರತ್ನಾ, ರೂಪಾ ಲಿಂಗೇಶ್ವರ್, ಪಲ್ಲವಿ ಚನ್ನಪ್ಪ, ಕೊಳೆಗೇರಿ ಅಭಿವೃದ್ಧಿ ಮಂಡಳಿ ನಿರ್ದೇಶಕಿ ಕ್ರಾಂತಿರಾಜು ಪಾಲ್ಗೊಂಡಿದ್ದರು.

ನಾಗಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಬಕಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, 'ರಾಜಧಾನಿ ಬೆಂಗಳೂರು ನಿರ್ಮಾತೃ ಕೆಂಪೇಗೌಡರು ಸದಾಕಾಲ ಸ್ಮರಣೀಯರು. ನಗರದ ಅಭಿವೃದ್ಧಿಗೆ ಕೆಂಪೇಗೌಡರು ನೀಡಿದ ಕೊಡುಗೆಯನ್ನು ಈ ರಾಜ್ಯದ ಯಾವೊಬ್ಬ ಪ್ರಜೆಯೂ ಮರೆಯುವಂತಿಲ್ಲ. ಅಂದಿನ ಅವರ ಶ್ರಮ ಇಂದು ಹೆಮ್ಮರವಾಗಿ ಬೆಳೆದು ಬೆಂಗಳೂರು ವಿಶ್ವಭೂಪಟದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿದೆ' ಎಂದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಪುತ್ಥಳಿ ನಿರ್ಮಾಣ ಆಗಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಗಸ್ಟ್‌ನಲ್ಲಿ ಉದ್ಘಾಟಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಬಿ.ಬಿ.ಎಂ.ಪಿ ಮಾಜಿ ಉಪ ಮೇಯರ್ ಹೇಮಲತಾ ಕೆ. ಗೋಪಾಲಯ್ಯ, ಎಸ್.ಹರೀಶ್, ನಾರಾಯಣ್, ಮಂಡಲದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ ವೆಂಕಟೇಶ್ ಹಾಜರಿದ್ದರು.

ಸದಾಶಿವನಗರದ ರಮಣಮಹರ್ಷಿ ಪಾರ್ಕ್‌ನಲ್ಲಿ ಕೆಂಪೇಗೌಡರ ಪ್ರತಿಮೆಗೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಒಕ್ಕಲಿಗರ ಸಂಘದ ಅಧ್ಯಕ್ಷ ಬಾಲಕೃಷ್ಣ, ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಆರ್. ಕೃಷ್ಣಪ್ಪ ಪುಷ್ಪಾರ್ಚನೆ ಮಾಡಿದರು.

ಬಿಬಿಎಂಪಿಯ ಕೇಂದ್ರ ಕಚೇರಿಯ ಮುಂಭಾಗದ ಕೆಂಪೇಗೌಡರ ಪ್ರತಿಮೆಗೆ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಲಾರ್ಪಣೆ ಮಾಡಿದರು. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಾದ ಅಂಜುಂ ಪರ್ವೇಜ್, ಬಿ.ಡಿ.ಎ ಆಯುಕ್ತ ರಾಜೇಶ್‌ಗೌಡ, ಜಲಮಂಡಳಿ ಅಧ್ಯಕ್ಷ ಜಯರಾಮ್, ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಇದ್ದರು.



ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಕಲಾ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಸಲ್ಲಿಸಿದರು



ನಗರದಲ್ಲಿ ಸೋಮಣ್ಣ ಪ್ರತಿಷ್ಠಾನದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಕೆಂಪೇಗೌಡ ಪ್ರತಿಮೆಗೆ ಸಚಿವ ವಿ.ಸೋಮಣ್ಣ ಪುಷ್ಪನಮನ ಸಲ್ಲಿಸಿದರು

**ಕೆಂಪೇಗೌಡರಿಗೆ ಪರಿಸರದ ಬಗ್ಗೆ ಅಪಾರ ಕಾಳಜಿಯಿತ್ತು. 200ಕ್ಕೂ ಹೆಚ್ಚು ಕೆರೆ, ಕಲ್ಯಾಣಿ ನಿರ್ಮಿಸಿದ್ದರು. ಪರಿಸರ ಉಳಿಸಲು ಬೀದಿ ಬದಿಯಲ್ಲೇ ಸಸಿ ನೆಡಿಸಿದ್ದರು.**

**ವಿ.ಸೋಮಣ್ಣ,** ವಸತಿ ಸಚಿವ

## ನಿಜ ಚರಿತ್ರೆ ಯಾವುದು?

'ಪಠ್ಯಪುಸ್ತಕಗಳನ್ನೂ ರಾಜಕೀಯ ಆವರಿಸಿರುವಾಗ ಯಾವುದು ನಿಜವಾದ ಚರಿತ್ರೆ ಎಂಬ ಪ್ರಶ್ನೆ ಉದ್ಭವಿಸಿದೆ' ಎಂದು ಚಿಂತಕ ಡಾ.ಕೆ.ವೈ.ನಾರಾಯಣ ಸ್ವಾಮಿ ಆತಂಕ ವ್ಯಕ್ತಪಡಿಸಿದರು.

ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕಲಾ ಕಾಲೇಜಿನಲ್ಲಿ ನಡೆದ ಕೆಂಪೇಗೌಡರ ಜಯಂತ್ಯುತ್ಸವದಲ್ಲಿ ಮಾತನಾಡಿ, 'ನಿಜವಾದ ಇತಿಹಾಸಕಾರರು, ಡೋಂಗಿ ಇತಿಹಾಸಕಾರರು ಮತ್ತು ಸ್ವಯಂ ಘೋಷಿತ ಇತಿಹಾಸಕಾರರ ನಡುವೆ ಹಲವು ಬಗೆಯ ಕೆಂಪೇಗೌಡರು ಸಿಗುತ್ತಾರೆ. ಅವರಲ್ಲಿ ನಿಜವಾದ ಕೆಂಪೇಗೌಡ ಯಾರು ಎಂಬುದನ್ನು ಕಂಡುಕೊಳ್ಳಬೇಕಿದೆ' ಎಂದು ವ್ಯಂಗ್ಯವಾಡಿದರು.

ಕೆಂಪೇಗೌಡರ ಚಿಂತನೆಗಳು, ಆಡಳಿತದ ವೈಖರಿ ಮುಂದಿನ ತಲೆಮಾರಿಗೆ ದಾರಿದೀಪ ಆಗಬೇಕು ಎಂದರು.

ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ, ಡಾ.ಹಂ.ಗು.ರಾಜೇಶ್, ಕೆ.ಧನಪಾಲ್, ಟಿ.ಪಿ.ಶ್ರೀನಿವಾಸನಾಯಕ, ಪ್ರಾಧ್ಯಾಪಕ ಡಾ.ರುದ್ರೇಶ್ ಅದರಂಗಿ ಹಾಜರಿದ್ದರು.

## ನಗರ ಇನ್ನಷ್ಟು ಬೆಳೆಯಬೇಕಿದೆ: ಎಸ್‌. ಎಂ. ಕೃಷ್ಣ ಸಲಹೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಗತ್ತಿನ ಗಮನ ಸೆಳೆಯುತ್ತಿರುವ ಬೆಂಗಳೂರು ನಗರ ಇನ್ನಷ್ಟು ಬೆಳೆಯಬೇಕು. ಆ ದಿಸೆಯಲ್ಲಿ ರಾಜ್ಯ ಸರ್ಕಾರ ದೃಢವಾದ ಹೆಜ್ಜೆಗಳನ್ನು ಇಡಬೇಕು ಎಂದು ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಸಲಹೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ನಾಡಪ್ರಭು ಕೆಂಪೇಗೌಡರ 513ನೇ ಜಯಂತ್ಯುತ್ಸವದಲ್ಲಿ 'ನಾಡಪ್ರಭು ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

1998-99ರಲ್ಲಿ ರಾಷ್ಟ್ರದ ಸಿಲಿಕಾನ್ ಕೇಂದ್ರ ಯಾವ ನಗರ ಆಗಬೇಕು ಎಂಬ ವಿಷಯದಲ್ಲಿ ಬೆಂಗಳೂರು ಮತ್ತು ಹೈದರಾಬಾದ್ ನಡುವೆ ತೀವ್ರ ಪೈಪೋಟಿ ಇತ್ತು. ಅಂತಿಮವಾಗಿ ಬೆಂಗಳೂರು ಯಶಸ್ಸು ಪಡೆಯಿತು. ಅದನ್ನು ಉಳಿಸಿಕೊಂಡು ಹೋಗಬೇಕಿದೆ ಎಂದರು.

ಹುಬ್ಬಳ್ಳಿ- ಧಾರವಾಡ, ಶಿವಮೊಗ್ಗ, ಮೈಸೂರು, ಕಲಬುರಗಿ ಸೇರಿದಂತೆ ಎರಡನೇ ಹಂತದ ನಗರಗಳೂ ಅಭಿವೃದ್ಧಿ ಹೊಂದಬೇಕು. ಅಭಿವೃದ್ಧಿಯನ್ನು ವಿಸ್ತರಿಸುವ ಕೆಲಸ ಆಗಬೇಕು ಎಂದು ಹೇಳಿದರು.

'ಬೆಂಗಳೂರನ್ನು ನಿರ್ಮಿಸಿದ ಕೆಂಪೇಗೌಡರ ಆಶಯಕ್ಕೆ ಪೂರಕವಾಗಿ ನಗರ ಈಗ ವಿಸ್ತಾರವಾಗಿ ಬೆಳೆದಿದೆ. ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ, ವಿಪ್ರೊ ಮುಖ್ಯಸ್ಥ ಅಜೀಂ ಪ್ರೇಂಜಿ ಸೇರಿದಂತೆ ಹಲವರು ಬೆಂಗಳೂರಿನ ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ. ಇದರ ಪರಿಣಾಮವಾಗಿ, 'ಭಾರತವನ್ನು ಬೆಂಗಳೂರಿನ ಮೂಲಕ ನೋಡಬೇಕು' ಎಂದು ಹಿಂದಿನ ಪ್ರಧಾನಿ ಡಾ. ಮನಮೋಹನ್ ಸಿಂಗ್ ಹೇಳಿದ್ದರು' ಎಂದು ನೆನಪಿಸಿಕೊಂಡರು.

### ಕೃಷ್ಣ ಕೊಡುಗೆ ಅಪಾರ: ದಿನೇಶ್ ಗೂಳಿಗೌಡ

ಕೆಂಪೇಗೌಡ ಪ್ರಶಸ್ತಿಗೆ ಭಾಜನರಾಗಿರುವ ಎಸ್.ಎಂ. ಕೃಷ್ಣ ಅವರು ಬೆಂಗಳೂರು ಅಭಿವೃದ್ಧಿಗೆ ನೀಡಿರುವ ಕೊಡುಗೆ ಅಪಾರ ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಬೆಂಗಳೂರಿನ ಅಭಿವೃದ್ಧಿಗೆ ಕೆಂಪೇಗೌಡರು ಒಂದು ಚೌಕಟ್ಟನ್ನು ಹಾಕಿಕೊಟ್ಟಿದ್ದರು. ಅದನ್ನು ವಿಸ್ತರಿಸಿದ್ದ ಕೃಷ್ಣ ಅವರು ಇನ್ನೊಂದು ಹಂತಕ್ಕೆ ಕೊಂಡೊಯ್ದರು. ಸಿಲಿಕಾನ್ ಸಿಟಿಯು ಬಳಿಕ ಐಟಿ ಹಬ್ ಆಗಿ ಬೆಳೆದಿದ್ದಲ್ಲದೇ, ರಿಯಲ್ ಎಸ್ಟೇಟ್ ಉದ್ಯಮವೂ ಸಹ ಏರುಗತಿ ಪಡೆಯಿತು. ಇದರಿಂದ ಸರ್ಕಾರದ ಆದಾಯ ಹೆಚ್ಚಳಕ್ಕೂ ಕಾರಣವಾಯಿತು ಎಂದು ಅವರು ತಿಳಿಸಿದ್ದಾರೆ.



ಕೆಂಪೇಗೌಡರ ಪ್ರತಿಮೆಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಮಾಲಾರ್ಪಣೆ ಮಾಡಿದರು

## ಜುಲೈ 1ರಿಂದ ಜನತಾ ಯಾತ್ರೆ: ಎಚ್‌.ಡಿ. ಕುಮಾರಸ್ವಾಮಿ

**ಬೆಂಗಳೂರು:** 'ನಗರದ ಉತ್ತಮ ಭವಿಷ್ಯಕ್ಕೆಂದು ಕೆಂಪೇಗೌಡರು ನಿರ್ಮಿಸಿದ್ದ ಕೆರೆ, ರಾಜಕಾಲುವೆಗಳನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ದೂರಿದರು.

ಆರ್‌.ಟಿ. ನಗರದ ಮೈದಾನದಲ್ಲಿ ಆಯೋಜಿಸಿದ್ದ ಕೆಂಪೇಗೌಡರ ಜಯಂತಿಯಲ್ಲಿ ಅವರು ಮಾತನಾಡಿದರು.

ಭೂಗಳ್ಳರು ಸಾವಿರಾರು ಕೆರೆಗಳನ್ನು ಸ್ವಾರ್ಥಕ್ಕೆ ನುಂಗಿ ಬೃಹತ್ ಕಟ್ಟಡ ಕಟ್ಟಿಸಿಕೊಂಡು ಮೆರೆಯುತ್ತಿದ್ದಾರೆ ಎಂದು ಹೇಳಿದರು.

'ಜುಲೈ 1ರಿಂದ ನಗರದಲ್ಲಿ ಜನತಾ ಯಾತ್ರೆ ಪ್ರಾರಂಭಿಸಲಿದ್ದೇವೆ. 15 ವಾಹನಗಳ ಮೂಲಕ ಪ್ರತಿಯೊಂದು ವಾರ್ಡ್ ಮತ್ತು ರಸ್ತೆಗೂ ತಲುಪಲಿದ್ದೇವೆ' ಎಂದರು.

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಡಾ.ಸಯ್ಯದ್ ಮೋಹಿದ್ ಅಲ್ತಾಫ್ ಹೆಸರನ್ನು ಜೆಡಿಎಸ್ ರಾಜ್ಯ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಘೋಷಿಸಿದರು.

ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ, ಬೆಂಗಳೂರು ನಗರ ಜೆಡಿಎಸ್ ಅಧ್ಯಕ್ಷ ಪ್ರಕಾಶ್, ಹೆಬ್ಬಾಳದ ಅಧ್ಯಕ್ಷ ಎಸ್. ರುದ್ರಪ್ಪ, ಹಕೀಂ ಬಾಬು, ರಾಜಶೇಖರ್ ಹಾಜರಿದ್ದರು.

## ಧಾರ್ಮಿಕ ಭಾವನೆಗಳಿಗೆ ಧಕ್ಕೆ ಆರೋಪ: ಪತ್ರಕರ್ತ ಬಂಧನ

**ನವದೆಹಲಿ (ಪಿಟಿಐ):** ತಮ್ಮ ಟ್ವೀಟ್‌ಗಳ ಮೂಲಕ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂಬ ಆರೋಪದಲ್ಲಿ ಫ್ಯಾಕ್ಟ್ ಚೆಕಿಂಗ್ ವೆಬ್‌ಸೈಟ್ ಆಲ್ಟ್ ನ್ಯೂಸ್‌ನ ಸಹ ಸಂಸ್ಥಾಪಕ, ಪತ್ರಕರ್ತ ಮೊಹಮ್ಮದ್ ಜುಬೈರ್ ಅವರನ್ನು ದೆಹಲಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಜುಬೈರ್ ಬಂಧನವನ್ನು ಖಂಡಿಸಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸೇರಿದಂತೆ ವಿರೋಧ ಪಕ್ಷಗಳ ನಾಯಕರು ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸರ್ಕಾರದ ವಿರುದ್ಧ ಕಿಡಿ ಕಾರಿದ್ದಾರೆ. ನಿರ್ದಿಷ್ಟ ಧರ್ಮವೊಂದರ ದೇವರನ್ನು ಅವಮಾನಿಸುವ ಪ್ರಶ್ನಾರ್ಹವಾದ ಚಿತ್ರವನ್ನು ಜುಬೈರ್ ತಮ್ಮ ಟ್ವೀಟ್‌ಗಳಲ್ಲಿ ಹಾಕಿದ್ದರು. ಈ ಪ್ರಕರಣದಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ದೆಹಲಿ ಡಿಸಿಪಿ ತಿಳಿಸಿದ್ದಾರೆ.

ಜುಬೈರ್ ಅವರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದ್ದು, ಅವರನ್ನು ಒಂದು ದಿನದ ಮಟ್ಟಿಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

'ಪೊಲೀಸರು ಯಾವುದೇ ನೋಟಿಸ್ ನೀಡದ ಪ್ರಕರಣದಲ್ಲಿ ಜುಬೈರ್ ಅವರನ್ನು ಬಂಧಿಸಲಾಗಿದೆ. ಮನವಿ ಮಾಡಿದರೂ ಪೊಲೀಸರು ಎಫ್‌ಐಆರ್ ಪ್ರತಿಯನ್ನು ನಮಗೆ ನೀಡುತ್ತಿಲ್ಲ' ಎಂದು ಆಲ್ಟ್ ನ್ಯೂಸ್‌ನ ಮತ್ತೊಬ್ಬ ಸಹ ಸಂಸ್ಥಾಪಕ ಪ್ರತೀಕ್ ಸಿನ್ಹಾ ಟ್ವೀಟ್‌ನಲ್ಲಿ ಆರೋಪಿಸಿದ್ದಾರೆ.

### ಮನವಿಗೆ ಸರ್ಕಾರದ ಒಪ್ಪಿಗೆ: ನಿರ್ಮಲಾನಂದನಾಥ ಸ್ವಾಮೀಜಿ

# ದಸರಾ ಮಾದರಿಯಲ್ಲಿ ಕೆಂಪೇಗೌಡ ಜಯಂತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕುವೆಂಪು ಕುರಿತೇ ವ್ಯಂಗ್ಯ ಮಾಡಲಾಯಿತು ಎಂದು ಆದಿಚುಂಚನಗಿರಿಯ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಆವರಣದಲ್ಲಿ ಸೋಮವಾರ ನಡೆದ ಕೆಂಪೇಗೌಡರ 513ನೇ ಜಯಂತಿ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾಡಿನಲ್ಲಿ ಕ್ರಾಂತಿಯ, ಭಕ್ತಿಯ ಕಹಳೆ ಮೊಳಗಿಸಿದವರು ಕುವೆಂಪು. ಶೂದ್ರ ಸಮುದಾಯದಲ್ಲಿ ಕವಿಗಳು, ಜ್ಞಾನಿಗಳು, ನಾಯಕರು ಉದಯಿಸಿದ್ದಾರೆ. ಅದೇ ಶೂದ್ರ ಸಮುದಾಯದ ಕವಿ ಕನ್ನಡ ಸಾಹಿತ್ಯ ಲೋಕಕ್ಕೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟರು ಎಂದರು.

ಕೆಂಪೇಗೌಡರ ಪ್ರತಿಮೆಯನ್ನು ಈ ಹಿಂದೆಯೇ ವಿಧಾನಸೌಧ ಎದುರು ನಿರ್ಮಿಸಬೇಕಿತ್ತು. ವಿಳಂಬವಾಗಿದೆ. ಪ್ರತಿಮೆ ನಿರ್ಮಿಸುವಂತೆ ಮನವಿ ಮಾಡಲಾಗಿದ್ದು, ಸರ್ಕಾರ ಅದಕ್ಕೆ ಒಪ್ಪಿಗೆ ಸೂಚಿಸಿದೆ ಎಂದರು. ಕೆಂಪೇಗೌಡ ಪಾಳೆಗಾರರು ಆಗಿರಲಿಲ್ಲ, ರಾಜರಾಗಿದ್ದರು. ಅದಕ್ಕೇ ಕೆಂಪೇಗೌಡರು ನಾಡಪ್ರಭು ಆಗಿದ್ದು, ನಗರದಲ್ಲಿ 60 ಪೇಟೆಗಳನ್ನು ನಿರ್ಮಿಸಿ ನಾಡಿನ ಅಭಿವೃದ್ಧಿ ಪಡಿಸಿದ್ದರು ಎಂದು ಹೇಳಿದರು.

ಕೆಂಪೇಗೌಡ ಜಯಂತಿಯನ್ನು ಮೈಸೂರು ದಸರಾ ಮಾದರಿಯಲ್ಲಿ ಆಚರಣೆ ಮಾಡಬೇಕು ಎಂದು ಮನವಿ ಮಾಡಲಾಗಿದೆ. ಅದಕ್ಕೂ ಸರ್ಕಾರ ಒಪ್ಪಿದೆ ಎಂದರು.

ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಮಾತನಾಡಿ, 'ಒಕ್ಕಲಿಗ ಸಮುದಾಯವು ಒಡೆಯಬಾರದು. ಸಮುದಾಯ ಉಳಿಯಬೇಕು' ಎಂದರು. ಒಕ್ಕಲಿಗರ ಸಂಘಕ್ಕೆ ಸಾಕಷ್ಟು ಮಂದಿ ಶ್ರಮಿಸಿದ್ದಾರೆ. ಮುಂದೆಯೂ ಸಂಘವು ಉತ್ತಮ ಕೆಲಸ ಮಾಡಲಿ. ಇಬ್ಬರೂ ಸ್ವಾಮೀಜಿಗಳು ಒಕ್ಕಲಿಗ ಸಮಾಜಕ್ಕೆ ಶಕ್ತಿ ತುಂಬುತ್ತಿದ್ದಾರೆ ಎಂದು ಹೇಳಿದರು.

ಶಿರಾ ತಾಲ್ಲೂಕು ಪಟ್ಟನಾಯನಹಳ್ಳಿ ಸ್ಫಟಿಕಪುರಿ ಸಂಸ್ಥಾನದ ನಂಜಾವಧೂತ ಸ್ವಾಮೀಜಿ ಮಾತನಾಡಿ, ಅವಮಾನಿಸುವ ಮನಸ್ಸುಗಳಿಗೆ ಉತ್ತರ ಕೊಡಬೇಕಿದೆ ಎಂದು ಕರೆ ನೀಡಿದರು.

ತಪ್ಪು ಇತಿಹಾಸ ಬರೆದು, ತಪ್ಪಾಗಿಯೇ ಮಕ್ಕಳಿಗೆ ಬೋಧಿಸಿದರೆ ಅವರ ಭವಿಷ್ಯ ಏನಾಗಬೇಕು ಎಂದು ಪ್ರಶ್ನಿಸಿದರು. ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, 'ಆದರ್ಶದ ಅನುಷ್ಠಾನದಲ್ಲಿ ಕೊರತೆಯಿದೆ. ಮಾತನಾಡುವುದೇ ಆಡಳಿತ ಆಗಬಾರದು. ಆಡಳಿತ ವ್ಯವಸ್ಥೆಗೆ ಹೊಸದಿಕ್ಕು ಕಲ್ಪಿಸಿದವರು ಕೆಂಪೇಗೌಡರು' ಎಂದು ಹೇಳಿದರು.

ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹಾಗೂ ಕೆ.ಪಿ.ಸಿ.ಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಮಾತನಾಡಿದರು.

ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ, ಟಿ.ಕೋನಪ್ಪರೆಡ್ಡಿ ಮೊದಲಾದವರು ಹಾಜರಿದ್ದರು.

ಜಯಂತಿ ಅಂಗವಾಗಿ ವಿವಿಧ ಕಲಾ ತಂಡಗಳ ನೇತೃತ್ವದಲ್ಲಿ ಆಕರ್ಷಕ ಮೆರವಣಿಗೆ ನಡೆಯಿತು. ನಗರದ ವಿವಿಧೆಡೆ ವೃತ್ತದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿದರು. ಜಾನಪದ ಗೀತಗಾಯನ ಹಾಗೂ ಕೆಂಪೇಗೌಡ ನೃತ್ಯರೂಪಕ ಗಮನ ಸೆಳೆಯಿತು.



ನಗರದಲ್ಲಿ ಸೋಮವಾರ 'ರಾಜ್ಯ ಒಕ್ಕಲಿಗರ ಸಂಘ' ಆಯೋಜಿಸಿದ್ದ "ನಾಡಪ್ರಭು ಕೆಂಪೇಗೌಡರ 513ನೇ ಜಯಂತಿ" ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯ ಎಚ್‌.ಡಿ ದೇವೇಗೌಡ ಮಾತನಾಡಿದರು. (ಎಡದಿಂದ) ಎಚ್‌.ಡಿ ಕುಮಾರಸ್ವಾಮಿ, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ಸ್ಫಟಿಕಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ, ಸಂಸದ ಡಿ.ವಿ ಸದಾನಂದಗೌಡ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು 'ರಾಜ್ಯ ಒಕ್ಕಲಿಗರ ಸಂಘ'ದ ಅಧ್ಯಕ್ಷ ಸಿ.ಎನ್‌. ಬಾಲಕೃಷ್ಣ ಇದ್ದರು ಪ್ರಜಾವಾಣಿ ಚಿತ್ರ

### ಡಿ.ಕೆ.ಶಿಗೆ ಸಹೋದರ ಎಂದ ಎಚ್‌ಡಿಕೆ

ಎಚ್‌.ಡಿ.ಕುಮಾರಸ್ವಾಮಿ ಅವರು ವೇದಿಕೆಯ ಮೇಲಿದ್ದ ಗಣ್ಯರ ಹೆಸರು ಹೇಳುವಾಗ ಡಿ.ಕೆ.ಶಿವಕುಮಾರ ಅವರನ್ನು ಸಹೋದರ ಎಂದರು ಹೇಳಿದರು. ಆಗ ಸಭಿಕರು ಶಿಳ್ಳೆ ಹಾಕಿದರು.

### ಡಾ.ಎಚ್‌. ಲಕ್ಷ್ಮಿನಾರಾಯಣಸ್ವಾಮಿ ಅವರ 'ನೂಲ ಏಣಿಯ ನಡಿಗೆ' ಕೃತಿ ಲೋಕಾರ್ಪಣೆ

# ಸಾಮಾಜಿಕ ಸ್ವಾತಂತ್ರ್ಯ ಲಭಿಸಲಿ: ಮೊಯಿಲಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವ್ಯಕ್ತಿಯ ಬದುಕಿನಲ್ಲಿ ಸಾಮಾಜಿಕ ಸ್ವಾತಂತ್ರ್ಯ ಬರಬೇಕಿದೆ' ಎಂದು ಕಾಂಗ್ರೆಸ್ ಮುಖಂಡ ಎಂ. ವೀರಪ್ಪ ಮೊಯಿಲಿ ಪ್ರತಿಪಾದಿಸಿದರು.

ನಗರದಲ್ಲಿ ಭಾನುವಾರ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಪ್ರಶಸ್ತಿ ಪುರಸ್ಕೃತ ಡಾ.ಎಚ್‌. ಲಕ್ಷ್ಮಿನಾರಾಯಣಸ್ವಾಮಿ ಅವರ 'ನೂಲ ಏಣಿಯ ನಡಿಗೆ' (ಡಾ.ಎಲ್‌. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ ಕೃತಿಗಳ ಪಿಎಚ್‌.ಡಿ ಮಹಾಪ್ರಬಂಧ) ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

'ಸಾಮಾಜಿಕ ಸ್ವಾತಂತ್ರ್ಯ ಸಿಗದಿದ್ದರೆ ಸಮಾನತೆ ಹಾಗೂ ಸಂವಿಧಾನದ ಆಶಯಕ್ಕೆ ಅರ್ಥವೇ ಇರುವುದಿಲ್ಲ. ವರ್ತಮಾನ ಕಾಲದಲ್ಲಿ ಸ್ವಾತಂತ್ರ್ಯ ಹಾಗೂ ಮೂಲ ಹಕ್ಕು ಕಸಿಯುವ ಪ್ರಯತ್ನಗಳು ನಡೆಯುತ್ತಿವೆ. ಪಟ್ಟಭದ್ರರ ವಿರುದ್ಧ ಎಚ್ಚರಿಕೆ ವಹಿಸುವುದು ಅನಿವಾರ್ಯ' ಎಂದು ಸಲಹೆ ನೀಡಿದರು.

'ಮಾನಸಿಕ ಜಾಡ್ಯದಿಂದ ಬಿಡುಗಡೆ ಪಡೆಯಬೇಕಿದೆ. ರಾಷ್ಟ್ರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಚಿಂತಕರು ಹಾಗೂ ಅವತಾರ ಪುರುಷರು ಜನಿಸಿದರೂ ಅಸಂತೋಷದ ವಾತಾವರಣ ಇದೆ. ಅದಕ್ಕೆ ಕಾರಣ ಹುಡುಕುವ ತುರ್ತು ಇದೆ' ಎಂದರು. ಲಕ್ಷ್ಮಿನಾರಾಯಣಸ್ವಾಮಿ ಅವರು ಹನುಮಂತಯ್ಯ ಅವರ ವ್ಯಕ್ತಿತ್ವವನ್ನೇ ಕೃತಿಯಲ್ಲಿ ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. ಇದು ಹೊಸ ಆಯಾಮದ ಕೃತಿ. ಒಳಗಿನ ಹಾಗೂ ಸಮಾಜದ ನೋವಿಗೆ ಬರಹದ ಸ್ವರೂಪ ಸಿಕ್ಕರೆ ಸಹಜತೆ ಹಾಗೂ ಸ್ಪಷ್ಟತೆ ಇರುತ್ತದೆ ಎಂದು ಹೇಳಿದರು.

ಸಂಸ್ಕೃತಿಯಿಂದಲೇ ವ್ಯಕ್ತಿ ಗುರುತಿಸಿಕೊಳ್ಳಬೇಕು. ಸಾಮಾಜಿಕ ಆಂದೋಲನಗಳು ಹೊಸ ಕಲ್ಪನೆ ರೂಪಿಸುತ್ತವೆ. ಹಾಗೆಯೇ ಪರಿವರ್ತನೆ ತರುತ್ತವೆ ಎಂದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ.ಎಂ.ಎಸ್‌. ಆಶಾದೇವಿ ಮಾತನಾಡಿ, 'ವಿನಾಶದ ಮಾದರಿಗಳು ಮನೆ ಹೊಕ್ಕಿವೆ. ಅದರಿಂದ ಪಾರು ಮಾಡುವ ದಾರಿ ಹುಡುಕಬೇಕಿದೆ' ಎಂದು ಎಚ್ಚರಿಸಿದರು.

ದಲಿತ, ಬಂಡಾಯ ಸಾಹಿತ್ಯದ ಬಗ್ಗೆ ಉತ್ಸಾಹ ಮಾತುಗಳೇ ಕೇಳಿಬರುತ್ತಿವೆ. ಅದರೆ, ಸಾಹಿತ್ಯ ಮೀಮಾಂಸೆಯನ್ನು ತಾತ್ವಿಕ ನೆಲೆಗಟ್ಟಿನಲ್ಲಿ ಕಟ್ಟಲು ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿಮರ್ಶಕ ಡಾ.ಎಚ್‌.ಎಸ್‌. ರಾಘವೇಂದ್ರರಾವ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಸಭಾ ಸದಸ್ಯ ಡಾ.ಎಲ್‌. ಹನುಮಂತಯ್ಯ, ಬೆಂಗಳೂರು ವಿಶ್ವವಿದ್ಯಾಲಯದ ಡಾ.ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ನಿರ್ದೇಶಕ ಪ್ರೊ.ಬಿ.ಗಂಗಾಧರ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್ ಮಾಲೀಕರಾದ ಬಿ.ಕೆ. ಸುರೇಶ್ ಹಾಜರಿದ್ದರು.





ನಗರದಲ್ಲಿ 'ನೂಲ ಏಣಿಯ ನಡಿಗೆ' ಕೃತಿಯನ್ನು ಕಾಂಗ್ರೆಸ್ ಮುಖಂಡ ಎಂ.ವೀರಪ್ಪ ಮೊಯಿಲಿ ಬಿಡುಗಡೆ ಮಾಡಿದರು. (ಎಡದಿಂದ) ವಿಮರ್ಶಕಿ ಡಾ.ಎಂ.ಎಸ್ ಆಶಾದೇವಿ, ವಿಮರ್ಶಕ ಡಾ.ಎಚ್‌.ಎಸ್ ರಾಘವೇಂದ್ರರಾವ್, ರಾಜ್ಯಸಭಾ ಸದಸ್ಯ ಡಾ.ಎಲ್‌. ಹನುಮಂತಯ್ಯ, ಪ್ರೊ.ಬಿ.ಗಂಗಾಧರ, ಬಿ.ಕೆ.ಸುರೇಶ್ ಇದ್ದರು ಪ್ರಜಾವಾಣಿ ಚಿತ್ರ

### ಸಂಕ್ಷಿಪ್ತ ಸುದ್ದಿ

## 'ಪ್ರಶ್ನೆಗಳಿಗೆ ಉತ್ತರಿಸಲು ಸಮಯ ಕೋರಿದ ತೀಸ್ತಾ'

**ಅಹಮದಾಬಾದ್ (ಪಿಟಿಐ):** '2002ರ ಗುಜರಾತ್ ಕೋಮುಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ಆರ್‌.ಬಿ. ಶ್ರೀಕುಮಾರ್ ಅವರು ವಿಚಾರಣೆ ವೇಳೆ ಯಾವುದೇ ವಿಷಯಗಳನ್ನು ಬಹಿರಂಗಪಡಿಸುತ್ತಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ಹೇಳಿದ್ದಾರೆ.

'ವಿಚಾರಣೆ ಸಮಯದಲ್ಲಿ ಇಬ್ಬರೂ ಏನನ್ನೂ ಬಹಿರಂಗಪಡಿಸುತ್ತಿಲ್ಲ. ಎಸ್‌ಐಟಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ತೀಸ್ತಾ ಅವರು ಕಾಲಾವಕಾಶ ಕೋರಿದ್ದು, ತಾವು ಏನನ್ನು ಹೇಳಲು ಬಯಸುವರೋ ಅದನ್ನು ನ್ಯಾಯಾಲಯದ ಮುಂದೆ ಮಾತ್ರ ಹೇಳುವುದಾಗಿಯೂ ತಿಳಿಸಿದ್ದಾರೆ. ಶ್ರೀಕುಮಾರ್ ಅವರು ತಾವು ಯಾವುದೇ ತಪ್ಪು ಮಾಡಿಲ್ಲ ಎಂದು ಅಧಿಕಾರಿಗಳಿಗೆ ಹೇಳಿದ್ದಾರೆ' ಎಂದೂ ಅಧಿಕಾರಿ ಮಾಹಿತಿ ನೀಡಿದ್ದಾರೆ.

## ಶ್ರೀಲಂಕಾ: ಜುಲೈ 10ರವರೆಗೆ ಅಗತ್ಯ ಸೇವೆ ಮಾತ್ರ ನಿರ್ವಹಣೆ

**ಕೊಲಂಬೊ (ಪಿಟಿಐ):** ಆರ್ಥಿಕ ಬಿಕ್ಕಟ್ಟು ಮತ್ತು ತೀವ್ರ ಇಂಧನ ಕೊರತೆಯನ್ನು ಎದುರಿಸುತ್ತಿರುವ ಶ್ರೀಲಂಕಾದಲ್ಲಿ ಸೋಮವಾರ ಮಧ್ಯರಾತ್ರಿಯಿಂದ ಜುಲೈ 10ರವರೆಗೆ ಅಗತ್ಯ ಸೇವೆಗಳನ್ನು ಮಾತ್ರ ನಿರ್ವಹಿಸಲಾಗುವುದು, ಇತರ ಕಾರ್ಯಾಚರಣೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು ಎಂದು ಅಲ್ಲಿನ ಸರ್ಕಾರ ಸೋಮವಾರ ಘೋಷಿಸಿದೆ.

ಆರೋಗ್ಯ, ರಕ್ಷಣೆ, ವಿದ್ಯುತ್ ಮತ್ತು ರಫ್ತು ವಲಯಗಳಿಗೆ ಮಾತ್ರ ಇಂಧನವನ್ನು ನೀಡಲಾಗುವುದು ಎಂದು ಸಂಪುಟದ ವಕ್ತಾರ ಬಂಡುಲ ಗುಣವರ್ಧನ ಅವರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

## ಏಕ ನಾಯಕತ್ವ: ಚುನಾವಣಾ ಆಯೋಗಕ್ಕೆ ಪತ್ರ

**ಚೆನ್ನೈ (ಪಿಟಿಐ):** ಎಐಎಡಿಎಂಕೆ ನಾಯಕ ಓ.ಪನ್ನೀರಸೆಲ್ವಂ (ಒಪಿಎಸ್) ಅವರು ಪಕ್ಷದ ಖಜಾಂಚಿಯಾಗಿ ಮುಂದುವರಿಯಬೇಕೇ ಅಥವಾ ಬೇಡವೇ ಎಂಬುದನ್ನು ಮುಂಬರುವ ಸರ್ವ ಸದಸ್ಯರ ಸಭೆ ನಿರ್ಧರಿಸುತ್ತದೆ ಎಂದು ಪ್ರತಿಸ್ಪರ್ಧಿ ಎಡಪ್ಪಾಡಿ ಕೆ ಪಳನಿಸ್ವಾಮಿ (ಇಪಿಎಸ್) ಬಣ ಸೋಮವಾರ ಹೇಳಿದೆ.

ಏಕ ನಾಯಕತ್ವದ ವಿರುದ್ಧ ಚುನಾವಣಾ ಆಯೋಗದ ಮೊರೆ ಹೋಗಿರುವ ಪನ್ನೀರಸೆಲ್ವಂ, '2021 ರ ಡಿಸೆಂಬರ್ 1 ರಂದು ಪಕ್ಷದ ಬೈಲಾಗಳಿಗೆ ತಿದ್ದುಪಡಿ ಮಾಡಲಾಗಿದೆ. ಸಂಯೋಜಕ ಮತ್ತು ಜಂಟಿ ಸಂಯೋಜಕ, ಪಕ್ಷದ ಉನ್ನತ ನಾಯಕತ್ವವನ್ನು ಪ್ರಾಥಮಿಕ ಸದಸ್ಯರು ಮಾತ್ರ ಚುನಾಯಿಸಬಹುದೆಂದು ಸ್ಪಷ್ಟಪಡಿಸಲಾಗಿದೆ ಎಂದಿದ್ದಾರೆ. ಈ ಬಗ್ಗೆ ಆಯೋಗಕ್ಕೆ ಮನವಿ ಸಲ್ಲಿಸಿದ್ದಾರೆ.

# ಕ್ಷೇಮ ಕುಶಲ





# ಹವ್ಯಾಸಗಳು ಚಟಗಳಾಗದಿರಲಿ

ಹವ್ಯಾಸಗಳು ನಮ್ಮ ಜಡವಾದ ಜೀವನಕ್ಕೆ ಉಲ್ಲಾಸವನ್ನು ಕೊಡುತ್ತವೆ. ಆದರೆ ಅವು ಚಟ ಆಗಬಾರದು.

ರಮ್ಯಾ ಶ್ರೀಹರಿ

ದಿನನಿತ್ಯದ ಒತ್ತಡವನ್ನು ಸಹಿಸಲು ಸಾಧ್ಯವಾಗಿಸುವಂತಹ, ಚೇತೋಹಾರಿಯಾದ ಚಟುವಟಿಕೆಯೊಂದು ಎಲ್ಲರಿಗೂ ಬೇಕು. ಪ್ರತಿದಿನದ ಏಕತಾನತೆಯನ್ನು ಮೀರುವುದು, ಹಾಗೆಯೇ ಪ್ರತಿದಿನದ ಬದಲಾವಣೆಗಳನ್ನು ಒಪ್ಪಿಕೊಳ್ಳುವುದು; ಇವೆರಡಕ್ಕೂ ಸಹಕಾರಿಯಾದ ಚಟುವಟಿಕೆಗಳನ್ನು ಉತ್ತಮ ಹವ್ಯಾಸಗಳು ಎನ್ನಬಹುದು. ದಿನದಿನವೂ ಒಂದೇ ರೀತಿಯಾಗಿ ಬದುಕುವುದು ಎಷ್ಟು ಕಷ್ಟವೋ, ಅಷ್ಟೇ ಕಷ್ಟ ಪ್ರತಿದಿನವೂ ಊಹಿಸದ ಸನ್ನಿವೇಶ, ಸವಾಲು, ರೂಪಾಂತರಗಳಿಗೆ ನಮ್ಮನ್ನು ನಾವು ಒಡ್ಡಿಕೊಳ್ಳುವುದು. ಹಾಗಾಗಿಯೇ ನಮ್ಮ ಹವ್ಯಾಸಗಳು ಅಥವಾ ಅಭ್ಯಾಸಗಳು ನಮ್ಮನ್ನು ಮಾನಸಿಕವಾಗಿ, ಭಾವನಾತ್ಮಕವಾಗಿ ಸಮತೋಲನದಲ್ಲಿಡುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ.

ಬೆಳಗಿನ ನಡಿಗೆಯಿರಬಹುದು, ಸಂಜೆಯ ಸುತ್ತಾಟವಿರಬಹುದು ಅಥವಾ ಮಧ್ಯಾಹ್ನದ ಒಂದೆರಡು ಗಂಟೆಯ ನಮ್ಮಿಷ್ಟದ ಕೆಲಸ ಮಾಡುವ ಸಮಯವಿರಬಹುದು, ಅಭ್ಯಾಸವೊಂದು ತಪ್ಪಿಹೋದಾಗ ಆಗುವ ಅಲ್ಲೋಲಕಲ್ಲೋಲವು ನಮ್ಮ ಇಡೀ ದಿನವನ್ನೇ ಹಾಳುಮಾಡಿಬಿಡುತ್ತದೆ. ಹಾಗೆಂದು ಒಂದೇ ಒಂದು ದಿನವೂ ಸ್ವಲ್ಪವೂ ದಿನಚರಿ ತಪ್ಪದೆ ನಡೆಯುತ್ತಿರಬೇಕೆಂಬ ನಿರೀಕ್ಷೆಯು ವಾಸ್ತವಕ್ಕೆ ದೂರವಾದುದಷ್ಟೇ ಅಲ್ಲ, ಒತ್ತಡ ತರುವಂತಹದ್ದೂ ಹೌದು.

ಬದುಕಿಗೆ ಪ್ರೀತಿಯಿಂದ ಅಂಟಿಕೊಳ್ಳಲು, ಜೀವನದಲ್ಲಿ ಆಸಕ್ತಿಯನ್ನು ಉಳಿಸಿಕೊಳ್ಳಲು, ವರ್ತಮಾನದಲ್ಲಿ ಸಮಾಧಾನವನ್ನು, ಭವಿಷ್ಯದ ಬಗೆಗೆ ಭರವಸೆಯನ್ನು ಗಳಿಸಿಕೊಳ್ಳಲು ಕೆಲವು 'ರಿಚುವಲ್'(ritual)ಗಳು/ ಆಚರಣೆಗಳು ಅನಿವಾರ್ಯವಾಗಿಬಿಡುತ್ತವೆ. ಬೆಳಗ್ಗೆದ್ದು ಇಡೀ ದಿನ ಮಾಡಬೇಕಾದ ಕೆಲಸಗಳ ಬಗೆಗೆ ಅಥವಾ ಆಶಯಗಳ ಕುರಿತು ಬರೆದಿಡುವುದಿರಬಹುದು, ಸ್ನೇಹಿತರೊಟ್ಟಿಗಿನ ಸಂಜೆಯ ಚಹಾ ಕುಡಿಯುವುದಿರಬಹುದು, ಪ್ರಾರ್ಥನೆ-ಪೂಜೆಗಳಿರಬಹುದು, ವಾರಕ್ಕೊಮ್ಮೆ ಮನೆ ಶುಚಿಗೊಳಿಸುವುದಿರಬಹುದು – ಒಟ್ಟಿನಲ್ಲಿ ರಿಚುವಲ್‌ಗಳು ನಾವು ಯಾರೆಂದು ನಮಗೇ ನೆನಪಿಸುತ್ತಿರುತ್ತವೆ. ನಮ್ಮ ಆಳವಾದ ಆಕಾಂಕ್ಷೆಗಳು, ಜೀವನದೃಷ್ಟಿ ಎಲ್ಲವೂ ಇಂತಹ ಅಭ್ಯಾಸಗಳಲ್ಲಿ ಅಡಕವಾಗಿದ್ದು, ಸೂಚ್ಯವಾಗಿ ನಮ್ಮನ್ನು ನಮಗೇ ತೋರುವ ಕನ್ನಡಿಯಂತೆ ಕೆಲಸ ಮಾಡುತ್ತಿರುತ್ತದೆ. ನಿಯಮಿತವಾದ ಅಭ್ಯಾಸಗಳು ಹೊರಗಿನ ಒತ್ತಡ, ಸಂಘರ್ಷಗಳು ನಮ್ಮನ್ನು ಕಂಗೆಡಿಸಿದಾಗ ಪ್ರಶಾಂತವಾದ ಸುರಕ್ಷಿತ ತಾಣವೊಂದು ನಮ್ಮೊಳಗೇ ಇದ್ದು, ಬೇಕೆನಿಸಿದಾಗಲೆಲ್ಲಾ ಆ ತಾಣಕ್ಕೆ ತೆರಳಿ ದಣಿವಾರಿಸಿಕೊಳ್ಳಬಹುದೆಂಬ ನಂಬಿಕೆಯನ್ನು ಗಟ್ಟಿಗೊಳಿಸುತ್ತದೆ.

ಆದರೆ ಇಂತಹ ಒಳಲೋಕವೊಂದು ನಮ್ಮನ್ನು ನಮ್ಮ ಸುತ್ತಲಿನ ಪ್ರಪಂಚದಿಂದ, ಸಹಜೀವಿಗಳಿಂದ, ದಿನನಿತ್ಯದ ಆಗುಹೋಗುಗಳಿಂದ, ಜವಾಬ್ದಾರಿಗಳಿಂದ ಬೇರ್ಪಡಿಸುವಂತಾಗಿಬಿಟ್ಟರೆ ಹವ್ಯಾಸಗಳ ಮೂಲ ಉದ್ದೇಶವೇ ವಿಫಲವಾಗಿಬಿಡುತ್ತದೆ. ಉದಾಹರಣೆಗೆ: ಓದುವುದು ಅತ್ಯುತ್ತಮ ಹವ್ಯಾಸವಾಗಿದೆಯಾದರೂ ಅದು ಯಾವುದೇ ಬೌದ್ಧಿಕ ಬೆಳವಣಿಗೆಗಾಗಲೀ, ಆಂತರಿಕ ಸಮೃದ್ಧಿಗಾಗಲೀ ಕಾರಣವಾಗದೆ, ಕೇವಲ ಕಾಲಹರಣವೋ ಮನೋರಂಜನೆಯೋ, ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಮಾರ್ಗವೋ, ಒಳಗಿನ ತೊಳಲಾಟವನ್ನು ಮರೆಯುವ, ಮರೆಮಾಚುವ ಸಾಧನವೋ ಆಗಿಬಿಟ್ಟರೆ ಅದು ಹವ್ಯಾಸ ಎನಿಸಿಕೊಳ್ಳುವ ಬದಲು 'ಚಟ' ಎನಿಸಿಕೊಳ್ಳುತ್ತದೆ.

ಯಾವುದೇ ಚಟುವಟಿಕೆಯಾದರೂ ಅದರ ಉದ್ದೇಶ ಮತ್ತು ಅದು ನಮ್ಮ ಒಟ್ಟು ವ್ಯಕ್ತಿತ್ವ, ಜೀವನದ ಅರ್ಥಪೂರ್ಣತೆ – ಇವುಗಳ ಮೇಲೆ ಬೀರುವ ಪರಿಣಾಮಗಳನ್ನು ಆಗಾಗ ಮನನ ಮಾಡಿಕೊಳ್ಳುತ್ತಲೇ ಅದರಲ್ಲಿ ತೊಡಗಿಕೊಳ್ಳಬೇಕೆ ಹೊರತು ಕೇವಲ ಅದು ತಾತ್ಕಾಲಿಕವಾಗಿ ನೀಡುವ ಸುಖಕ್ಕಾಗಿಯೋ ಅಥವಾ ಕಷ್ಟಗಳನ್ನು ಮರೆಸುವ ಅರಿವಳಿಕೆಯಂತೆಯೋ ಹವ್ಯಾಸಗಳನ್ನು ಉಪಯೋಗಿಸಬಾರದು. ಹವ್ಯಾಸ ಅರ್ಥಪೂರ್ಣವಾದ ಉದ್ದೇಶಗಳೆಡೆಗೆ ನಮ್ಮನ್ನು ಪ್ರಚೋದಿಸುವಂತಿರಬೇಕು. ಮನದಲ್ಲಿ ಉತ್ಸಾಹ ತುಂಬಿ ಒತ್ತಡಗಳನ್ನು, ಸವಾಲುಗಳನ್ನು ಧೈರ್ಯವಾಗಿ ಎದುರಿಸಲು ನಮ್ಮನ್ನು ತಯಾರಾಗಿಸಬೇಕು ಹೊರತು ಹವ್ಯಾಸವೆಂಬ ಚಟುವಟಿಕೆಯೇ ಗೀಳಾಗಿ ಚಟುವಟಿಕೆಯಾಚೆಗಿನ ಅದರ ಉದ್ದೇಶವೇ ಗೌಣವಾಗಿಬಿಡುವಂತಾಗಬಾರದು.

ಬದುಕನ್ನು ಆಸ್ವಾದಿಸುವುದಕ್ಕೆ, ಜೀವನದ ಸಾರ್ಥಕತೆಗೆ ನಮಗೆ ಸ್ನೇಹ-ಸಂಬಂಧಗಳು ಅತ್ಯಾವಶ್ಯಕ. ಆದರೆ ಹೊರ ಜಗತ್ತಿನ ಸಂಬಂಧಗಳ ಸುಳಿಯಲ್ಲಿ ಸಿಲುಕಿ ನಮಗೆ ನಮ್ಮೊಂದಿಗೇ ಇರುವ ಸಂಬಂಧ ಮರೆಯುವಂತಾದರೆ ಅಂತಹ ಸಂಬಂಧಗಳೇಕೆ ಬೇಕು? ಹವ್ಯಾಸಗಳ ಹೆಸರಿನಲ್ಲಿ ಸ್ನೇಹ, ಬಾಂಧವ್ಯ ಎನ್ನುವ ಮೋಹಕ್ಕೆ ಸಿಲುಕಿ ಕೆಲವೊಮ್ಮೆ ನಮ್ಮನ್ನು ನಾವೇ ಬಿಟ್ಟುಕೊಡಬೇಕಾದಂತಹ ಪ್ರಸಂಗಗಳೂ ಬರಬಹುದು. ಸ್ನೇಹಿತರೊಂದಿಗೆ ವಾರಾಂತ್ಯದಲ್ಲಿ ಕಡ್ಡಾಯವಾಗಿ ಹೊರಡುವ ಪ್ರವಾಸಗಳು, ಔತಣಕೂಟಗಳು ಅಭ್ಯಾಸವಾದ ಹೊಸತರಲ್ಲಿ ಆತ್ಮೀಯತೆ ಹೆಚ್ಚಿಸುವುದರಿಂದ ಆಹ್ಲಾದಕಾರಿಯಾಗಿರುತ್ತವೆ. ನಂತರದ ದಿನಗಳಲ್ಲಿ ಸಂಬಂಧಗಳು ತಂದೊಡ್ಡುವ ಬಿಕ್ಕಟ್ಟುಗಳನ್ನು ವಿವೇಕದಿಂದ ನಿರ್ವಹಿಸಲು ಸಾಧ್ಯವಾಗದಿದ್ದರೆ ಅತ್ತ ಪ್ರವಾಸ, ಪಾರ್ಟಿ ಮುಂತಾದ ಅಭ್ಯಾಸಗಳನ್ನು ಬಿಡಲೂ ಆಗದೆ, ಎಲ್ಲರನ್ನೂ ಮೆಚ್ಚಿಸುವ ಸಾಹಸದಲ್ಲಿ ನಮ್ಮ ನೆಮ್ಮದಿಯನ್ನು ನಾವೇ ಕಳೆದುಕೊಳ್ಳಬೇಕಾಗುತ್ತದೆ. ಹವ್ಯಾಸಗಳು/ಅಭ್ಯಾಸಗಳುನಾವು ಯಾರೊಂದಿಗೆ ಬೆರೆಯುತ್ತೇವೆ, ಎಂತಹವರೊಂದಿಗೆ ಬಾಂಧವ್ಯ ಹೊಂದಲು ತಯಾರಾಗುತ್ತಿದ್ದೇವೆ ಎನ್ನುವುದನ್ನು ನಿರ್ದೇಶಿಸುವ ಕಾರಣ ನಮ್ಮ ಹವ್ಯಾಸಗಳೊಟ್ಟಿಗೆ ಬರುವ ಜನರ ಒಡನಾಟದ ಕುರಿತು ಎಚ್ಚರವಾಗಿರಬೇಕು. ವಿವೇಚನೆಯಿಲ್ಲದ ಜನರ ಸಹವಾಸದಲ್ಲಿ ಹವ್ಯಾಸಗಳು ಚಟಗಳಾಗಿ ಬದಲಾಗಲು ಹೆಚ್ಚಿನ ಸಮಯವೇನೂ ಬೇಕಾಗುವುದಿಲ್ಲ.



### ಹವ್ಯಾಸಗಳು ಚಟಗಳಂತಾಗದಿರಲು ಕೆಲವು ವಿಚಾರಗಳ ಕಡೆಗೆ ಗಮನ ನೀಡಬೇಕು

- ನಮ್ಮ ಹವ್ಯಾಸಗಳು ನಮ್ಮತನದ ಅಭಿವ್ಯಕ್ತಿಗೆ, ನಮ್ಮ ಆಂತರಿಕ ಮೌಲ್ಯಗಳಿಗೆ ಸರಿಹೊಂದುವಂತಿರಬೇಕು. ಉದಾ: ಜನರ ಸಹವಾಸವನ್ನು ಇಷ್ಟಪಡದವರು ಸುಮ್ಮನೆ ತೋರಿಕೆಗಾಗಿ ಗುಂಪು ಚಟುವಟಿಕೆಗಳನ್ನು ಮಾಡಲು ಉತ್ಸುಕರಾಗಿರುವವರಂತೆ ನಟಿಸುವುದರಿಂದೇನು ಪ್ರಯೋಜನ?
- ನಮ್ಮ ಅಭ್ಯಾಸಗಳು ಸಮಯದೊಂದಿಗಿನ ನಮ್ಮ ಸಂಬಂಧವನ್ನು ನಿರ್ಧರಿಸುತ್ತವೆ. ದಿನದ ಕೇವಲ ಅರ್ಧಗಂಟೆಯಾದರೂ ಸರಿ ತನ್ಮಯತೆಯಿಂದ ಪ್ರತಿಕ್ಷಣವೂ ವರ್ತಮಾನದಲ್ಲಿರುವಂತಹ ಚಟುವಟಿಕೆಗಳನ್ನು ಮಾಡುವುದರಿಂದ ದಿನದ ಮಿಕ್ಕ ಸಮಯವನ್ನು ಸದುಪಯೋಗಪಡಿಸಿಕೊಳ್ಳುವ ಪ್ರೇರಣೆಯುಂಟಾಗುತ್ತದೆ.
- ನಮ್ಮ ಹವ್ಯಾಸಗಳು/ಅಭ್ಯಾಸಗಳು/ಆಚರಣೆಗಳು ನಮ್ಮ ನಿಯಂತ್ರಣದಲ್ಲಿರಬೇಕೇ ಹೊರತು ನಾವೇ ಅವುಗಳ ನಿಯಂತ್ರಣದಲ್ಲಿರಬಾರದು. ಅವು ನಮಗೆ ಸಂತಸ ತರಬೇಕು. ಕಾರಣಾಂತರಗಳಿಂದ ಆ ಹವ್ಯಾಸದಲ್ಲಿ ತೊಡಗಿಕೊಳ್ಳಲಾಗದೆ ಇದ್ದಾಗ ಅದರ ನೆನಪೇ ಉಲ್ಲಾಸ ತರುವಂತಿರಬೇಕೆ ಹೊರತು ನಮ್ಮಿಷ್ಟದ ಚಟುವಟಿಕೆಯನ್ನು ಮಾಡಲಾಗದ್ದಕ್ಕೆ ಚಡಪಡಿಕೆ, ಹಪಾಹಪಿ, ಅತೃಪ್ತಿ, ಅಪೂರ್ಣತೆಯನ್ನು ತಂದುಕೊಡಬಾರದು. ನಮ್ಮ ಜೀವನದ ಸಂತೋಷ, ಸಂತೃಪ್ತಿ ಎಲ್ಲವೂ ಒಂದು ನಿರ್ದಿಷ್ಟ ಹವ್ಯಾಸದ ಮೇಲೆ ಅವಲಂಬಿತವಾಗಿರುವುದು ಸಲ್ಲದು.
- ನಮ್ಮ ಸುತ್ತಲಿನ ಪ್ರಪಂಚದ ವೈಶಾಲ್ಯವನ್ನು, ಸಮಾಜದ ವೈವಿಧ್ಯವನ್ನು, ಜೀವನದ ಸಮಗ್ರತೆಯನ್ನು ಗಣನೆಗೇ ತಂದುಕೊಳ್ಳದೆ ನಮ್ಮದೇ ಚಿಕ್ಕ ಪ್ರಪಂಚದಲ್ಲಿ ಬಚ್ಚಿಟ್ಟುಕೊಳ್ಳಬೇಕಾದ ಸನ್ನಿವೇಶ ಸೃಷ್ಟಿಸುವ ಚಟುವಟಿಕೆಗಳು ಹವ್ಯಾಸಗಳಲ್ಲ ಅವು ಚಟಗಳು. ಒಳಗಿನ ಬೆಳಕನ್ನು, ಅದರ ಪ್ರಖರತೆಯನ್ನು ಕುಗ್ಗಿಸುವ ಚಟುವಟಿಕೆಗಳು ಅದೆಷ್ಟೇ ಆಕರ್ಷಿಸಿದರೂ ಕೊನೆಗೆ ಅನಾರ್ಥಕಾರಿಯೇ ಆಗುವುದರಿಂದ ಮೊದಲೇ ಜಾಗೃತರಾಗಿರುವುದು ಲೇಸು.

# ಎಷ್ಟೊಂದು ತಲೆನೋವುಗಳು

ಡಾ. ಪಲ್ಲವಿ ಹೆಗಡೆ

ತಲೆ ಇದ್ದವರೆಲ್ಲರೂ ಜೀವನದಲ್ಲಿ ಒಮ್ಮೆಯಾದರೂ ಅನುಭವಿಸಿರುವ ನೋವು 'ತಲೆನೋವು'! ನಮ್ಮನ್ನು ಸುಮಾರು ನೂರೈವತ್ತು ಬಗೆಯ ತಲೆನೋವುಗಳು ಕಾಡಬಲ್ಲವು ಎಂದು ಒಂದು ಲೆಕ್ಕವಿದೆ. ಇದೇ ಒಂದು ರೋಗವಾಗಿ ಕಾಡಬಹುದು, ಅಥವಾ ಮತ್ತೆ ಯಾವುದೋ ಇನ್ನೊಂದು ರೋಗದ ಲಕ್ಷಣವಾಗಿಯೂ ಕಾಣಿಸಿಕೊಳ್ಳಬಹುದು. ಆದ್ದರಿಂದ ತಲೆನೋವು ಕಾಣಿಸಿಕೊಂಡಾಗ ನಿರ್ಲಕ್ಷಿಸುವುದು ಸರಿಯಲ್ಲ. ತಲೆನೋವು ಯಾವುದೇ ಆಗಿರಲಿ, ಅದರ ಪರಿಹಾರಕ್ಕಂತೂ ಕಾರಣಗಳು ಸ್ಪಷ್ಟವಾಗಿರಬೇಕಾಗುತ್ತದೆ. ಇದು ಹೇಗೆಂದರೆ, ಉತ್ತಮೋತ್ತಮ ಬೀಜವನ್ನು ಬರಡುಭೂಮಿಯಲ್ಲಿ ಬಿತ್ತಿದರೂ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲವಲ್ಲವೆ? ಎಂದರೆ, ರೋಗಕಾರಣವೇ ಬೀಜ; ಸದೃಢ-ಶುದ್ಧಶರೀರವೇ ರೋಗ ಬೆಳೆಯದಿರುವ ಬರಡುಭೂಮಿ.

ಸೃಷ್ಟಿಯಲ್ಲಿರುವ ವಸ್ತುಗಳು ತನಗೆ ಯೋಗ್ಯವೇ, ಆರೋಗ್ಯದಾಯಕವೇ – ಎಂದು ವಿವೇಚನೆ ಮಾಡುವಷ್ಟು ಬುದ್ಧಿಯನ್ನು ಸಂಪಾದಿಸದಿರುವುದು ನಮ್ಮದೇ ತಪ್ಪು! ಮಾತ್ರವಲ್ಲ, ಬುದ್ಧಿ ನೆಟ್ಟಗಿದ್ದು, ಮನಸ್ಸು ಗಟ್ಟಿಯಿರದಿದ್ದರೆ ಆಚರಣೆ ಸಾಧ್ಯವಿಲ್ಲ. ಬುದ್ಧಿ-ಮನಸ್ಸು ಸರಿಯಿದ್ದರೂ ಹಿಂದಿನ ಘಟನೆಗಳು/ ಬೇರೆಯವರ ಅನುಭವಗಳು ಸದ್ಯದ ಸಂದರ್ಭದಲ್ಲಿ ಮರೆತರೆ ಅದು ಕೂಡ ನಮ್ಮದೇ ತಪ್ಪಲ್ಲವೇ? ಸ್ವತಃ ಯಾವುದೇ ವಸ್ತು/ ವಿಷಯ/ ವ್ಯಕ್ತಿ ನಮ್ಮ ಬದುಕಿನಲ್ಲಿ ಪ್ರವೇಶಿಸಲು ಆಗದು (ನಾವು ಎಡೆ ಮಾಡಿಕೊಡದ ಹೊರತು). ಆದ್ದರಿಂದ ರೋಗಗಳ ಬೀಜ ನಮ್ಮಲ್ಲಿ ಮೊಳೆಯದಂತೆ ನಮ್ಮ ಶರೀರವನ್ನು ಬರಡಾಗಿಸಿಕೊಳ್ಳೋಣ! ಈ ಪ್ರಕ್ರಿಯೆಯಲ್ಲಿ ನಮ್ಮ ತಲೆಯೇ 'ಹೆಡ್ ಆಫೀಸ್'.

ವಿದ್ಯುಚ್ಛಕ್ತಿ ನಮ್ಮ-ನಿಮ್ಮ ಮನೆಗಳಲ್ಲಿ ಬಾರದೇ ಇದ್ದರೂ ತೊಂದರೆ ಅಷ್ಟಿಲ್ಲ. ಉತ್ಪತ್ತಿ ಮಾಡುವ ಕಾರ್ಯಾಗಾರದಲ್ಲಿ ತಡೆಯಾದರೆ ದೇಶದ ಗತಿ?! ಹಾಗೆಯೇ ನಮ್ಮ ತಲೆ. ಶರೀರದ 'ಉತ್ತಮಾಂಗ'ವೆಂದೇ ಕರೆಯಲ್ಪಡುತ್ತದೆ ನಮ್ಮ ಶಿರಸ್ಸು. ತಲೆಯು ಜ್ಞಾನೇಂದ್ರಿಯಗಳ ಅಧಿಷ್ಠಾನಗಳಿಗೆ ಆಶ್ರಯ, ಶರೀರದ ಊರ್ಧ್ವಭಾಗ, ಮೂವತ್ತೇಳು ಮರ್ಮಗಳನ್ನೊಳಗೊಂಡಿರುವ ಶಿರಸ್ಸು, ಸ್ವತಃ ಮೂರು ಜೀವಸ್ಥಾನ(ತ್ರಿಮರ್ಮ)ಗಳಲ್ಲಿ ಒಂದು; ಇದು ಪ್ರಾಣವಾಯುವಿನ ಹರಿವಿನ ಮಾರ್ಗ ಕೂಡ; ಇಂದ್ರಿಯಗಳ ಪೋಷಣೆ, ರಕ್ಷಣೆ ಮಾಡುವ ಅಂಶ, ಅಂದರೆ 'ತರ್ಪಕ ಕಫ'ದ ಸ್ಥಾನವೂ ಹೌದು. ಆದ್ದರಿಂದ ಶರೀರದ ಇತರ ಭಾಗಗಳಲ್ಲಿ ಆಗುವ ತೊಂದರೆಗಿಂತ ತಲೆಗೆ ಒದಗುವ ಅಪಘಾತ/ ರೋಗವು ಜೀವನವನ್ನು ಬರ್ಬರವಾಗಿಸುತ್ತದೆ.

ತಲೆನೋವುಗಳ ಸ್ವರೂಪ ಹೇಗಿದ್ದರೂ ಅವುಗಳ ಬೀಜ, ಅಂದರೆ ಕಾರಣಗಳು ಮಾತ್ರ ಹೀಗಿರುತ್ತವೆ:

- ನಮ್ಮ ಶರೀರದ ಹದಿಮೂರು ಸ್ವಾಭಾವಿಕ ಕೆರೆಗಳು (ಅಂದರೆ: ಮಲ, ಮೂತ್ರ, ಅಧೋವಾತ (ಹೂಸು), ತೇಗು, ಸೀನು, ಆಕಳಿಕೆ, ಕೆಮ್ಮು, ಹಸಿವು, ಬಾಯಾರಿಕೆ, ನಿದ್ರೆ, ಕಣ್ಣೀರು, ಶುಕ್ರವೇಗ, ಏದುಸಿರು) ಇವುಗಳನ್ನು ಸಕಾಲದಲ್ಲಿ ಗಮನಿಸದಿರುವುದು, ಅನುಸರಿಸದಿರುವುದು.
- ಹಗಲು ನಿದ್ರೆ ಮಾಡುವುದು.
- ರಾತ್ರಿ ನಿದ್ರೆಗೆಡುವುದು.
- ಅತಿಯಾಗಿ ನಿದ್ರೆ ಮಾಡುವುದು.
- ಕ್ರಮ ತಪ್ಪಿದ ಮದ್ಯಪಾನ.
- ಸತತವಾಗಿ ಮಾತು, ಹರಟೆ, ಜೋರಾಗಿ, ದೊಡ್ಡ ಧ್ವನಿಯಲ್ಲಿ ಕಿರುಚುವುದು, ಮಾತನಾಡುವುದು.
- ಅತಿಯಾಗಿ ಮೈಥುನ ಮಾಡುವುದು.
- ಇಬ್ಬನಿ ವಾತಾವರಣದಲ್ಲಿ ಬಹಳ ಹೊತ್ತು ಇರುವುದು.
- ಬಿರುಸು ಗಾಳಿಗೆ ತಲೆ/ಮೈ ಒಡ್ಡುವುದು.
- ದೂಳು, ಹೊಗೆ, ಮಂಜು, ಬಿಸಿಲುಗಳಲ್ಲಿ ಬಹಳ ಹೊತ್ತು ಇರುವುದು.
- ಎದುರು ಬೀಸುವ ಗಾಳಿಗೆ ಮೈಯೊಡ್ಡುವುದು, ಮುಖವನ್ನು ಒಡ್ಡುವುದು.
- ಜಲಕ್ರೀಡೆ - ಈಜು ಇತ್ಯಾದಿ; ನೀರಿನಲ್ಲಿ ಬಹಳ ಹೊತ್ತು ಇರುವುದು.
- ಅಭ್ಯಾಸವಿರದ/ತೀವ್ರ ಹೇಸಿಗೆಯಾಗುವಂತಹ ವಾಸನೆಯ ಸೇವನೆಯಿಂದ.
- ಅತಿಯಾಗಿ (ಬಾಯಾರಿಕೆ ಇಲ್ಲದಿದ್ದರೂ) ಲೀಟರ್ ಗಟ್ಟಲೆ ನೀರನ್ನು ಕುಡಿಯುವುದು.
- ಅತಿಯಾದ ಜೀರ್ಣಕ್ಕೆ ಒಗ್ಗದ ಜಡವಾದ, ಹುಳಿಹುಳಿಯಾದ, ಹೆಚ್ಚು ಹಸಿಸೊಪ್ಪು ಪ್ರಧಾನವಾದ ಆಹಾರಸೇವನೆ.
- ತಲೆಗೆ ಅತಿಯಾದ ಶಾಖವನ್ನು ಕೊಟ್ಟು ಬೆವರಿಗೆ ಅವಕಾಶ ಕೊಡುವುದು; ಬಿಸಿ ಬಿಸಿ ನೀರಿನಿಂದ ತಲೆಸ್ನಾನ ಮಾಡುವುದು.
- ಹೊಸ ಪ್ರದೇಶದ, ಎಂದರೆ ಅಭ್ಯಾಸವಿಲ್ಲದ ಸ್ಥಳ, ವಾತಾವರಣ ವ್ಯತ್ಯಾಸದಿಂದ.
- ಮೋಡ ಕವಿದ ವಾತಾವರಣದಲ್ಲಿ ತಂಗುವುದು.
- ಅತಿಯಾಗಿ ಅಳುವುದು.
- ಕಣ್ಣೀರನ್ನು ತಡೆಯುವುದು.
- ಮಾನಸಿಕ ಚಿಂತೆ; ಕೊರಗುವುದು, ದುಃಖದಿಂದ.
- ಆಳವಾದ ಸ್ಥಳವನ್ನು ಸತತವಾಗಿ ದಿಟ್ಟಿಸಿ ನೋಡುವುದರಿಂದ.
- ಕ್ರಿಮಿಗಳ ಉತ್ಪತ್ತಿಯಿಂದ.
- ಬಿಸಿಲು, ಗಾಳಿ, ಮಳೆಗಳಂತಹ ವಾತಾವರಣದಲ್ಲಿ ತಲೆಗೆ ರಕ್ಷಣೆಗಾಗಿ ಟೋಪಿ/ ಪೇಟ/ ಛತ್ರಿ ಉಪಯೋಗಿಸದಿರುವುದು.
- ಶರೀರವನ್ನು, ತಲೆಯನ್ನು 'ಶೋಧನೆ' ಮಾಡದಿರುವುದು.
- ತಲೆಗೆ ಅಥವಾ ನೆತ್ತಿಗೆ ಎಣ್ಣೆ ಹಚ್ಚುವ ಅಭ್ಯಾಸವಿಲ್ಲದಿರುವುದು.
- ತಲೆಗೆ ಪೆಟ್ಟು ಬೀಳುವುದು.


### ಕೆಲವು ಪರಿಹಾರಗಳು

- ಅತಿಯಾಗಿ ಆಹಾರ ಸೇವಿಸಿ ಅಥವಾ ಅಜೀರ್ಣವಾಗಿದ್ದಾಗ ತಲೆನೋವು ಬಂದಿದ್ದರೆ, ಆಹಾರ ಜೀರ್ಣವಾಗುವಂತೆ ಹಸಿ ಅಥವಾ ಒಣಶುಂಠಿಯ ತುಂಡೊಂದನ್ನು ನೀರಿನಲ್ಲಿ ಕುದಿಸಿ ಆರಿಸಿದ ನೀರನ್ನು ಗುಟುಕು ಗುಟುಕು ಕುಡಿಯುವುದು ಉತ್ತಮ. ಶುಂಠಿಯೊಂದಿಗೆ ಸೈಂಧವ ಉಪ್ಪು ಚಿಟಿಕೆಯಷ್ಟು ಸೇರಿಸಿ ಬಾಯಿಗೆ ಹಾಕಿಕೊಂಡು ಚಪ್ಪರಿಸುವುದು ಜೀರ್ಣಕ್ರಿಯೆಗೆ ಸಹಕಾರಿ. ಹೀಗೆ ಮಾಡಿದರೆ, ತಲೆನೋವು ಸಾಮಾನ್ಯವಾಗಿ ಹತ್ತು-ಹದಿನೈದು ನಿಮಿಷಗಳಲ್ಲಿ ಇಳಿಯುತ್ತದೆ. ಹೀಗೆ ಮಾಡಿಯೂ ಕಡಿಮೆ ಆಗದಿದ್ದಾಗ ಮುಂದಿನ ಆಹಾರವನ್ನು ತ್ಯಜಿಸಿ, ಖಾಲಿಹೊಟ್ಟೆಯಲ್ಲಿ ಸಹಜವಾಗಿಯೇ ಆಹಾರವು ಜೀರ್ಣವಾಗಲು ಬಿಡುವುದು ಉತ್ತಮ.
- ತಲೆಭಾರದ ನೋವಿದ್ದರೆ ಹಸಿಶುಂಠಿಯನ್ನು ಹಾಲಿನಲ್ಲಿ ತೇಯ್ದು, ಅಥವಾ ಒಣಶುಂಠಿ ಪುಡಿಯನ್ನು ಹಾಲಿನಲ್ಲಿ ಸೇರಿಸಿ ಸಣ್ಣ ಉರಿಯಲ್ಲಿ ಬಿಸಿ ಮಾಡಬೇಕು. ಈ ಬಿಸಿಲೇಪವನ್ನು ಹಣೆಗೆ ಹಚ್ಚಿ ಅರ್ಧ ಗಂಟೆ ಕಾಯಬಹುದು. ಆಗಲೂ ತಲೆನೋವು ಕಡಿಮೆ ಆಗದಿದ್ದರೆ ವೈದ್ಯರ ನೆರವನ್ನು ಪಡೆಯುವುದು.
- ಯಾವುದೇ ತಲೆನೋವು ಸತತವಾಗಿ, ಪದೇ ಪದೇ ಕಾಡುತ್ತಿದ್ದರೆ ನೋವು ನಿವಾರಕಗಳನ್ನು ಬಳಸುತ್ತಾ ಮುಂದೂಡುವುದು ಸರಿಯಲ್ಲ. ಮತ್ತೊಂದು ಗಂಭೀರ ಸಮಸ್ಯೆಯೇ ಸೂಚಕವೂ ಆಗಿರಬಹುದು. ವೈದ್ಯರ ಸಲಹೆಯನ್ನು ಪಡೆಯುವುದು ಒಳ್ಳೆಯದು.

### ತಲೆನೋವಿನ ಸಮಸ್ಯೆಗಳನ್ನು ತಡೆಯಲು

ಮಾಡಬೇಕಾದ ನಿತ್ಯಕರ್ಮಗಳನ್ನು ತಪ್ಪದೇ ಮಾಡುವುದು. ಉದಾಹರಣೆಗೆ: ತಲೆಗೆ ಎಣ್ಣೆ ಹಾಕುವುದು, ಹಸಿವು-ಬಾಯಾರಿಕೆಗಳನ್ನು ಗಮನಿಸಿ ಅನ್ನ-ನೀರುಗಳನ್ನು ಸೇವಿಸಿವುದು, ರಾತ್ರಿ ಬೇಗ ಮಲಗಿ, ಮುಂಜಾನೆ ಬೇಗ ಏಳುವುದು, ಹಗಲುನಿದ್ರೆ ಮಾಡದೆ ಚಟುವಟಿಕೆಯಿಂದ ಇರುವುದು, ಯಾವ ಕೆಲಸವನ್ನೂ ಆಯಾಸವಾಗುವಷ್ಟು ಮಾಡದಿರುವುದು.

- ಮಾಡಬಾರದ್ದನ್ನು ಮಾಡದಿರುವುದು ರೋಗಗಳಿಂದ ನಮ್ಮನ್ನು ದೂರ ಕೊಂಡೊಯ್ಯುತ್ತದೆ. ಅಂದರೆ, ಶಾರೀರಿಕ ಕರೆಗಳನ್ನು ಗೌರವಿಸಿ, ಅವುಗಳು ಸಕಾಲದಲ್ಲಿ ಬರುವಂತೆ, ಬಂದಾಗ ಗಮನಿಸುವ ಅಭ್ಯಾಸ. ಹೀಗಾಗಿ, ಸಕಾಲದಲ್ಲಿ ಹಿತಮಿತವಾದ ಆಹಾರ, ನಿದ್ರಾ ವ್ಯವಹಾರವಿರಲಿ.
- ಜೊತೆಗೆ, ನಿತ್ಯವೂ ತಲೆಗೆ, ಕಿವಿಗೆ, ಮೂಗಿಗೆ, ಶರೀರಕ್ಕೆ ಎಣ್ಣೆ ಹಾಕುವ/ ಹಚ್ಚುವ ಅಭ್ಯಾಸ ಮಾಡಿಕೊಳ್ಳಬೇಕು.
- ಮುಖ್ಯವಾಗಿ, ರಾತ್ರಿಯ ಆಹಾರ -ಪಾನಗಳು ಸೂರ್ಯಕಂತುವ ಮುನ್ನ ಅಥವಾ ನಂತರ ಎರಡು ತಾಸಿನೊಳಗೆ ಮುಗಿಯಲಿ.



# ಆಸನ ಆಟ ಅವಘಡಕ್ಕೆ ಆಹ್ವಾನವಾಗದಿರಲಿ

ಎಸ್. ಎನ್. ಓಂಕಾರ್

**ಆಸನಗಳಾಗಲಿ,** ಆಟಗಳಾಗಲಿ, ಯಾವುದೇ ವ್ಯಾಯಾಮ ವಿಧಾನಗಳಾಗಲಿ, ಅಭ್ಯಾಸ ಮಾಡಬೇಕಾದರೆ ಪ್ರಮುಖವಾಗಿ ಈ ಮೂರನ್ನು ಗಮನಿಸಬೇಕು:

1. ದೇಹಧರ್ಮ
2. ವಯೋಧರ್ಮ
3. ಮನೋಧರ್ಮ

**1. ದೇಹಧರ್ಮ:** ದೇಹಧರ್ಮವೆಂದರೆ ನಮ್ಮ ದೇಹದ ವಿವಿಧ ಅಂಗಗಳ ಕಾರ್ಯಕ್ಷಮತೆಯ ಅರಿವು ಇರುವುದು. ನಮ್ಮ ದೇಹಕ್ಕೆ ಒಗ್ಗುವಂತಹ ಕ್ರಮಗಳನ್ನು ಹಂತಹಂತವಾಗಿ ಅಳವಡಿಸಿಕೊಳ್ಳಬೇಕು. ಏಕಾಏಕಿ ದೇಹವನ್ನು ಅತಿಯಾದ ದಂಡನೆಗೆ ಒಳಪಡಿಸಕೂಡದು. ದೇಹದ ಕಾರ್ಯಕ್ಷಮತೆಯನ್ನು, ಕೆಲವು ವೈದ್ಯಕೀಯ ಪರೀಕ್ಷೆಗಳನ್ನು ವರ್ಷಕೊಮ್ಮೆಯಾದರೂ ಮಾಡಿಸಿಕೊಳ್ಳುವ ಮೂಲಕ ದೃಢಪಡಿಸಿಕೊಳ್ಳಬೇಕು.

**2. ವಯೋಧರ್ಮ:** ನಾವು ಅಳವಡಿಸಿಕೊಳ್ಳುವ ವಿಧಾನಗಳು ವಯೋಧರ್ಮಕ್ಕೆ ಅನುಗುಣವಾಗಿರಬೇಕು. ವಯಸ್ಸಾದಂತೆಲ್ಲ ದೇಹವು ಅನೇಕ ಬದಲಾವಣೆಗೆ ಒಳಗಾಗುತ್ತದೆ. ಅದಕ್ಕೆ ತಕ್ಕ ಹಾಗೆ ನಮ್ಮ ಅಭ್ಯಾಸಗಳನ್ನು ಹೊಂದಿಸಿಕೊಳ್ಳಬೇಕು.

**3. ಮನೋಧರ್ಮ:** ನಾವು ಮಾಡುವ ಎಲ್ಲಾ ಚಟುವಟಿಕೆಗಳಲ್ಲಿ ಮನಸ್ಸಿನ ಪಾತ್ರ ಮಹತ್ತರವಾಗಿರುತ್ತದೆ. ನಾವು ಆಯ್ದುಕೊಳ್ಳುವ ಚಟುವಟಿಕೆಗಳು ಮನಸ್ಸಿಗೆ ಹಿತಕರವಾಗಿರುವಂತಹದ್ದಾಗಿರಬೇಕೇ ಹೊರತು ಬಲವಂಥದ್ದಾಗಿರಬಾರದು.

ಈ ಮೂರೂ ಧರ್ಮಗಳನ್ನು ಗೌರವಿಸಿ, ವ್ಯಾಯಾಮ ವಿಧಾನಗಳು ಹಾಗೂ ಅವುಗಳ ಅಭ್ಯಾಸದ ಮಟ್ಟಗಳಗಳನ್ನು ನಿರ್ಧರಿಸಿಕೊಳ್ಳಬೇಕು. ಇದೆಲ್ಲದರ ಜೊತೆ ಯಾವುದೇ ಚಟುವಟಿಕೆಗಳನ್ನು ಪ್ರಾರಂಭಿಸುವುದಕ್ಕೆ ಮುನ್ನ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಉದಾಹರಣೆಗೆ, ಯಾವುದೇ ರೀತಿಯ ಯೋಗಾಸನಗಳ ಅಭ್ಯಾಸ ಮಾಡಬೇಕಾದರೆ ಕೆಲವು ಪೂರ್ವಸಿದ್ಧತಾ ಆಸನಗಳನ್ನು ಮಾಡಿ ನಮ್ಮ ದೇಹದ ಪ್ರಮುಖ ಸ್ಥಿರತೆಯ ಸ್ನಾಯುಗಳನ್ನು ಸಚೇತನಗೊಳಿಸಬೇಕು. ವಿಶೇಷವಾಗಿ ಸ್ನಾಯುಗಳ ಸಮೂಹ ನಮ್ಮ ಪೃಷ್ಠ, ಸೊಂಟ, ಅಸ್ತಿಕುಹರ ಹಾಗೂ ಉದರದ ಭಾಗಗಳಲ್ಲಿ ಇರುತ್ತದೆ. ಅಂತಹ ಕೆಲವು ಆಸನಗಳನ್ನು ಇಲ್ಲಿ ತೋರಿಸಲಾಗಿದೆ (ಚಿತ್ರಗಳನ್ನು ನೋಡಿ). ಈ ಆಸನಗಳನ್ನು ಆಟ ಆಡುವ ಮುನ್ನ, ಓಟದ ಮುನ್ನ, ನಡಿಗೆಯ ಮುನ್ನ ಅಳವಡಿಸಿಕೊಳ್ಳುವುದು ಉತ್ತಮ.

ಇದರೊಂದಿಗೆ ನಾವು ಆಳವಡಿಸಿಕೊಳ್ಳುವ ವಿಧಾನಗಳನ್ನು ಹಂತಹಂತವಾಗಿ ಅಭ್ಯಾಸ ಮಾಡಬೇಕು. ಪತಂಜಲಿಗಳು ಹೇಳುವಂತೆ ಅದು –


1. ದೀರ್ಘಕಾಲೀನವಾಗಿರಬೇಕು
2. ನಿರಂತರವಾಗಿರಬೇಕು
3. ಉತ್ಸಾಹಯುಕ್ತ ಮನಸ್ಸಿನಿಂದ ಮಾಡಬೇಕು


ಯೋಗಾಭ್ಯಾಸಿಗಳ ಸಂಖ್ಯೆ ಗಣನೀಯವಾಗಿ ಏರುತ್ತಿರುವಂತೆಯೇ ಇದರ ಸುರಕ್ಷತೆಯ ಬಗ್ಗೆಯೂ ಪ್ರಶ್ನೆಗಳು ಏಳುತ್ತಿವೆ. ಇತ್ತೀಚೆಗೆ ಯೊಗವನ್ನು ಚಿಕಿತ್ಸಾ ಪದ್ಧತಿಯಾಗಿ ಬಳಸುತ್ತಿರುವುದು ಇಂತಹ ಅನುಮಾನಗಳಿಗೆ ಕಾರಣವಾಗಿರುತ್ತದೆ. ಯೋಗ ಅಭ್ಯಾಸದಿಂದ ಉಂಟಾಗುವ ಅವಘಡಗಳ ಕುರಿತಾಗಿ ಅನೇಕ ಸಂಶೋಧನಾ ಲೇಖನಗಳು ಅಂತರ ರಾಷ್ಟ್ರೀಯ ವಿಜ್ಞಾನ ನಿಯತಕಾಲಿಕಗಳಲ್ಲಿ ಪ್ರಕಟಗೊಳ್ಳುತ್ತಿವೆ. ಉದಾಹರಣೆಗೆ: Cramer, H., Quinker, D., Schumann, D. et al. Adverse effects of yoga: a national cross-sectional survey. BMC Complement Altern Med 19, 190 (2019). https://doi.org/10.1186/s12906-019-2612-7


ಇಂತಹ ಅವಘಡಗಳಿಂದ ಜಿಮ್‌ಗಳು ಕೂಡ ಹೊರತಾಗಿಲ್ಲ.


ಅರ್ಧ ಪವನಮುಕ್ತಾಸನ


ಸಹಜ ಉಸಿರಾಟ


ಅರ್ಧ ಪವನಮುಕ್ತಾಸನ


ಉತ್ಥಾನಪಾದಾಸನ


ಅರ್ಧ ಪದ್ಮಾಸನ

### ನೆನಪಿನಲ್ಲಿಡಲೇಬೇಕಾದ ಅಂಶಗಳು

- ಹೊರಾಂಗಣದಲ್ಲಿ ಅಭ್ಯಾಸ ಮಾಡುವವರು ವಾತಾವರಣದ ಬಗ್ಗೆ ಗಮನವಿಡುವುದು ಅತ್ಯವಶ್ಯಕ.
- ಇಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಯಾಮದ ಅನೇಕ ಚಿತ್ರಣಗಳು ಮೂಡಿಬರುತ್ತಿರುತ್ತವೆ. ಸ್ಪಷ್ಟವಾದ ಅರಿವಿಲ್ಲದೆ ಅವುಗಳನ್ನು ಅಭ್ಯಾಸ ಮಾಡಬಾರದು.
- ರೋಗನಿವಾರಕ ಕ್ರಮಗಳು ಆಗಾಗ ಅಂತರ್ಜಾಲ ಮಾಧ್ಯಮದಲ್ಲಿ ಕಾಣಸಿಗುತ್ತವೆ. ವೈದ್ಯರ ಸಲಹೆ ಇಲ್ಲದೇ ಅವುಗಳನ್ನು ಅಳವಡಿಸಿಕೊಳ್ಳಬಾರದು.
- ಆಹಾರಕ್ರಮಗಳ ಬಗ್ಗೆ ಗಮನವಿರಲಿ. ಅನೇಕ ಅವೈಜ್ಞಾನಿಕ ಆಹಾರ ನಿಯಂತ್ರಣ ಪದ್ಧತಿಗಳು ಹೇರಳವಾಗಿ ಲಭ್ಯವಿರುತ್ತದೆ. ಇವುಗಳ ಬಗ್ಗೆ ಎಚ್ಚರವಿರಲಿ.
- ಬಳ್ಳಿಯಂತೆ ತೆಳುಕಾಯದವರು (ಜೀರೋ ಸೈಜ್) ಆಗಬೇಕೆಂಬ ಅನಗತ್ಯ ಕೃತಕ ಒತ್ತಡಕ್ಕೆ ಒಳಗಾಗಬೇಡಿ. ದೇಹದ ಗಾತ್ರ ನಮ್ಮ ಪ್ರಕೃತಿಯನ್ನು ಅವಲಂಬಿಸಿರುತ್ತದೆ. ಎಲ್ಲರೂ ತೆಳುವಾಗಬೇಕೆಂಬ ಆಸೆ ಬೇಡ. ಸ್ಥೂಲಕಾಯದವರೂ ಆಹಾರ ಮತ್ತು ವ್ಯಾಯಾಮ ವಿಧಾನಗಳನ್ನು ನುರಿತ ಪರಿಣತರ ಸಲಹೆಯ ಮೇರೆಗೆ ಅಳವಡಿಸಿಕೊಳ್ಳಬೇಕು.
- ಸಪ್ರಮಾಣದ ವಿಶ್ರಾಂತಿಯ ಕಡೆಗೂ ಗಮನ ಕೊಡಬೇಕು.
- ಆಹಾರ ಮತ್ತು ವ್ಯಾಯಾಮಗಳಲ್ಲಿ ನೆನಪಿಡಬೇಕಾದ ಸತ್ಯ: 'ಅತಿಯಾದರೆ ಅಮೃತವೂ ವಿಷ'.

ಮಹಾರಾಷ್ಟ್ರ ಬಿಕ್ಕಟ್ಟಿಗೆ ಇನ್ನೊಂದು ತಿರುವು: ವಿಚಾರಣೆಗೆ ಹಾಜರಾಗುವಂತೆ ಸೂಚನೆ

# ರಾವುತ್‌ಗೆ ಇ.ಡಿ. ಸಮನ್ಸ್: ವಿರೋಧ

ಪ್ರಜಾವಾಣಿ ವಾರ್ತೆ

**ಮುಂಬೈ:** ಮಹಾರಾಷ್ಟ್ರದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನ ನಡುವೆಯೇ ಶಿವಸೇನಾ ಮುಖ್ಯ ವಕ್ತಾರ, ರಾಜ್ಯಸಭಾ ಸದಸ್ಯ ಸಂಜಯ ರಾವುತ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಸಮನ್ಸ್ ಜಾರಿ ಮಾಡಿದೆ. ₹1,034 ಕೋಟಿ ಮೊತ್ತದ ಪಾತ್ರ ಚಾಲ್ ಭೂಹಗರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಈ ಸಮನ್ಸ್ ಜಾರಿ ಮಾಡಲಾಗಿದೆ.

ಈ ಬೆಳವಣಿಗೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ವಿರೋಧ ಪಕ್ಷಗಳು, ಇ.ಡಿ.ಯನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿವೆ. ಇ.ಡಿ.ಯ ಈ ಕ್ರಮವನ್ನು ಮಹಾ ವಿಕಾಸ ಅಘಾಡಿ ನಾಯಕರೂ ಖಂಡಿಸಿದ್ದಾರೆ. ಮಹಾರಾಷ್ಟ್ರ ಸರ್ಕಾರವನ್ನು ಅಸ್ಥಿರಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ಈ ತಂತ್ರ ಅನುಸರಿಸಿದೆ ಎಂದು ಅವರು ಆರೋಪಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿಗಳ ಎದುರು ಮಂಗಳವಾರ ಹಾಜರಾಗಿ ಎಂದು ಸಮನ್ಸ್‌ನಲ್ಲಿ ರಾವುತ್ ಅವರಿಗೆ ಸೂಚಿಸಲಾಗಿದೆ. ಆದರೆ ಅವರು, 'ಅಲಿಬಾಗ್‌ನಲ್ಲಿ ಪೂರ್ವನಿಗದಿಯಾಗಿರುವ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಬೇಕಿದೆ. ಹೀಗಾಗಿ ಮಂಗಳವಾರ ವಿಚಾರಣೆಗೆ ಹಾಜರಾಗಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.


ಜತೆಗೆ, 'ಇ.ಡಿ. ನನಗೆ ಸಮನ್ಸ್ ನೀಡಿದೆ ಎಂದು ಈಗಷ್ಟೇ ಗೊತ್ತಾಯಿತು. ಒಳ್ಳೆಯದು. ಮಹಾರಾಷ್ಟ್ರದಲ್ಲಿ ದೊಡ್ಡ ರಾಜಕೀಯ ಬೆಳವಣಿಗೆಗಳು ನಡೆಯುತ್ತಿವೆ. ಬಾಳಾಸಾಹೇಬರ ಶಿವಸೈನಿಕರಾದ ನಾವು ದೊಡ್ಡ ಯುದ್ಧದಲ್ಲಿ ಹೋರಾಡುತ್ತಿದ್ದೇವೆ. ನನ್ನನ್ನು ತಡೆಯುವ ಉದ್ದೇಶದಿಂದ ನಡೆಸಿರುವ ಸಂಚು ಇದು' ಎಂದು ರಾವುತ್ ಟ್ವೀಟ್ ಮಾಡಿದ್ದಾರೆ. ಸಾಧ್ಯವಾದರೆ ತಮ್ಮನ್ನು ಬಂಧಿಸಿ ಎಂದು ಇ.ಡಿ.ಗೆ ಅವರು ಸವಾಲು ಹಾಕಿದ್ದಾರೆ.

**ಸಾಲು ಸಾಲು ಪ್ರಕರಣಗಳು:** ಮಹಾರಾಷ್ಟ್ರದ ಆಡಳಿತಾರೂಢ ಶಿವಸೇನಾದಲ್ಲಿ ಭಿನ್ನಮತ ಸ್ಫೋಟಗೊಳ್ಳಲು ಕೆಲವೇ ದಿನಗಳು ಇದ್ದಾಗ ಜಾರಿ ನಿರ್ದೇಶನಾಲಯವು ಹಲವು ಸಚಿವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿತ್ತು.

ರತ್ನಗಿರಿ ಜಿಲ್ಲೆಯ ನಿರ್ಬಂಧಿತ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲು ರೆಸಾರ್ಟ್ ಒಂದಕ್ಕೆ ಅನುಮತಿ ನೀಡಿದ ಆರೋಪದಲ್ಲಿ ಸಚಿವ ಅನಿಲ್ ಪರಬ್ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಲಾಗಿತ್ತು.

ಮಹಾರಾಷ್ಟ್ರ ಸಹಕಾರ ಬ್ಯಾಂಕ್ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗೆ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿದ ಆರೋಪದಲ್ಲಿ ಇ.ಡಿ. ಪ್ರಕರಣದ ವಿಚಾರಣೆ ನಡೆಸುತ್ತಿದೆ. ಈ ಕಾರ್ಖಾನೆಯು ಶಿವಸೇನಾ ನಾಯಕ ಅರ್ಜುನ್ ಖೋತ್ಕರ್ ಅವರಿಗೆ ಸೇರಿದ್ದು. ಈ ಪ್ರಕರಣದಲ್ಲಿ ಕಳೆದ ವಾರವಷ್ಟೇ ₹78 ಕೋಟಿ ಮೌಲ್ಯದ ಚರಾಸ್ತಿ ಮತ್ತು 200 ಎಕರೆಯಷ್ಟು ಜಮೀನನ್ನು ಇ.ಡಿ. ಮುಟ್ಟುಗೋಲು ಹಾಕಿಕೊಂಡಿತ್ತು.

ಪಾತ್ರಾ ಚಾವ್ಲ್ ಭೂಹಗರಣದಲ್ಲಿ ಈಗಾಗಲೇ, ರಾವುತ್ ಪತ್ನಿ ವರ್ಷಾ ಅವರಿಗೆ ಸೇರಿದ ₹2 ಕೋಟಿ ಮತ್ತು ಆಪ್ತ ಸಹಾಯಕ ಪ್ರವೀಣ್ ಅವರಿಗೆ ಸೇರಿದ ₹9 ಕೋಟಿ ಮೌಲ್ಯದ ಸ್ವತ್ತುಗಳನ್ನು ಇ.ಡಿ. ಮುಟ್ಟುಗೋಲು ಹಾಕಿಕೊಂಡಿದೆ.




ಬಿಜೆಪಿ ತನಗೆ ಏನು ಬೇಕೋ ಅದನ್ನೇ ಮಾಡುತ್ತಿದೆ. ಸತ್ಯ ಮಾತನಾಡುವವರ ವಿರುದ್ಧ ಕೇಂದ್ರೀಯ ಸಂಸ್ಥೆಗಳಾದ ಸಿಬಿಐ, ಇ.ಡಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ **ಮಮತಾ ಬ್ಯಾನರ್ಜಿ**
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ನನ್ನ ತಾಯಿ, ನನ್ನ ಪತ್ನಿ, ನನ್ನ ಮಗ ಮತ್ತು ನನ್ನನ್ನು ಜೈಲಿಗೆ ಕಳಿಸುವ ನಿಮ್ಮ ಯತ್ನ ವಿಫಲವಾಗಿದೆ. ನೀವು ಮಾಡಿದ್ದರ ಪ್ರತಿಫಲ ಉಣ್ಣಲೇಬೇಕು **ಕಿರೀಟ್ ಸೋಮಯ್ಯ**
ಬಿಜೆಪಿ ನಾಯಕ

ನೀವು ನನ್ನ ತಲೆ ಕಡಿದರೂ ಸರಿಯೇ, ನಾನು ಮಾತ್ರ ಗುವಾಹಟಿಯ ದಾರಿ ಎಂದಿಗೂ ಹಿಡಿಯುವುದಿಲ್ಲ. ನನ್ನನ್ನು ಬಂಧಿಸಿ, ಜೈ ಹಿಂದ್ **ಸಂಜಯ ರಾವುತ್**
ಶಿವಸೇನಾ ವಕ್ತಾರ

## 'ಬಿಜೆಪಿ ಜತೆ ಕೈಜೋಡಿಸಿ: ಶಿಂಧೆ

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವವನ್ನು ಹೊಗಳಿರುವ ಶಿವಸೇನಾ ಬಂಡಾಯ ಶಾಸಕ ಏಕನಾಥ ಶಿಂಧೆ ಬಣವು, 'ಒಂದೇ ರೀತಿಯ ಸಿದ್ಧಾಂತ ಹೊಂದಿರುವ ಬಿಜೆಪಿ ಮತ್ತು ಶಿವಸೇನಾ ಮೋದಿ ಅವರ ನಾಯಕತ್ವದ ಅಡಿ ಉತ್ತಮ ರೀತಿಯಲ್ಲಿ ಬೆಳವಣಿಗೆ ಹೊಂದುತ್ತಿದ್ದವು' ಎಂದು ಹೇಳಿದೆ. ಜತೆಗೆ, ಎನ್‌ಸಿಪಿ–ಕಾಂಗ್ರೆಸ್ ಜೊತೆ ಮೈತ್ರಿ ಕಡಿದುಕೊಂಡು ಬಿಜೆಪಿ ಜೊತೆ ಮೈತ್ರಿಯನ್ನು ಪುನಸ್ಥಾಪಿಸಬೇಕು ಎಂದು ಉದ್ಧವ್ ಠಾಕ್ರೆ ಅವರನ್ನು ಈ ಬಣ ಒತ್ತಾಯಿಸಿದೆ.

## ದಿನದ ಬೆಳವಣಿಗೆ

- ಭಿನ್ನಮತೀಯ ನಾಯಕ ಏಕನಾಥ ಶಿಂಧೆ ಅವರ ಬಣದಲ್ಲಿ ಗುರುತಿಸಿಕೊಂಡಿರುವ ಒಂಬತ್ತು ಸಚಿವರಿಗೆ, ನೀಡಲಾಗಿದ್ದ ಖಾತೆಗಳನ್ನು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ವಾಪಸ್ ಪಡೆದಿದ್ದು, ಆ ಖಾತೆಗಳನ್ನು ಇತರ ಸಚಿವರಿಗೆ ಹಂಚಿಕೆ ಮಾಡಿದ್ದಾರೆ
- ಬಂಡಾಯ ಶಾಸಕರ ವಿಧಾನ ಸಭಾ ಕ್ಷೇತ್ರಗಳಲ್ಲಿ ಶಿವಸೇನಾ ನಾಯಕರು, ಸೋಮವಾರ ಸಭೆಗಳನ್ನು ನಡೆಸಿದ್ದಾರೆ. ಕಾರ್ಯಕರ್ತರ ಜತೆಗೆ ಮಾತುಕತೆ ನಡೆಸಿದ್ದಾರೆ
- ಶಿವಸೇನಾ ಶಾಸಕರ ಬಂಡಾಯದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಲು ಮುಂದಾಗಿದ್ದ ಉದ್ಧವ್ ಠಾಕ್ರೆ ಅವರನ್ನು ಮಹಾವಿಕಾಸ ಅಘಾಡಿ (ಎಂವಿಎ) ನಾಯಕರು ಎರಡು ಬಾರಿ ತಡೆದಿದ್ದಾರೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ
- ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಎಂವಿಎ ನಾಯಕರು ಸೋಮವಾರ ಭೇಟಿ ಮಾಡಿ ಮಾತುಕತೆ ನಡೆಸಿದರು
- ಶಿಂಧೆ ಬಣದಲ್ಲಿರುವ 15–20 ಶಾಸಕರು ತಮ್ಮ ಸಂಪರ್ಕದಲ್ಲಿದ್ದು, ಗುವಾಹಟಿಯಿಂದ ಮುಂಬೈಗೆ ಕರೆತರುವಂತೆ ಮನವಿ ಮಾಡುತ್ತಿದ್ದಾರೆ: ಸಚಿವ ಆದಿತ್ಯ ಠಾಕ್ರೆ
- ಗುವಾಹಟಿಯ ಹೋಟೆಲ್‌ನಲ್ಲಿ ಬಂಡಾಯ ಶಾಸಕರ ಭೇಟಿಗೆ ತೆರಳಿದ್ದ ಅಸ್ಸಾಂನ ಶಿವಸೇನಾ ಘಟಕದ ಅಧ್ಯಕ್ಷ ಟೊಂಬಿ ಸಿಂಗ್ ಅವರಿಗೆ ಅವಕಾಶ ನಕಾರ. ಜೂನ್ 30ರವರೆಗೆ ಸಾರ್ವಜನಿಕರಿಗೆ ಕೊಠಡಿ ನೀಡದಿರಲು ಹೋಟೆಲ್ ನಿರ್ಧರಿಸಿದೆ

## ಮಹಾರಾಷ್ಟ್ರ ಬಿಕ್ಕಟ್ಟು: ಭಿನ್ನರು ಜುಲೈ 12ರವರೆಗೆ ನಿರಾಳ

ಒಂದನೇ ಪುಟದಿಂದ...

ಪ್ರಕರಣಕ್ಕೆ ಸಂಬಂಧಿಸಿ ಮಹಾರಾಷ್ಟ್ರ ಸರ್ಕಾರ, ಹೊಸದಾಗಿ ನೇಮಕವಾಗಿರುವ ಶಿವಸೇನಾದ ಮುಖ್ಯ ಸಚೇತಕ ಸುನಿಲ್ ಪ್ರಭು ಮತ್ತು ಶಿವಸೇನಾ ಶಾಸಕಾಂಗ ಪಕ್ಷದ ನಾಯಕ ಅಜಯ್ ಚೌಧರಿ ಅವರಿಗೂ ನೋಟಿಸ್ ನೀಡಲಾಗಿದೆ. ಗುವಾಹಟಿಯಲ್ಲಿ ಇರುವ ಶಿವಸೇನಾದ 39 ಶಾಸಕರು ಮತ್ತು ಅವರ ಕುಟುಂಬದ ಸದಸ್ಯರಿಗೆ ಯಾವುದೇ ಹಾನಿ ಆಗದಂತೆ ನೋಡಿಕೊಳ್ಳುವುದಾಗಿ ಮಹಾರಾಷ್ಟ್ರ ಸರ್ಕಾರದ ವಕೀಲರಿಂದ ಪೀಠವು ಹೇಳಿಕೆ ಪಡೆದುಕೊಂಡಿತು. ಬಂಡಾಯ ಶಾಸಕರಿಗೆ ಪದೇ ಪದೇ ಬೆದರಿಕೆ ಹಾಕುತ್ತಿರುವುದು ಮತ್ತು ಅವರ ಕಚೇರಿಗಳಲ್ಲಿ ದಾಂದಲೆ ನಡೆದಿರುವ ಕಾರಣಕ್ಕೆ ಹೀಗೆ ಮಾಡಲಾಗಿದೆ.

ಅನರ್ಹತೆಗೆ ಸಂಬಂಧಿಸಿದ ವಿಚಾರವು ಇತ್ಯರ್ಥವಾಗುವ ವರೆಗೆ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಬಲಾಬಲ ಪರೀಕ್ಷೆ ನಡೆಸಬಾರದು ಎಂಬ ಕೋರಿಕೆಯನ್ನು ಪರಿಶೀಲನೆಗೆ ಒಳಪಡಿಸಲು ಪೀಠವು ನಿರಾಕರಿಸಿದೆ. ಬಂಡಾಯ ಶಾಸಕರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸದೆ ನೇರವಾಗಿ ಸುಪ್ರೀಂ ಕೋರ್ಟ್‌ಗೆ ಬಂದಿರುವುದು ಸರಿಯಲ್ಲ. ಹಾಗಾಗಿ, ಈ ಅರ್ಜಿಯು ವಿಚಾರಣಾಯೋಗ್ಯವಲ್ಲ ಎಂದು ಉದ್ಧವ್ ಪರ ವಕೀಲರು ವಾದಿಸಿದ್ದಾರೆ. ಈ ವಿಚಾರವನ್ನು ಕೂಡ ಮುಂದಿನ ವಿಚಾರಣೆ ಸಂದರ್ಭದಲ್ಲಿ ಪರಿಶೀಲನೆಗೆ ಒಳಪಡಿಸಲಾಗುವುದು ಎಂದು ಪೀಠವು ತಿಳಿಸಿದೆ.

ಮುಂದಿನ ವಿಚಾರಣೆಯನ್ನು ಜುಲೈ 11ಕ್ಕೆ ನಿಗದಿ ಮಾಡಲಾಗಿದೆ.

# 'ಹೃದಯವಂತಿಕೆಯ ಜನನಾಯಕ ಮೋದಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಮರ್ಥ ನಾಯಕತ್ವ, ಮಾನವೀಯ ಆಡಳಿತ, ಮೌಲ್ಯಯುತ ರಾಜಕಾರಣ ಮತ್ತು ದೂರದೃಷ್ಟಿವುಳ್ಳ ಜನನಾಯಕರಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವದಲ್ಲೇ ಭಾರತವನ್ನು ಅಗ್ರಸ್ಥಾನಕ್ಕೆ ಕೊಂಡೊಯ್ಯುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಂಸಿಸಿದರು.

ನಗರದಲ್ಲಿ ಸೋಮವಾರ ಆಯೋಜಿಸಲಾಗಿದ್ದ 'ಮೋದಿ @ 20: ಡ್ರೀಮ್ಸ್ ಮೀಟ್ ಡೆಲಿವರಿ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಜನಸಂಖ್ಯೆಯೇ ಭಾರತಕ್ಕೆ ಶಾಪ ಎಂದು ಪರಿಗಣಿಸಲಾಗುತ್ತಿತ್ತು. ಆದರೆ, ಮೋದಿ ಅವರು ವರವಾಗಿ ಪರಿಣಮಿಸಿದರು. ಶೇ 46 ರಷ್ಟು ಯುವಜನತೆಯನ್ನು ದೇಶದ ಶಕ್ತಿ ಎಂದು ಪರಿಗಣಿಸಿ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡರು' ಎಂದು ವಿವರಿಸಿದರು.

'ಕರ್ನಾಟಕದ ಬಗ್ಗೆ ವಿಶೇಷ ಆಸಕ್ತಿ ಹೊಂದಿರುವ ಪ್ರಧಾನಿ ಮೋದಿ ಅವರು ಕನ್ನಡ ನೆಲ, ಜಲ, ಉದ್ಯಮ, ಹೊಸ ತಂತ್ರಜ್ಞಾನ ಬಗ್ಗೆ ಅಭಿಮಾನ ಹೊಂದಿದ್ದಾರೆ. ಮೋದಿ ಅವರ ಕುರಿತಾದ ಈ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿ ರಾಜ್ಯದಾದ್ಯಂತ ವಿತರಿಸಲಾಗುವುದು' ಎಂದರು. ನಾಯಕತ್ವ ಪ್ರಮುಖವಾಗುತ್ತದೆ ಎನ್ನುವುದು ಜನರಿಗೆಗೊತ್ತಾಗಿದೆ ಎಂದು ಕೇಂದ್ರ ಸಚಿವ ಲೋಗನಾಥನ್ ಮುರುಗನ್ ತಿಳಿಸಿದರು.



ಬೆಂಗಳೂರಿನಲ್ಲಿ ಸೋಮವಾರ 'ಮೋದಿ@20' ಪುಸ್ತಕವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಬಿಡುಗಡೆಗೊಳಿಸಿದರು. ಶಾಸಕ ಉದಯ್ ಬಿ. ಗರುಡಾಚಾರ್, ಕೇಂದ್ರ ಸಚಿವ ಲೋಗನಾಥನ್ ಮುರುಗನ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕೃಷಿ ಸಚಿವ ಬಿ.ಸಿ.ಪಾಟೀಲ ಇದ್ದರು

## ಭಾರತ ಬದಲಾಗಿದೆ: ಸುಧಾಮೂರ್ತಿ

'ಭಾರತ ದೇಶ ಹೇಗೆ ಬದಲಾಗಿದೆ ಎನ್ನುವ ಕುರಿತು ಈ ಕೃತಿಯಲ್ಲಿ ನಾನು ಒಂದು ಅಧ್ಯಾಯ ಬರೆದಿರುವೆ' ಎಂದು ಇನ್ಫೊಸಿಸ್ ಪ್ರತಿಷ್ಠಾನದ ಸುಧಾ ಮೂರ್ತಿ ತಿಳಿಸಿದರು.

'ಮೋದಿ ಅವರ ಜತೆ ನಾನು ಕೆಲಸ ಮಾಡಿಲ್ಲ. ಅವರ ನಿಕಟ ಸಂಪರ್ಕದಲ್ಲಿಯೂ ಇಲ್ಲ. ಆದರೆ, 20 ವರ್ಷಗಳಲ್ಲಿ ಮಹಿಳೆ ಹೇಗೆ ಬದಲಾಗಿದ್ದಾಳೆ. ಇದಕ್ಕೆ ಕಾರಣಗಳೇನು ಎನ್ನುವುದನ್ನು ವಿಶ್ಲೇಷಿಸುವ ಲೇಖನ ಇದಾಗಿದೆ. ಗ್ರಾಮೀಣ ಪ್ರದೇಶದಲ್ಲಿನ ಪರಿಸ್ಥಿತಿಯನ್ನು ನೋಡಿ ಲೇಖನ ಬರೆದಿದ್ದೇನೆ' ಎಂದು ವಿವರಿಸಿದರು.

## 'ಮೋದಿ 20: ಡ್ರೀಮ್ಸ್ ಮೀಟ್ ಡೆಲಿವರಿ' ಪರಿಚಯ

ಮುಖ್ಯಮಂತ್ರಿಯಾಗಿ ಸತತ 12 ವರ್ಷ ಹಾಗೂ ಪ್ರಧಾನಮಂತ್ರಿಯಾಗಿ 8 ವರ್ಷ ಸೇರಿ ಒಟ್ಟು ಎರಡು ದಶಕಗಳ ಕಾಲ ಸಮರ್ಥ ಆಡಳಿತ ನಡೆಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕುರಿತು 'ಮೋದಿ @ 20' ಪುಸ್ತಕವನ್ನು ರಚಿಸಲಾಗಿದೆ.

ಸುಧಾಮೂರ್ತಿ, ಪಿ.ವಿ. ಸಿಂಧು, ನಂದನ ನಿಲಕೇಣಿ, ದೇವಿಪ್ರಸಾದ್ ಶೆಟ್ಟಿ ಸೇರಿದಂತೆ ಹಲವು ಸಾಧಕರು ಲೇಖನಗಳನ್ನು ಬರೆದಿದ್ದಾರೆ. 458 ಪುಟಗಳಿರುವ ಈ ಕೃತಿಯನ್ನು ರೂಪಾ ಪಬ್ಲಿಕೇಷನ್ ಪ್ರಕಟಿಸಿದೆ.

## ಅಯೋಧ್ಯೆ: ಜನವರಿ ವೇಳೆಗೆ ಶ್ರೀ ರಾಮ ವಿಗ್ರಹ ಸ್ಥಾಪನೆ



**ನವದೆಹಲಿ:** 'ಅಯೋಧ್ಯೆಯಲ್ಲಿ ಮುಂದಿನ ವರ್ಷದ ಜನವರಿಯಲ್ಲಿ ಶ್ರೀರಾಮ ವಿಗ್ರಹದ ಸ್ಥಾಪನೆ ಮಾಡಲಾಗುತ್ತದೆ' ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಟ್ರಸ್ಟಿಯೂ ಆಗಿರುವ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ ಹೇಳಿದರು.

ಸೋಮವಾರ ಇಲ್ಲಿ ಮಾತನಾಡಿದ ಅವರು, 'ರಾಮ ಮಂದಿರದ ನಿರ್ಮಾಣ ಕಾರ್ಯ ವೇಗವಾಗಿ ನಡೆಯುತ್ತಿದೆ. ಎಲ್ಲ ಪೂರ್ವಭಾವಿ ಕಾರ್ಯಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲಿದ್ದೇವೆ. ಕಾಲಮಿತಿಯೊಳಗೆ ಪ್ರಾಣ ಪ್ರತಿಷ್ಠೆ ಹಾಗೂ ಪೂಜೆಗಳು ಆರಂಭವಾಗಲಿವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಮ ಮಂದಿರದ ನಿರ್ಮಾಣ ಕಾರ್ಯ ನಡೆಯುತ್ತಿರುವುದರಿಂದ ಶ್ರೀರಾಮನ ವಿಗ್ರಹವನ್ನು ಸಮೀಪದ ದೇವಸ್ಥಾನಕ್ಕೆ ಸ್ಥಳಾಂತರ ಮಾಡಲಾಗಿದೆ.

ಭಕ್ತರ ಅನುಕೂಲಕ್ಕೆ ಎಲ್ಲ ರಾಜ್ಯಗಳು ಅಯೋಧ್ಯೆಯಲ್ಲಿ ಅತಿಥಿ ಗೃಹಗಳನ್ನು ನಿರ್ಮಿಸಬೇಕು. ಉತ್ತರ ಪ್ರದೇಶ ಸರ್ಕಾರ ಭೂಮಿಯನ್ನು ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

## ಸಂಕ್ಷಿಪ್ತ ಸುದ್ದಿ

### ಅಗ್ನಿಪಥ: ವಾಯು ಪಡೆಗೆ 94 ಸಾವಿರ ಅರ್ಜಿ ಸಲ್ಲಿಕೆ

**ನವದೆಹಲಿ (ಪಿಟಿಐ):** ನೇಮಕಾತಿ ಪ್ರಕ್ರಿಯೆಗೆ ಚಾಲನೆ ದೊರೆತ ನಾಲ್ಕು ದಿನಗಳಲ್ಲಿ ಅಗ್ನಿಪಥ ನೇಮಕಾತಿ ಯೋಜನೆಯಡಿ ಭಾರತೀಯ ವಾಯು ಪಡೆ (ಐಎಎಫ್) 94,281 ಅರ್ಜಿಗಳನ್ನು ಸ್ವೀಕರಿಸಿದೆ.


'ಸೋಮವಾರ ಬೆಳಿಗ್ಗೆ 10.30ರ ವರೆಗೆ ಒಟ್ಟು 94,281 ಅಗ್ನಿವೀರ ಆಕಾಂಕ್ಷಿಗಳು ನೋಂದಾಯಿಸಿಕೊಂಡಿದ್ದಾರೆ. ಜುಲೈ 5ಕ್ಕೆ ನೋಂದಣಿ ಮುಕ್ತಾಯಗೊಳ್ಳಲಿದೆ' ಎಂದು ರಕ್ಷಣಾ ಸಚಿವಾಲಯದ ವಕ್ತಾರ ಭರತ್ ಭೂಷಣ್ ಬಾಬು ಟ್ವೀಟ್ ಮಾಡಿದ್ದಾರೆ.

ಈ ಯೋಜನೆ ಅಡಿ 17 ರಿಂದ 21 ವರ್ಷದೊಳಗಿನವರನ್ನು ನಾಲ್ಕು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಈ ಪೈಕಿ 25ರಷ್ಟು ಮಂದಿಯನ್ನು ಬಳಿಕ ರಕ್ಷಣಾ ಪಡೆಗಳಿಗೆ ಸೇರಿಸಲಾಗುತ್ತದೆ.

### ಸತ್ಯೇಂದ್ರ ಜೈನ್ ನ್ಯಾಯಾಂಗ ಬಂಧನ 2 ವಾರ ವಿಸ್ತರಣೆ

**ನವದೆಹಲಿ (ಪಿಟಿಐ):** ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಇನ್ನೂ 2 ವಾರ ವಿಸ್ತರಿಸಲಾಗಿದೆ. ನ್ಯಾಯಾಧೀಶೆ ಗೀತಾಂಜಲಿ ಗೋಯಲ್ ಈ ಆದೇಶ ಹೊರಡಿಸಿದ್ದಾರೆ.

### ಇ.ಡಿ ವಿಚಾರಣೆ ಎದುರಿಸಿದ ಜಾಕ್ವೆಲಿನ್



**ನವದೆಹಲಿ(ಪಿಟಿಐ):** ವಂಚನೆ ಆರೋಪ ಎದುರಿಸುತ್ತಿರುವ ಬೆಂಗಳೂರು ಮೂಲದ ಸುಕೇಶ್ ಚಂದ್ರಶೇಖರ್ ಹಾಗೂ ಇತರರಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರು ಸೋಮವಾರ ಜಾರಿ ನಿರ್ದೇಶನಾಲಯದ(ಇ.ಡಿ) ವಿಚಾರಣೆಗೆ ಹಾಜರಾದರು.

ಇದೇ ಪ್ರಕರಣ ಸಂಬಂಧ ಜಾಕ್ವೆಲಿನ್ ಅವರನ್ನು ಈಗಾಗಲೇ 2-3 ಬಾರಿ ವಿಚಾರಣೆ ನಡೆಸಿದ್ದ ಇ.ಡಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅಡಿ ಅವರ ₹7.27 ಕೋಟಿಯನ್ನು ತಾತ್ಕಾಲಿಕವಾಗಿ ವಶಕ್ಕೆ ಪಡೆದಿದೆ.

### ಸೋನಿಯಾ ಆಪ್ತ ಕಾರ್ಯದರ್ಶಿ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲು

**ನವದೆಹಲಿ (ಪಿಟಿಐ):** ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಆಪ್ತ ಕಾರ್ಯದರ್ಶಿ ಪಿ.ಪಿ.ಮಾಧವನ್ (71) ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಾಗಿದೆ.

26 ವರ್ಷದ ಈ ಮಹಿಳೆ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ ಎಂದು ದ್ವಾರಕ ಡಿಸಿಪಿ ಎಂ.ಹರ್ಷವರ್ಧನ್ ತಿಳಿಸಿದ್ದಾರೆ.

'ಆರೋಪಿ ಮಹಿಳೆ ಮೇಲೆ ಅತ್ಯಾಚಾರ ನಡೆಸಿ, ವಿಷಯ ಬಹಿರಂಗಪಡಿಸಿದರೆ ಕೆಟ್ಟ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಬೆದರಿಕೆ ಹಾಕಿದ್ದ. ಉದ್ಯೋಗ ಕೊಡಿಸಿ, ಮದುವೆಯಾಗುವುದಾಗಿ ನಂಬಿಸಿ ಈ ಕೃತ್ಯ ಎಸಗಿದ್ದ ಎಂಬ ಮಹಿಳೆಯ ದೂರನ್ನು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ತನಿಖೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

'ಸಂತ್ರಸ್ತೆ ದೆಹಲಿಯಲ್ಲಿ ವಾಸಿಸುತ್ತಿದ್ದು, ಅವರ ಪತಿ ಕಾಂಗ್ರೆಸ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರು 2020ರಲ್ಲಿ ನಿಧನರಾಗಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಪಠ್ಯದಲ್ಲಿ ಏನೆಲ್ಲ ಮರು ಸೇರ್ಪಡೆ?

- 9ನೇ ತರಗತಿ ಸಮಾಜ ವಿಜ್ಞಾನ ಭಾಗ–1ರ 'ನಮ್ಮ ಸಂವಿಧಾನ' ಪಾಠದಲ್ಲಿ ಬಿಟ್ಟಿದ್ದ 'ಸಂವಿಧಾನ ಶಿಲ್ಪಿ' ಪದ
- 7ನೇ ತರಗತಿ ಸಮಾಜ ವಿಜ್ಞಾನ ಭಾಗ–1ರ 'ಭಕ್ತಿ ಪಂಥ ಹಾಗೂ ಸೂಫಿ ಸಂತರು' ಪಾಠ ಸಂಪೂರ್ಣ ಸೇರ್ಪಡೆ
- 7ನೇ ತರಗರಗತಿಯ ಪ್ರಥಮ ಭಾಷೆ ಕನ್ನಡ ಪಠ್ಯ ಪುಸ್ತಕದಲ್ಲಿ 'ಗೊಂಬೆ ಕಲಿಸುವ ನೀತಿ' ಪದ್ಯದ ಕೃತಿಕಾರ ಹೆಸರು ಆರ್.ಎನ್. ಜಯಗೋಪಾಲ್ ಎಂದು ತಪ್ಪಾಗಿ ಮುದ್ರಣವಾಗಿದ್ದು, ಅದನ್ನು ಬದಲಿಸಿ ಮೂಲ ಕೃತಿಕಾರರಾದ ಚಿ. ಉದಯಶಂಕರ್ ಎಂದು ನಮೂದಿಸುವುದು
- 6ನೇ ತರಗತಿಯ ಸಮಾಜ ವಿಜ್ಞಾನ ಭಾಗ–1ರ ಪಾಠ 'ನಮ್ಮ ಹೆಮ್ಮೆಯ ರಾಜ್ಯ ಕರ್ನಾಟಕ' ಪಾಠದಲ್ಲಿ ಸಿದ್ದಗಂಗಾ ಮಠ ಹಾಗೂ ಆದಿ ಚುಂಚುನಗಿರಿ ಮಠದ ಕುರಿತು ವಿವರ
- 7ನೇ ತಗರತಿಯ ಸಮಾಜ ವಿಜ್ಞಾನ ಭಾಗ–1ರಲ್ಲಿ 'ಮೈಸೂರು ಮತ್ತು ಇತರ ಸಂಸ್ಥಾನಗಳು' ಪಾಠದಲ್ಲಿದ್ದ ಸುರಪುರ ನಾಯಕರ ಕುರಿತ ವಿವರ
- 9ನೇ ತರಗತಿಯ ಸಮಾಜ ವಿಜ್ಞಾನ ಭಾಗ–1 ಪಠ್ಯಪುಸ್ತಕದಲ್ಲಿ 'ಭಾರತದ ಮತ ಪರಿವರ್ತಕರು' ಅಧ್ಯಾಯದಲ್ಲಿ ಬಸವಣ್ಣನವರ ಕುರಿತ ವಿಷಯಾಂಶವನ್ನು ಮಾರ್ಪಡಿಸುವುದು
- 7ನೇ ತರಗತಿಯ ಸಮಾಜ ವಿಜ್ಞಾನ ಭಾಗ–2 ಪಠ್ಯಪುಸ್ತಕದ 'ಕರ್ನಾಟಕ ರಾಜ್ಯ ಏಕೀಕರಣ ಹಾಗೂ ಗಡಿ ವಿವಾದಗಳು' ಎಂಬ ಪಾಠದಲ್ಲಿ ರಾಷ್ಟ್ರಕವಿ ಕುವೆಂಪುರವರ ಹಾಗೂ ಹುಯಿಲಗೋಳ ನಾರಾಯಣ ರಾವ್ ಅವರ ಭಾವಚಿತ್ರ ಅಳವಡಿಕೆ
- 4ನೇ ತರಗತಿಯ ಪರಿಸರ ಅಧ್ಯಯನ ಪಠ್ಯದಲ್ಲಿನ 'ಪ್ರತಿಯೊಬ್ಬರು ವಿಶಿಷ್ಟ' ಪಾಠದಲ್ಲಿ 'ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದ ಕುವೆಂಪು ಅವರಿಗೆ ಚಿಕ್ಕಂದಿನಿಂದಲೂ ಕಥೆ, ಕವನ, ಪುಸ್ತಕ ಓದುವ, ಬರೆಯುವ ಅಭ್ಯಾಸ ಇತ್ತು' ಎಂಬ ವಾಕ್ಯದ ನಂತರ 'ಅನೇಕರ ಪ್ರೋತ್ಸಾಹದಿಂದ ಇವರು ಮುಂದೆ ಪ್ರಖ್ಯಾತ ಕವಿ ಎನಿಸಿಕೊಂಡರು' ಎಂಬ ಸಾಲು ಕೈಬಿಡುವುದು.

## ಯಶವಂತ್ ಸಿನ್ಹಾ ನಾಮಪತ್ರ ಸಲ್ಲಿಕೆ

**ನವದೆಹಲಿ (ಪಿಟಿಐ):** ರಾಷ್ಟ್ರಪತಿ ಚುನಾವಣೆಗೆ ವಿರೋಧ ಪಕ್ಷಗಳ ಅಭ್ಯರ್ಥಿ ಯಶವಂತ್ ಸಿನ್ಹಾ ಸೋಮವಾರ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಎನ್‌ಸಿಪಿ ಮುಖಂಡ ಶರದ್ ಪವಾರ್, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ ಸೇರಿದಂತೆ ಹಲವು ನಾಯಕರು ಈ ವೇಳೆ ಹಾಜರಿದ್ದರು.

ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ ಪುತ್ರ, ಟಿಆರ್‌ಎಸ್ ನಾಯಕ ಕೆ.ಟಿ.ರಾಮರಾವ್ ಸಹ ಉಪಸ್ಥಿತರಿದ್ದರು. ಚುನಾವಣಾ ಅಧಿಕಾರಿಯಾಗಿರುವ ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಗೆ ಸಿನ್ಹಾ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸಿದ ಬಳಿಕ ಸಿನ್ಹಾ ಅವರು ಸಂಸತ್ತಿನ ಆವರಣದಲ್ಲಿರುವ ಮಹಾತ್ಮ ಗಾಂಧೀಜಿ ಹಾಗೂ ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ನಮನ ಸಲ್ಲಿಸಿದರು.

# 'ಮರು ಪರಿಷ್ಕರಣೆ ಮಾನ ಕಾಪಾಡುವ ವ್ಯರ್ಥ ಪ್ರಯತ್ನ'


ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ್ದ ಪಠ್ಯ ಪುಸ್ತಕದಲ್ಲಿ ಕೈಬಿಟ್ಟ, ತಿದ್ದುಪಡಿ ಮಾಡಿದ ಅಂಶಗಳನ್ನು ಪರಿಷ್ಕರಿಸಲು ಸರ್ಕಾರ ಆದೇಶ ಹೊರಡಿಸಿದ ಬೆನ್ನಲ್ಲೆ ಟ್ವೀಟ್ ಮಾಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಪರಿಷ್ಕೃತ ಪಠ್ಯಗಳಲ್ಲಿನ ಕೆಲವು ತಪ್ಪುಗಳನ್ನು ಸರಿಪಡಿಸಿ ಕಳೆದುಹೋದ ಮಾನ ಕಾಪಾಡುವ ವ್ಯರ್ಥ ಪ್ರಯತ್ನವನ್ನು ಸರ್ಕಾರ ಮಾಡಿದೆ' ಎಂದಿದ್ದಾರೆ.

'ಈಗ ಹಾಕಿರುವ ತೇಪೆಗಳಿಗಿಂತ ಉಳಿದಿರುವ ತೂತುಗಳೇ ಹೆಚ್ಚಾಗಿವೆ. ಹೊಸ ಪಠ್ಯವನ್ನು ರದ್ದುಪಡಿಸಿ ಹಳೆಯ ಪಠ್ಯ ಮುಂದುವರಿಸುವುದೊಂದೇ ಈಗಿನ ಪರಿಹಾರ' ಎಂದೂ ಹೇಳಿದ್ದಾರೆ.

'ಪಠ್ಯ ಪರಿಷ್ಕರಣೆ ಸಮಿತಿಯನ್ನೇ ರದ್ದುಗೊಳಿಸಿದ ನಂತರ ಅದರ ಶಿಫಾರಸಿನ ಪಠ್ಯ ಕೂಡಾ ರದ್ದಿಗೆ ಸೇರಬೇಕಲ್ಲವೇ. ಸರ್ಕಾರದ ಆದೇಶ ಇಲ್ಲದೆ ರಚನೆಗೊಂಡ ರೋಹಿತ್ ಚಕ್ರತೀರ್ಥ ಎಂಬ ಬುದ್ಧಿಗೇಡಿಯ ಅಧ್ಯಕ್ಷತೆಯ ಸಮಿತಿಯೇ ಅಕ್ರಮವಾಗಿರುವಾಗ, ಆ ಸಮಿತಿ ಪರಿಷ್ಕರಿಸಿರುವ ಪಠ್ಯ ಕ್ರಮಬದ್ಧವಾಗಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದ್ದಾರೆ.

'ಪರಿಷ್ಕೃತ ಪಠ್ಯದಲ್ಲಿರುವುದು ಬೆರಳೆಣಿಕೆಯ ತಪ್ಪುಗಳಲ್ಲ. ಅದರ ಪುಟ-ಪುಟಗಳಲ್ಲಿಯೂ ತಪ್ಪುಗಳಿರುವುದನ್ನು ಶಿಕ್ಷಣ ತಜ್ಞರು ಪಟ್ಟಿ ಮಾಡಿ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಹೀಗಿದ್ದರೂ ದೋಷಪೂರ್ಣ ಪಠ್ಯವನ್ನು ಸಮರ್ಥಿಸಲು ಹೊರಟಿರುವುದು ಸರ್ಕಾರದ ಉದ್ಧಟತನವನ್ನಷ್ಟೇ ತೋರಿಸುತ್ತದೆ. ಪರಿಷ್ಕೃತ ಪಠ್ಯ-ಪುಸ್ತಕದ ಬಗೆಗಿನ ವಿವಾದವನ್ನು ಪ್ರತಿಷ್ಠೆಯಾಗಿ ಸ್ವೀಕರಿಸದೆ ವಿದ್ಯಾರ್ಥಿಗಳ ಭವಿಷ್ಯ ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳಬೇಕು' ಎಂದೂ ಆಗ್ರಹಿಸಿದ್ದಾರೆ.



**ಸುಭಾಷಿತ**
ಶರೀರದಂತೆ ಬುದ್ಧಿಗೂ ಮುಪ್ಪಿರುವುದರಿಂದ, ನಿರ್ಣಾಯಕ ಸ್ಥಾನಗಳಲ್ಲಿ ಇರುವವರು ಆಜೀವಪರ್ಯಂತ ಅಧಿಕಾರದಲ್ಲಿ ಇರಬಾರದು. –ಅರಿಸ್ಟಾಟಲ್

# ಭಾರತ ಕ್ರಿಕೆಟ್‌ನ ತೊಟ್ಟಿಲು ರಣಜಿ ಹೊಳಪು ಹೆಚ್ಚಿಸೋಣ

ಮಧ್ಯಪ್ರದೇಶ ತಂಡವು ಇದೇ ಮೊದಲ ಬಾರಿ ಪ್ರತಿಷ್ಠಿತ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಗೆದ್ದುಕೊಂಡಿದೆ. 41 ಬಾರಿಯ ಚಾಂಪಿಯನ್ ಮುಂಬೈ ತಂಡವನ್ನು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಮಣಿಸಿದ ಆದಿತ್ಯ ಶ್ರೀವಾಸ್ತವ ನಾಯಕತ್ವದ ಮಧ್ಯಪ್ರದೇಶ ಬಳಗವು ಟ್ರೋಫಿಗೆ ಮುತ್ತಿಕ್ಕಿತು. ಪೃಥ್ವಿ ಶಾ ನಾಯಕತ್ವದ ಮುಂಬೈ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ. ಆದರೆ ಸಂಯಮ ಮತ್ತು ಯೋಜನಾಬದ್ಧವಾದ ಆಟದ ಮೂಲಕ ಮಧ್ಯಪ್ರದೇಶ ಮೇಲುಗೈ ಸಾಧಿಸಿತು. ಟ್ವೆಂಟಿ-20 ಕ್ರಿಕೆಟ್ ಅಬ್ಬರದಲ್ಲಿ ಸಿಕ್ಸರ್, ಬೌಂಡರಿಗಳಷ್ಟೇ ಕ್ರಿಕೆಟ್ ಅಲ್ಲ ಎನ್ನುವ ಸಂದೇಶವನ್ನು ನೀಡಿದ್ದು ಈ ಪಂದ್ಯದ ಹೆಗ್ಗಳಿಕೆ. ಎರಡು ದಶಕಗಳಿಂದ ಅದ್ಭುತವಾದ ಮಧ್ಯಪ್ರದೇಶವು ಪ್ರಶಸ್ತಿ ಸುತ್ತಿಗೆ ಕಾಲಿಟ್ಟಿದ್ದು ಇದು ಎರಡನೇ ಸಲ. 23 ವರ್ಷಗಳ ಹಿಂದೆ ಇದೇ ಕ್ರೀಡಾಂಗಣದಲ್ಲಿ ನಡೆದಿದ್ದ ಫೈನಲ್‌ನಲ್ಲಿ ಕರ್ನಾಟಕದ ಎದುರು ಸೋತಿತ್ತು. ಆಗ ಮಧ್ಯಪ್ರದೇಶ ತಂಡಕ್ಕೆ ಚಂದ್ರಕಾಂತ್ ಪಂಡಿತ್ ನಾಯಕರಾಗಿದ್ದರು. ಇದೀಗ ಅವರು ಮುಖ್ಯ ಕೋಚ್ ಆಗಿ ತಂಡವನ್ನು ಚಾಂಪಿಯನ್ ಪಟ್ಟಕ್ಕೆ ಏರಿಸಿದ್ದಾರೆ. ಅವರ ವೃತ್ತಿಜೀವನದಲ್ಲಿ ಇದೊಂದು ಅವಿಸ್ಮರಣೀಯ ಸಾಧನೆ.

ಈ ಬಾರಿಯ ರಣಜಿ ಟೂರ್ನಿ ಇನ್ನೂ ಕೆಲವು ಕಾರಣಗಳಿಗಾಗಿ ನೆನಪಿನಲ್ಲಿ ಉಳಿಯುತ್ತದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ನೂರನೇ ರಣಜಿ ಪಂದ್ಯ ಇದಾಗಿತ್ತು. ಅಲ್ಲದೆ ಜೂನ್‌ನಲ್ಲಿ ನಡೆದ ಮೊದಲ ರಣಜಿ ಹಣಾಹಣಿಯೂ ಹೌದು. ಈ ಹಿಂದೆ ಟೂರ್ನಿಯು ನವೆಂಬರ್‌ನಿಂದ ಫೆಬ್ರುವರಿವರೆಗೆ ಆಯೋಜನೆಗೊಳ್ಳುತ್ತಿತ್ತು. ಆದರೆ ಕೋವಿಡ್ ಬಿಕ್ಕಟ್ಟು, 'ಇಂಡಿಯನ್ ಪ್ರೀಮಿಯರ್ ಲೀಗ್' ಕ್ರಿಕೆಟ್ ಮೇಳ ಹರಾಜು ಮತ್ತು ಈ ಲೀಗ್‌ನ 15ನೇ ಆವೃತ್ತಿಯ ಟೂರ್ನಿಯ ಆಯೋಜನೆಯಿಂದಾಗಿ ರಣಜಿ ಟೂರ್ನಿಯ ವೇಳಾಪಟ್ಟಿ ಬದಲಾಯಿತು. ಲೀಗ್ ಹಂತದ ಪಂದ್ಯಗಳು ಫೆಬ್ರುವರಿ– ಮಾರ್ಚ್‌ನಲ್ಲಿ ನಡೆದಿದ್ದವು. ಸುಮಾರು ಎರಡು ತಿಂಗಳು ನಡೆದ ಐಪಿಎಲ್ ಅಬ್ಬರದ ನಂತರ ರಣಜಿ ನಾಕೌಟ್ ಪಂದ್ಯಗಳನ್ನು ಆಯೋಜಿಸಲಾಯಿತು. ಬೆಂಗಳೂರಿನ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಏಕಕಾಲಕ್ಕೆ ಮೂರು ಕ್ವಾರ್ಟರ್ ಫೈನಲ್ ಪಂದ್ಯಗಳು ನಡೆದಿದ್ದು ಅಭೂತಪೂರ್ವ. ಇನ್ನೊಂದು ಪಂದ್ಯ ಬೆಂಗಳೂರಿನ ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ನಡೆಯಿತು. ಎಂಟರ ಘಟ್ಟದಲ್ಲಿ ಎರಡು ವಿಶ್ವದಾಖಲೆಗಳೂ ಉದ್ಯಾನನಗರಿ ಸಾಕ್ಷಿಯಾಯಿತು. ಉತ್ತರಾಖಂಡದ ಎದುರು 725 ರನ್‌ಗಳಿಂದ ಜಯಿಸಿದ ಮುಂಬೈ, ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅತಿ ದೊಡ್ಡ ಅಂತರದ ಗೆಲುವಿನ ದಾಖಲೆ ಬರೆಯಿತು. ಜಾರ್ಖಂಡ್ ಎದುರಿನ ಪಂದ್ಯದ ಒಂದೇ ಇನಿಂಗ್ಸ್‌ನಲ್ಲಿ ಬಂಗಾಳದ ಒಂಬತ್ತು ಬ್ಯಾಟರ್‌ಗಳು ಅರ್ಧಶತಕಗಳನ್ನು ಗಳಿಸಿದ್ದು ಕೂಡ ದಾಖಲೆ. ಕೆಲವು ಪ್ರತಿಭಾನ್ವಿತ ಆಟಗಾರರು ಗಮನ ಸೆಳೆದರು. ಟೂರ್ನಿಯಲ್ಲಿ ಒಟ್ಟು 982 ರನ್ ಗಳಿಸಿದ ಮುಂಬೈನ ಸರ್ಫರಾಜ್ ಖಾನ್, ಸ್ಪಿನ್ನರ್ ಶಮ್ಸ್ ಮುಲಾನಿ, 658 ರನ್ ಗಳಿಸಿದ ಮಧ್ಯಪ್ರದೇಶದ ರಜತ್ ಪಾಟೀದಾರ್ ಮತ್ತು ಬೌಲರ್ ಕುಮಾರ್ ಕಾರ್ತಿಕೇಯ ಸಿಂಗ್ ಅವರಲ್ಲಿ ಪ್ರಮುಖರು. ಇವರೆಲ್ಲರೂ ಈಗ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸುವ ನಿರೀಕ್ಷೆಯಲ್ಲಿದ್ದಾರೆ.



ಭಾರತದ ಕ್ರಿಕೆಟ್ ಬೆಳವಣಿಗೆಯಲ್ಲಿ ರಣಜಿ ಟೂರ್ನಿ ಪಾತ್ರ ದೊಡ್ಡದು. ಅದನ್ನು ಉಳಿಸಿ ಬೆಳೆಸುವುದು ಬಿಸಿಸಿಐ ಕರ್ತವ್ಯ

ಈ ಸಾಧನೆಗಳ ನಡುವೆ ಒಂದಿಷ್ಟು ನಿರಾಶೆಗಳೂ ಇವೆ. ರಣಜಿ ಟೂರ್ನಿಯ ಪ್ರಮುಖ ಘಟ್ಟದ ಪಂದ್ಯಗಳಿಗೆ ಆತಿಥ್ಯ ನೀಡಿದ ಕರ್ನಾಟಕದ ತಂಡ ಮತ್ತೆ ನಿರಾಶೆ ಮೂಡಿಸಿತು. ಮಯಂಕ್ ಅಗರವಾಲ್, ಮನೀಷ್ ಪಾಂಡೆ, ಕರುಣ್ ನಾಯರ್, ಕೃಷ್ಣಪ್ಪ ಗೌತಮ್, ಶ್ರೇಯಸ್ ಗೋಪಾಲ್ ಅವರಂತಹ ಅನುಭವಿಗಳು ತಂಡದಲ್ಲಿದ್ದರೂ ಎಂಟರ ಘಟ್ಟದಲ್ಲಿ ಜಯದ ಅವಕಾಶವನ್ನು ಕೈಚೆಲ್ಲಿತು. ಕ್ರೀಡೆಯಲ್ಲಿ ಸೋಲು ಗೆಲುವು ಸಾಮಾನ್ಯ. ಆದರೆ ಸೋತ ರೀತಿಯು ಬೇಸರ ತರಿಸಿದೆ ಎಂದು ನಾಯಕ ಮನೀಷ್ ಪಾಂಡೆ ಅವರೇ ಹೇಳಿದ್ದಾರೆ. ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ ಎನ್ನುವುದು ದಿಟ. ತಂಡದ ಆಯ್ಕೆಯ ಕುರಿತು ಅಪಸ್ವರಗಳಿದ್ದವು. ವೇಗದ ಬೌಲರ್ ಪ್ರಸಿದ್ಧಕೃಷ್ಣ ಮತ್ತು ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರಿಗೆ ವಿಶ್ರಾಂತಿ ನೀಡಿದ್ದು ಕೂಡ ಅಪಸ್ವರವೆತ್ತಲು ಕಾರಣವಾಯಿತು. 2015ರಲ್ಲಿ ಪ್ರಶಸ್ತಿ ಗೆದ್ದ ನಂತರ ನಡೆದ ಟೂರ್ನಿಗಳಲ್ಲಿ ತಂಡವು ನಾಕೌಟ್ ಹಂತದಲ್ಲಿ ಇಂತಹ ಸೋಲುಗಳನ್ನು ಅನುಭವಿಸುತ್ತಿದೆ. ಇದಕ್ಕೆ ಕಾರಣಗಳನ್ನು ಪತ್ತೆ ಮಾಡಿ ಸರಿಪಡಿಸುವ ಕಾರ್ಯವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮಾಡಬೇಕು. ಇನ್ನು ಕೆಲವೇ ತಿಂಗಳುಗಳಲ್ಲಿ ಮುಂದಿನ ದೇಶಿ ಕ್ರಿಕೆಟ್ ಋತು ಆರಂಭವಾಗಲಿದೆ. ಆ ಹೊತ್ತಿಗಾದರೂ ಎಲ್ಲ ಲೋಪಗಳನ್ನು ಸರಿಪಡಿಸಿಕೊಂಡು ತಂಡವನ್ನು ಬಲಪಡಿಸಬೇಕು. ರಾಜ್ಯ ಕ್ರಿಕೆಟ್ ತಂಡದ ಭವ್ಯ ಪರಂಪರೆ ಮರುಕಳಿಸುವಂತೆ ಆಗಬೇಕು. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕೂಡ ಎಚ್ಚೆತ್ತುಕೊಳ್ಳಬೇಕು. ಐಪಿಎಲ್‌ಗೆ ನೀಡುವಷ್ಟೇ ಮಹತ್ವವನ್ನು ದೇಶಿ ಕ್ರಿಕೆಟ್‌ಗೂ ಕೊಡಬೇಕು. ರಣಜಿ ಟೂರ್ನಿಯಲ್ಲಿ ಅಂಪೈರ್ ಮರುಪರಿಶೀಲನಾ ವ್ಯವಸ್ಥೆ ಜಾರಿಗೆ ದುಡ್ಡಿನ ಕೊರತೆ ಇದೆ ಎಂದು ಹೇಳುವುದು ಶ್ರೀಮಂತ ಮಂಡಳಿಗೆ ಶೋಭೆ ತರುವುದಿಲ್ಲ. ಈ ಟೂರ್ನಿಯ ಪಂದ್ಯಗಳಲ್ಲಿ ಹಲವು ಅನುಮಾನಾಸ್ಪದ ತೀರ್ಪುಗಳನ್ನು ಕೆಲವು ಅಂಪೈರ್‌ಗಳು ನೀಡಿದ್ದಾರೆ. ಉತ್ತಮ ಸ್ಪರ್ಧಾತ್ಮಕತೆಯನ್ನು ಉಳಿಸಿಕೊಳ್ಳಲು ತಂತ್ರಜ್ಞಾನದ ಬಳಕೆ ಅನಿವಾರ್ಯ. ಭಾರತದ ಕ್ರಿಕೆಟ್ ಬೆಳವಣಿಗೆಯಲ್ಲಿ ರಣಜಿ ಟೂರ್ನಿ ಪಾತ್ರ ದೊಡ್ಡದು. ಅದನ್ನು ಉಳಿಸಿ ಬೆಳೆಸುವುದು ಮಂಡಳಿಯ ಕರ್ತವ್ಯ.

## ದಿನದ ಟ್ವೀಟ್

### ಕಾಕತಾಳೀಯವ್ರೋ ಅಥವಾ...?



ಮಹಾರಾಷ್ಟ್ರ ಸರ್ಕಾರದ ಬಿಕ್ಕಟ್ಟಿನ ನಡುವೆಯೇ, ಭೂ ಹಗರಣದ ಆರೋಪವೊಂದಕ್ಕೆ ಸಂಬಂಧಿಸಿದಂತೆ ತನ್ನೆದುರು ವಿಚಾರಣೆಗೆ ಹಾಜರಾಗಲು ಜಾರಿ ನಿರ್ದೇಶನಾಲಯವು ಶಿವಸೇನಾ ಮುಖಂಡ ಸಂಜಯ ರಾವುತ್ ಅವರಿಗೆ ಸಮನ್ಸ್ ಜಾರಿ ಮಾಡಿದೆ. ಇದು ಬರೀ ಕಾಕತಾಳೀಯವ್ರೋ ಅಥವಾ ಪ್ರಭುತ್ವದ ಅಧಿಕಾರದ ಅಸ್ತ್ರವ್ರೋ? #MVACrisis

**ರಾಜ್‌ದೀಪ್ ಸರ್ದೇಸಾಯಿ,** ಪತ್ರಕರ್ತ

## ಕಿಡಿನುಡಿ



ಕೆಂಪೇಗೌಡರಿಗೆ ಗೌರವ ಸೂಚಿಸಲು ಎತ್ತರದ ಪ್ರತಿಮೆ, ಅಂತರರಾಷ್ಟ್ರೀಯ ಪ್ರಶಸ್ತಿ ಪ್ರದಾನ ಎಲ್ಲವೂ ಸರಿ. ಆದರೆ ಅತೀ ಮುಖ್ಯವೆಂದರೆ, ಕೆಂಪೇಗೌಡರು ಕಟ್ಟಿರುವ ಈಗ ಉಳಿದಿರುವ ಕೆರೆಗಳನ್ನಾದರೂ ಸಂರಕ್ಷಿಸುವುದು. ಅವರು ಕಟ್ಟಿದ ಬೆಂಗಳೂರು ನಗರದ ಮಾನಮರ್ಯಾದೆಯನ್ನು ವಿಶ್ವ ಮಟ್ಟದಲ್ಲಿ ಕಳೆಯಬೇಡಿ. ಅದೇ ಅವರಿಗೆ ನಾವು ಸೂಚಿಸುವ ನಿಜವಾದ ಗೌರವ.

**ರೋಹಿತ್ ಸಿಂಹ,** ಎಂಜಿನಿಯರ್

## 25 ವರ್ಷಗಳ ಹಿಂದೆ
ಶನಿವಾರ, 28-6-1997

● **'ಧರ್ಮಕಾರಣ' ಮತ್ತೆ ಮುಟ್ಟುಗೋಲು**

**ಬೆಂಗಳೂರು ಜೂನ್ 27–** ಹನ್ನೆರಡನೇ ಶತಮಾನದ ಶರಣರ ಕ್ರಾಂತಿ ಕಾಲದ ವಸ್ತು ಆಧರಿಸಿದ ಡಾ.ಪಿ.ವಿ.ನಾರಾಯಣ ಅವರ ಕಾದಂಬರಿ 'ಧರ್ಮಕಾರಣ' ಕೃತಿಯನ್ನು ಮತ್ತೆ ಮುಟ್ಟುಗೋಲು ಹಾಕಿಕೊಂಡು ಸರ್ಕಾರ ಮರು ಆದೇಶ ಹೊರಡಿಸಿದೆ.

ಈ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹೊರಡಿಸಿದ್ದ ಆದೇಶವನ್ನು ನಿನ್ನೆ ಬೆಳಿಗ್ಗೆ ಹಿಂತೆಗೆದುಕೊಂಡು ಆದೇಶ ಹೊರಡಿಸಿದ ಸರ್ಕಾರ, ಸಂಜೆ ಗೃಹ ಇಲಾಖೆಯ ಹೆಸರಿನಲ್ಲಿ ಮರು ಆದೇಶ ಹೊರಡಿಸಿ, ಕಾದಂಬರಿಯನ್ನು ಮುಟ್ಟುಗೋಲು ಹಾಕಿಕೊಂಡಿದೆ.

● **ಕಾವೇರಿ: ಕೇಂದ್ರ ಸೂಚನೆಗೆ ರಾಜ್ಯ ತಿರಸ್ಕಾರ**

**ಬೆಂಗಳೂರು, ಜೂನ್ 27–** ಕಾವೇರಿ ನೀರು ಹಂಚಿಕೆ ಕುರಿತು ನ್ಯಾಯಮಂಡಳಿ ನೀಡಿರುವ ಮಧ್ಯಂತರ ಆದೇಶದ ಜಾರಿಗೆ ಕೇಂದ್ರ ಸರ್ಕಾರ ಪ್ರಸ್ತಾವ ಮಾಡಿ ಹೊರಡಿಸಿರುವ ಕರಡು ಅಧಿಸೂಚನೆಯ 'ಅಗತ್ಯವಿಲ್ಲ' ಎಂದು ರಾಜ್ಯ ಸರ್ಕಾರ ಅದನ್ನು ಇಂದು ಇಲ್ಲಿ ಸಾರಾಸಗಟಾಗಿ ತಿರಸ್ಕರಿಸಿದೆ.

ಅಧಿಸೂಚನೆಯ ಪ್ರಕಾರ ಕಾವೇರಿ ನದಿ ಪ್ರಾಧಿಕಾರ ರಚಿಸುವ ಅಗತ್ಯವಿಲ್ಲ ಎಂದು ಭಾರಿ ನೀರಾವರಿ ಸಚಿವ ಕೆ.ಎನ್.ನಾಗೇಗೌಡ ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

## 50 ವರ್ಷಗಳ ಹಿಂದೆ
ಬುಧವಾರ, 28-6-1972

● **ಮಲಪ್ರಭಾದಲ್ಲಿ ಮಹಾಪೂರ ಆರು ಗ್ರಾಮಗಳ ಮುಳುಗಡೆ**

**ಬೆಂಗಳೂರು, ಜೂನ್ 27–** ಮಲಪ್ರಭಾ ನದಿಗೆ ಭಾರಿ ಮಳೆಯ ಪರಿಣಾಮ ಮಹಾಪೂರ ಬಂದು ಬೆಳಗಾವಿ ಜಿಲ್ಲೆಯ 33 ಗ್ರಾಮಗಳಿಗೆ ಗಂಡಾಂತರದ ಪರಿಸ್ಥಿತಿ ಉಂಟಾಗಿದೆ ಎಂದು ಇಲ್ಲಿಗೆ ಬಂದ ಅಧಿಕೃತ ವರದಿಗಳಿಂದ ತಿಳಿದುಬಂದಿದೆ.

ಈ ಎಲ್ಲ ಹಳ್ಳಿಗಳನ್ನು ತೆರವು ಮಾಡಬೇಕೆಂದು ಅಲ್ಲಿನ ನಿವಾಸಿಗಳಿಗೆ ಸರ್ಕಾರ ಆದೇಶ ನೀಡಿದೆ. ಆರು ಹಳ್ಳಿಗಳು ಮುಳುಗಡೆ ಪರಿಸ್ಥಿತಿಗೆ ಗುರಿಯಾಗಿದ್ದು, ಇನ್ನು 24 ಗಂಟೆಗಳಲ್ಲಿ ತೆರವು ಮಾಡಬೇಕೆಂದು ಗ್ರಾಮ ನಿವಾಸಿಗಳಿಗೆ ಸೂಚನೆ ನೀಡಲಾಗಿದೆ.

● **ನಗರ ಆಸ್ತಿ ವಿಲೇವಾರಿ ವಿರುದ್ಧ ಸರ್ಕಾರದ ಕ್ರಮ**

**ಬೆಂಗಳೂರು, ಜೂನ್ 27–** ನಗರ ಆಸ್ತಿಗೆ ಎರಡು ಲಕ್ಷ ರೂ. ಮಿತಿ ವಿಧಿಸಬೇಕೆಂಬ ಯತ್ನ ತಪ್ಪಿಸಿಕೊಳ್ಳಲು ಹಲವು ಶ್ರೀಮಂತರು ಮಿತಿಗೆ ಮೀರಿದ ಆಸ್ತಿ ವಿಲೇವಾರಿ ಮಾಡುತ್ತಿರುವುದಕ್ಕೆ ತಡೆ ಹಾಕುವ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವ ಸಂಭವವಿದೆ.

ಈ ವಿಚಾರವನ್ನು, ಇಂದು ವರದಿಗಾರರೊಡನೆ ಮಾತನಾಡುತ್ತಿದ್ದ ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಪರೋಕ್ಷವಾಗಿ ತಿಳಿಸಿದರು.

### ಪಠ್ಯ ಪರಿಷ್ಕರಣೆಗೊಂದು ಸ್ಪಷ್ಟ ನೀತಿ ತರಲು ಇದು ಸಕಾಲ

# ಸಂತೋಷಕ್ಕೆ ಪಾಠ ಸಂತೋಷಕ್ಕೆ!



ಅನುಸಂಧಾನ

ರವೀಂದ್ರ ಭಟ್ಟ

**ಕರ್ನಾಟಕದಲ್ಲಿ** ಈಗ 'ಸಂತೋಷ' ಮರೆಯಲ್ಲಿದೆ ಎಂದು ಕೆಲವರು ಹೇಳುತ್ತಾರೆ. ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳ ಹಿಂದೆಯೂ 'ಸಂತೋಷ' ಇದೆಯಂತೆ. ಆದರೆ ಅದು ಬಹಿರಂಗವಾಗಿ ಕಾಣಿಸುವುದಿಲ್ಲ ಎನ್ನುವುದು ಬಿಜೆಪಿ ವಲಯದ ಅಂಬೋಣ. ಇದ್ದರೂ ಇರಬಹುದು. ಆದರೆ ರಾಜ್ಯದ ಜನರೂ ಸಂತೋಷವಾಗಿರುವುದು ಬಹಿರಂಗವಾಗಿ ಕಾಣುತ್ತಿಲ್ಲ. ಅದರಲ್ಲಿಯೂ ಮಕ್ಕಳು ಸಂತೋಷವಾಗಿಲ್ಲ ಎಂದು ಬಹಿರಂಗವಾಗಿಯೇ ಹೇಳಬಹುದು.

ರಾಜ್ಯದ ಆಡಳಿತ ಪಕ್ಷದಲ್ಲಿ ಈಗ ಎರಡು ಪಂಗಡಗಳಂತೆ. ಒಂದು ಸಂತೋಷದ ಪಂಗಡವಾದರೆ, ಇನ್ನೊಂದು ಅಸಂತೋಷದ ಪಂಗಡವಂತೆ. ಈ ಪಂಗಡಗಳ ಗುದ್ದಾಟದಲ್ಲಿ ಪ್ರಜೆಗಳಂತೂ ಅಸಂತೋಷದಲ್ಲಿಯೇ ಇದ್ದಾರೆ. ದೊಡ್ಡವರದ್ದು ಒಂದು ರೀತಿ ದುಃಖ, ಮಕ್ಕಳದ್ದು ಒಂದು ರೀತಿಯ ದುಃಖ.

ರಾಜ್ಯದ ಶಾಲಾ ಮಕ್ಕಳ ಪರಿಸ್ಥಿತಿ ಹೇಗಾಗಿದೆ ಎಂದರೆ, ಅಪ್ಪ ಅಮ್ಮ ಮಕ್ಕಳನ್ನು ಊಟಕ್ಕೆ ಕರೆದಿದ್ದಾರೆ. ಬಾಳೆಯನ್ನೂ ಹಾಕಿದ್ದಾರೆ. ಮಕ್ಕಳು ಬಂದು ಊಟಕ್ಕೆ ಕುಳಿತಿದ್ದಾರೆ. ಊಟಕ್ಕೆ ಏನು ಬಡಿಸಬೇಕು ಎನ್ನುವುದರ ಬಗ್ಗೆ ಅಪ್ಪ ಅಮ್ಮ ಜಗಳವಾಡುತ್ತಿದ್ದಾರೆ. ಅಪ್ಪ ಅಮ್ಮನ ಜಗಳವನ್ನು ನೋಡುತ್ತಾ ಮಕ್ಕಳು ಸುಮ್ಮನೆ ಕುಳಿತಿದ್ದಾರೆ. ಅವರು ಬಡಿಸುತ್ತಿಲ್ಲ. ಅವರು ಬಡಿಸದೇ ಇವರು ಉಣ್ಣುವಂತಿಲ್ಲ. ಜಗಳ ಹೀಗೆಯೇ ಮುಂದುವರಿದರೆ ಮಕ್ಕಳಿಗೆ ಊಟವಿಲ್ಲ. ಊಟವಿಲ್ಲದಿದ್ದರೆ ಮಕ್ಕಳು ಬಡವಾಗುತ್ತಾರೆ. ಮಕ್ಕಳು ಬಡವಾದರೆ ರಾಜ್ಯವೂ ಬಡವಾಗುತ್ತದೆ. ಆ ಮೂಲಕ ದೇಶ ಕೂಡ.


ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಹೊಸ ಸಚಿವ ಸಂಪುಟ ಅಸ್ತಿತ್ವಕ್ಕೆ ಬರುವಾಗ, ಶಿಕ್ಷಣ ಮತ್ತು ಗೃಹ ಖಾತೆಗಳನ್ನು ಆರ್‌ಎಸ್‌ಎಸ್ ಮೂಲದವರಿಗೇ ಕೊಡಬೇಕು ಎನ್ನುವ ತಾಕೀತು ಇತ್ತಂತೆ. ಅದರಂತೆ ಆರಗ ಜ್ಞಾನೇಂದ್ರ ಗೃಹ ಸಚಿವರಾಗಿಯೂ ಬಿ.ಸಿ.ನಾಗೇಶ್ ಶಿಕ್ಷಣ ಸಚಿವರಾಗಿಯೂ ಅಧಿಕಾರ ವಹಿಸಿಕೊಂಡರು. ಇಬ್ಬರಿಗೂ ಇದು ಮೊದಲ ಅನುಭವ. ಅವರ ಅನುಭವದ ಕೊರತೆ ಕೆಲವೇ ದಿನಗಳಲ್ಲಿ ಬಹಿರಂಗವಾಗತೊಡಗಿತು. ಮುಖ್ಯಮಂತ್ರಿಗೆ ಈ ಇಬ್ಬರ ಎಡವಟ್ಟುಗಳ ಭಾರವನ್ನು ಹೊತ್ತುಕೊಳ್ಳುವುದೇ ಕೆಲಸವಾಯಿತು. ಅವರೂ ಕೆಲದಿನ ಹೊತ್ತುಕೊಂಡರು. ನಂತರ ಭಾರವನ್ನು ನೆಲಕ್ಕಿಟ್ಟು ನಿರುಮ್ಮಳರಾದಂತೆ ಕಾಣುತ್ತಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಯುವತಿಯೊಬ್ಬಳ ಮೇಲೆ ಅತ್ಯಾಚಾರ ನಡೆದ ಸಂದರ್ಭದಲ್ಲಿ ನಮ್ಮ ಗೃಹ ಸಚಿವರು 'ಆ ಯುವತಿ ರಾತ್ರಿ ವೇಳೆ ಅಲ್ಲಿಗೆ ಹೋಗಿದ್ದ್ಯಾಕೆ?' ಎಂದು ಕೇಳಿ ಮುಜುಗರಕ್ಕೆ ಈಡಾದರು. ಬೆಂಗಳೂರಿನ ಗೋರಿಪಾಳ್ಯದಲ್ಲಿ ಯುವಕನೊಬ್ಬನ ಕೊಲೆಯಾದಾಗಲೂ ಗೃಹ ಸಚಿವರು 'ಯುವಕ ಉರ್ದು ಮಾತನಾಡದಿದ್ದುದಕ್ಕೆ ಈ ಕೊಲೆ ನಡೆದಿದೆ' ಎಂದು ತಕ್ಷಣವೇ ಹೇಳಿಕೆ ಕೊಟ್ಟರು. ನಂತರ ಬೆಂಗಳೂರು ಪೊಲೀಸ್ ಕಮಿಷನರ್ ಅವರು 'ಇದು ಉರ್ದು ಮಾತನಾಡದ ಕಾರಣಕ್ಕಾಗಿ ನಡೆದ ಕೊಲೆಯಲ್ಲ. ಬೈಕ್ ಅಪಘಾತಕ್ಕೆ ಸಂಬಂಧಿಸಿದ ಘರ್ಷಣೆಯ ವೇಳೆ ಕೊಲೆ ನಡೆದಿದೆ' ಎಂದು ಸಮಜಾಯಿಷಿ ನೀಡಿದರು.

ಶಿವಮೊಗ್ಗದಲ್ಲಿ ನಡೆದ ಹರ್ಷ ಹತ್ಯೆ ಪ್ರಕರಣವಾಗಲಿ, ಹಿಜಾಬ್ ಗಲಾಟೆಯಾಗಲಿ ಎಲ್ಲದರಲ್ಲಿಯೂ ಅವರದ್ದು ಅನನುಭವದ ನಡೆ. ಧಾರವಾಡ ಹೊರವಲಯದಲ್ಲಿ ಮುಸ್ಲಿಂ ವ್ಯಾಪಾರಿಯೊಬ್ಬರ ಕಲ್ಲಂಗಡಿ ಹಣ್ಣಿನ ಅಂಗಡಿ ಧ್ವಂಸ ಮಾಡಿದಾಗಲೂ ಯಡಿಯೂರಪ್ಪ ಮಧ್ಯ ಪ್ರವೇಶಿಸಿ ವಿವಾದಕ್ಕೆ ತೇಪೆ ಹಾಕಿದರೇ ವಿನಾ ಗೃಹ ಸಚಿವರು ವಿವೇಚನೆಯಿಂದ ಪ್ರತಿಕ್ರಿಯಿಸಲೇ ಇಲ್ಲ. ಪಿಎಸ್‌ಐ ನೇಮಕಾತಿ ಅಕ್ರಮದ ವಿಷಯದಲ್ಲಿಯೂ ಆ ಬಗ್ಗೆ ಇನ್ನೂ ವಿಚಾರಣೆ ನಡೆಯುತ್ತಿದ್ದಾಗಲೇ 'ಮರುಪರೀಕ್ಷೆ ನಡೆಸಲಾಗುವುದು' ಎಂದು ಘೋಷಿಸಿಬಿಟ್ಟರು. ಅದೊಂದು ವಿವಾದದ ಗೂಡಾಯಿತು.

ಗೃಹ ಸಚಿವರ ಪಾಡು ಹೀಗಾದರೆ, ಶಿಕ್ಷಣ ಸಚಿವರ ಅವಾಂತರ ಇನ್ನೊಂದು ತರಹ. ರಾಜ್ಯದಲ್ಲಿ ಪಠ್ಯಪುಸ್ತಕದ ವಿವಾದ ತಾರಕಕ್ಕೆ ಏರಿದಾಗ ನಮ್ಮ ಶಿಕ್ಷಣ ಮಂತ್ರಿಗಳು 'ಪಠ್ಯಪುಸ್ತಕ ಪರಿಷ್ಕರಣ ಸಮಿತಿ ಅಧ್ಯಕ್ಷರು ಯಾರೆಂದು ತಿಳಿದುಕೊಂಡಿದ್ದೀರಿ. ಅವರು ಐಐಟಿ ಪ್ರೊಫೆಸರ್. ಅವರು ಮಾಡಿದ್ದು ಸರಿ ಇಲ್ಲ ಎನ್ನಲಾಗದು' ಎಂದು ಹೇಳಿಕೆ ನೀಡಿ ಮರೆಯಲ್ಲಿರುವ 'ಸಂತೋಷ'ದ ಮರ್ಯಾದೆಯನ್ನೂ ಕಳೆದುಬಿಟ್ಟರು. ನಂತರ ಪಠ್ಯ ಪರಿಷ್ಕರಣ ಸಮಿತಿ ಅಧ್ಯಕ್ಷರೇ ತಾವು ಐಐಟಿ ಪ್ರೊಫೆಸರ್ ಅಲ್ಲ ಎಂದು ಸ್ಪಷ್ಟನೆ ನೀಡಬೇಕಾಯಿತು.

ಪಠ್ಯಪುಸ್ತಕವನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಅವರು ನೀಡಿದ ಹೇಳಿಕೆಗಳೂ ವಿವಾದಕ್ಕೆ ಕಾರಣವಾಗುತ್ತಲೇ ಹೋದವು. 'ನಾವು ಕೆಲವು ಸಣ್ಣಪುಟ್ಟ ಬದಲಾವಣೆ ಮಾಡಿದ್ದೇವೆ ಅಷ್ಟೆ. ಉದಾಹರಣೆಗೆ, 'ಬಸವಣ್ಣನವರು ಜನಿವಾರವನ್ನು ಕಿತ್ತೆಸೆದು ಹೋದರು' ಎಂದು ಹಿಂದಿನ ಪಾಠದಲ್ಲಿತ್ತು. ಅದನ್ನು ಬದಲಾಯಿಸಿ 'ಅವರು ಉಪನಯನವಾದ ನಂತರ ಹೊರನಡೆದರು' ಎಂದು ತಿದ್ದುಪಡಿ ಮಾಡಿದ್ದೇವೆ. ಇದರಲ್ಲಿ ವಿರೋಧ ಮಾಡುವುದು ಏನಿದೆ?' ಎಂದು ನಮ್ಮ ಶಿಕ್ಷಣ ಸಚಿವರು ಪ್ರಶ್ನಿಸಿದರು. ಸ್ವತಃ ಬ್ರಾಹ್ಮಣರೇ ಆಗಿರುವ ಶಿಕ್ಷಣ ಸಚಿವರಿಗೆ ಉಪನಯನ ಆದ ಮೇಲೆ ಹೋಗುವುದಕ್ಕೂ ಜನಿವಾರವನ್ನು ಕಿತ್ತೆಸೆದು ಹೋಗುವುದಕ್ಕೂ ಇರುವ ವ್ಯತ್ಯಾಸ ತಿಳಿದಿಲ್ಲ ಎನ್ನುವುದನ್ನು ನಂಬುವುದು ಕಷ್ಟ. ಆದರೆ ಅವರು ರಾಜ್ಯದ ಜನರನ್ನು ಈ ವಿಷಯದಲ್ಲಿ ನಂಬಿಸುವುದಕ್ಕೆ ಹೊರಟಿದ್ದಾರೆ. ಅಂಬೇಡ್ಕರ್ ಕುರಿತ ಪಾಠದಲ್ಲಿ ಇದ್ದ 'ಸಂವಿಧಾನ ಶಿಲ್ಪಿ' ಎಂಬ ಪದಗಳನ್ನು ತೆಗೆಯಬಹುದು ಅಥವಾ ತೆಗೆಯಬಾರದು ಎನ್ನುವ ಸಾಮಾನ್ಯ ಜ್ಞಾನವೂ ಇಲ್ಲ ಎಂದರೆ ಏನನ್ನುವುದು?



ಅಧಿಕಾರದಲ್ಲಿ ಇರುವವರು ಜವಾಬ್ದಾರಿಯಿಂದ ಮಾತನಾಡಬೇಕು. ವಿಷಯವನ್ನು ತಿಳಿದುಕೊಂಡು ಮಾತನಾಡಬೇಕು. ಇಲ್ಲವಾದರೆ ಮಾತು ಮನೆ ಕೆಡಿಸಿತು ಎಂದಂತೆ ಆಗುತ್ತದೆ. ಪಠ್ಯಪುಸ್ತಕದಲ್ಲಿ ಎಲ್ಲವೂ ಸರಿ ಇಲ್ಲ ಎನ್ನುವುದು ಈಗ ಮೇಲ್ನೋಟಕ್ಕೇ ಕಾಣುತ್ತಿದೆ. ಎಲ್ಲ ತಪ್ಪುಗಳನ್ನು ಸರಿಪಡಿಸುವುದು ಈಗಿನ ಮೊದಲ ಆದ್ಯತೆಯಾಗಬೇಕು. ಜೊತೆಗೆ ಮಕ್ಕಳಿಗೆ ಶೀಘ್ರದಲ್ಲಿ ಸರಿಯಾದ ಪಠ್ಯವನ್ನು ತಲುಪಿಸುವ ಕೆಲಸವಾಗಬೇಕು. ತಪ್ಪಾಗಿದೆ ಎನ್ನುವುದು ಗೊತ್ತಾದ ನಂತರ ಅದನ್ನು ಸರಿಪಡಿಸಲು ಶಿಕ್ಷಣ ಸಚಿವರಾದರೂ ಪ್ರಯತ್ನ ಮಾಡಬೇಕಿತ್ತು, ಇಲ್ಲವೇ ಮುಖ್ಯಮಂತ್ರಿಯಾದರೂ ಮುಂದಾಗಬೇಕಿತ್ತು. ತಪ್ಪನ್ನೇ ಸಮರ್ಥಿಸಿಕೊಳ್ಳುವ ಕೆಲಸವನ್ನು ಮಾಡಬಾರದಿತ್ತು.

ಇದು ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ. ರಾಜ್ಯದ, ದೇಶದ ಮುಂದಿನ ಜನಾಂಗದ ಭವಿಷ್ಯ ಮಸುಕಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಎಲ್ಲ ಹಿರಿಯರ ಮೇಲಿದೆ. ಅದಕ್ಕೇ ಎಲ್ಲ ತಜ್ಞರನ್ನೂ ಒಂದೆಡೆ ಸೇರಿಸಿ ಸಮಸ್ಯೆ ಬಗೆಹರಿಸಿಕೊಳ್ಳುವ ಕೆಲಸ ಮಾಡಬೇಕು. ಇಲ್ಲಿ ಸಿದ್ಧಾಂತಗಳ ತಿಕ್ಕಾಟ ಇರಬಾರದು. ಅದು ನಾಗರಿಕ ಸರ್ಕಾರದ ಲಕ್ಷಣ.

ಆಗಿರುವ ತಪ್ಪುಗಳನ್ನು ಸರಿಪಡಿಸಲು ಸರ್ಕಾರ ಈಗ ಒಂದು ಸಣ್ಣ ಹೆಜ್ಜೆ ಇಟ್ಟಿದೆ. ಅದು, ಪೂರ್ಣಪ್ರಮಾಣದಲ್ಲಿ ಆಗಬೇಕು. ಜೊತೆಗೇ ಮುಂದೆ ಕೂಡ ಇಂತಹ ತಪ್ಪುಗಳು ಆಗದಂತೆ ಎಚ್ಚರಿಕೆ ವಹಿಸಬೇಕು, ಎಂದರೆ ಪಠ್ಯಪುಸ್ತಕ ಪರಿಷ್ಕರಣೆಗೆ ಒಂದು ನಿರ್ದಿಷ್ಟ ನೀತಿಯನ್ನು ರೂಪಿಸಬೇಕು. ಪಠ್ಯಪುಸ್ತಕ ಪರಿಷ್ಕರಣೆ ಎಂದರೆ ಏನೋ ಒಂದಿಷ್ಟು ತೆಗೆಯುವುದು, ಇನ್ನೊಂದಿಷ್ಟು ಸೇರಿಸುವುದು ಎಂದಾಗಬಾರದು. ಏನನ್ನು ತೆಗೆಯಬೇಕು ಮತ್ತು ಏನನ್ನು ಸೇರಿಸಬೇಕು ಎನ್ನುವುದಕ್ಕೆ ಸ್ಪಷ್ಟವಾದ ನೀತಿ ಇರಬೇಕು. ಮಕ್ಕಳ ಮನಸ್ಸನ್ನು ಅರಳಿಸುವ, ಮುಂದೆ ಅವರ ಬದುಕಿಗೆ ಭದ್ರ ಬುನಾದಿಯನ್ನು ಹಾಕುವ, ಅವರು ಉತ್ತಮ ನಾಗರಿಕರಾಗಿ ಬೆಳೆಯಲು ಬೇಕಾದ ಅಂಶಗಳನ್ನು ತುಂಬಬೇಕು. ಇದು ಅತ್ಯಂತ ವೈಜ್ಞಾನಿಕವಾಗಿ ನಡೆಯಬೇಕು. ಅಧಿಕಾರದಲ್ಲಿ ಇರುವವರು ಇದಕ್ಕೆ ಮನಸ್ಸು ಮಾಡಬೇಕು. ಈಗ ಪಠ್ಯಪುಸ್ತಕ ಪರಿಷ್ಕರಣೆಯನ್ನು ವಿರೋಧಿಸುತ್ತಿರುವವರನ್ನೂ ಕರೆದು ಮಾತನಾಡಬೇಕು. ಇದರಲ್ಲಿ ಯಾವುದೇ ಹಟ ಮಾಡಬಾರದು. ಮಕ್ಕಳಿಗೆ ಒಳ್ಳೆಯದಾಗಬೇಕು ಎನ್ನುವುದು ಆದ್ಯತೆಯಾಗಬೇಕೇ ವಿನಾ ಬೇರೆ ಯಾವುದೇ ವಿಷಯ ತಲೆಯಲ್ಲಿ ಇರಬಾರದು.

ಪಠ್ಯಪುಸ್ತಕ ಪರಿಶೀಲನೆಗೆ ನೇಮಕವಾದವರನ್ನೇ ಪರಿಷ್ಕರಣ ಸಮಿತಿ ಅಧ್ಯಕ್ಷರನ್ನಾಗಿ ಮಾಡಿ ಅದಕ್ಕೆ ಘಟನೋತ್ತರ ಒಪ್ಪಿಗೆ ಪಡೆದ ಹಾಗೆಯೇ ಈಗ ವಿವಾದ ಬಗೆಹರಿಸುವುದಕ್ಕೂ ಘಟನೋತ್ತರ ಪರಿಹಾರವನ್ನು ಕಂಡುಕೊಳ್ಳಬೇಕಿದೆ. ಶಾಲಾ ಪಠ್ಯವನ್ನು ಮಕ್ಕಳು ಸಂತೋಷದಿಂದ ಕಲಿಯಬೇಕು. ಪಠ್ಯವು ಮಕ್ಕಳ ಸಂತೋಷಕ್ಕೆ ಇರಬೇಕೇ ವಿನಾ ವಿವಾದಕ್ಕೆ ಅಲ್ಲ ಎಂಬ ಸತ್ಯವನ್ನು ಎಲ್ಲರೂ ಅರಿಯಬೇಕು. ಸಂತೋಷ ಮರೆಯಲ್ಲಿದ್ದರೆ ಒಳ್ಳೆಯದಲ್ಲ. ಬಹಿರಂಗವಾದರೆ ಒಳ್ಳೆಯದು.

## ಚುರುಮುರಿ




### ಇ-ಟೆಂಡರ್

● ಲಿಂಗರಾಜು ಡಿ.ಎಸ್.

**ಹೊಸದಾಗಿ** ಸೃಜಿಸಲಾದ ಅರಾಜಕೀಯತೆ, ಇಬ್ಬಂದಿ ಮತ್ತು ದುರಾಡಳಿತ ಇಲಾಖೆಯ ಕಾರ್ಯಭಾರ ಹೆಚ್ಚಿಸುವ ಉದ್ದೇಶದಿಂದ ಹಾಗೂ ದೇಶದ ಎಲ್ಲಾ ರಾಜ್ಯಗಳಲ್ಲಿ ಏಕ ಪಕ್ಷದ ಸರ್ಕಾರಗಳನ್ನು ಜಾರಿಗೆ ತರಲು ಅನ್ಯ ಸರ್ಕಾರಗಳನ್ನು ಬೀಳಿಸಿ ಬಂಡಾಯ ಆರಂಭಿಸಬಲ್ಲ ಅರ್ಹ ರೆಬೆಲ್ ರಾಜಕಾರಣಿಗಳಿಂದ ಐಟಂವಾರು ದರದಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸರ್ಕಾರ ರಚನೆ ಮತ್ತು ಮಂತ್ರಿ ಪದವಿ ಹಂಚಿಕೆಯಲ್ಲಿ ಬಂಡಾಯ, ಬೆದರಿಕೆ, ಕಚ್ಚಾಟಗಳಲ್ಲಿ ಸಮಯ ವ್ಯರ್ಥವಾಗುತ್ತಾ ಅಕ್ರಮ ಸಂಪಾದನೆಗೆ ಹೆಚ್ಚು ಸಮಯ ದೊರೆಯುತ್ತಿಲ್ಲ. ಈ ಕಾರಣದಿಂದ ಬಂಡಾಯ ರಾಜಕಾರಣಿಗಳಿಗೆ ಅನುಕೂಲವಾಗುವಂತೆ ಹೊಸದಾಗಿ ಇ-ಎಂಎಲ್ಎ ಪೋರ್ಟಲ್ ಆರಂಭಿಸಲಾಗಿದೆ. ಬಂಡಾಯಗಾರರು ತಮ್ಮ ವಶದಲ್ಲಿರುವ ಜನಪ್ರತಿನಿಧಿಗಳ ಸಂಖ್ಯೆ, ಹೆಸರುಗಳ ಪೂರ್ಣ ವಿವರಗಳನ್ನು ಇ-ಟೆಂಡರ್ ಮೂಲಕ ದ್ವಿ ಲಕೋಟೆಯಲ್ಲಿ ಸಲ್ಲಿಸುವುದು. ಇಲಾಖೆಯು ಟೆಂಡರನ್ನು ಪರಿಶೀಲಿಸಿದ ನಂತರ ಮುಂದಿನ ಸರ್ಕಾರದಲ್ಲಿ ಪಕ್ಷದ ಮೂಲನಿವಾಸಿಗಳನ್ನು ಮೂಲೆಗುಂಪು ಮಾಡಿ ಇ-ರೆಬೆಲ್ ಶಾಸಕರಿಗೆ ಭಾರಿ ಖಾತೆಗಳನ್ನು ನೀಡಲಾಗುವುದು.

ರೆಬೆಲ್ ನಾಯಕರು ದೂರದ ರೆಸಾರ್ಟ್‌ಗಳಿಗೆ ಜನಪ್ರತಿನಿಧಿಗಳ ವಿಮಾನಯಾನದ ಖರ್ಚಿನ ಮಾಹಿತಿ, ಹೋಟೆಲ್ ವಾಸದಲ್ಲಿ ಊಟ–ಉಪಚಾರದ ವೆಚ್ಚ, ರೆಬೆಲ್ ಪ್ರತಿನಿಧಿ ನಿರೀಕ್ಷಿಸುವ ಈವಿಲ್ ಪರ್ಸೆಂಟೇಜ್, ಜನಪ್ರತಿನಿಧಿಗಳು ನಿರೀಕ್ಷಿಸುವ ತಲಾವಾರು ಮೊತ್ತ 100 ಕೋಟಿಯ ಒಳಗೆ ಇರುವಂತೆ ಸೂಚಿಸತಕ್ಕದ್ದು.

ಜನಪ್ರತಿನಿಧಿಗಳು ಮುಂದಿನ ಚುನಾವಣೆಯಲ್ಲಿ ತಮ್ಮ ಕುಟುಂಬಕ್ಕೆ ನಿರೀಕ್ಷಿಸುವ ಟಿಕೆಟುಗಳ ಸಂಖ್ಯೆ, ಮಂತ್ರಿ ಖಾತೆಗಳ ಸಂಖ್ಯೆಯನ್ನು ಎಗ್ಗುತಗ್ಗಿಲ್ಲದೆ ನಮೂದಿಸಬಹುದು.

ಟೆಂಡರ್ ನಮೂನೆಗಳನ್ನು ಇ-ಎಂಎಲ್ಎ ರಾಜಕೀಯ ಪೋರ್ಟಲ್ಲಿನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಇಲಾಖೆ ಅಥವಾ ಪಕ್ಷದ ಕಚೇರಿಯಿಂದ ರಹಸ್ಯವಾಗಿ ಪಡೆಯಬಹುದು. ಸೂಕ್ತ ಟೆಂಡರು ಬಾರದಿದ್ದಲ್ಲಿ ಸಿಎಂ, ಮಂತ್ರಿ ಪದವಿಗಳನ್ನು ಬಹಿರಂಗ ಹರಾಜಿಗೆ ಇಡಲಾಗುವುದು.

## ಸಂಗತ

# ಅಂಬಿಕಾಪುರದ ಅಕ್ಕಂದಿರು!

### ಕಸ ವಿಲೇವಾರಿ ಸಮಸ್ಯೆಯಿಂದ ಬಳಲುತ್ತಿದ್ದ ಊರಿನಲ್ಲಿ, ದೀದಿಯರು ಅಖಾಡಕ್ಕಿಳಿದ ಮೇಲೆ ಚಿತ್ರಣವೇ ಬದಲಾಗಿದೆ

● ಶ್ರೀಗುರು

**ಹೆಸರು** ಅಂಬಿಕಾಪುರ. ರಾಜ್ಯ ಛತ್ತೀಸಗಡ. ಊರಿನ ಕಸ ಸಂಗ್ರಹಿಸುವ ಐನೂರು ಮಹಿಳೆಯರನ್ನು ಜನ ಪ್ರೀತಿಯಿಂದ 'ದೀದಿ' (ಅಕ್ಕ) ಎಂದೇ ಕರೆಯುತ್ತಾರೆ. ಪ್ರತಿದಿನ ಬೆಳಿಗ್ಗೆ ಅಂಬಿಕಾಪುರದ 200 ಮನೆಗಳಿಗೆ ಭೇಟಿ ನೀಡಿ, ಬೇರ್ಪಡಿಸಿದ ಹಸಿ ಮತ್ತು ಒಣ ಕಸವನ್ನು ಸಂಗ್ರಹಿಸುವ ಇವರು, ಅದನ್ನು ಸೈಕಲ್ ರಿಕ್ಷಾಗಳಿಗೆ ಏರಿಸಿ, ಊರಿನಿಂದಾಚೆ ಸ್ಥಾಪಿಸಿರುವ 'ಗಾರ್ಬೇಜ್ ಕ್ಲಿನಿಕ್'ಗಳಿಗೆ ತಲುಪಿಸುತ್ತಾರೆ. ಊರಿನ ಕಸಕ್ಕೆ ಮೋಕ್ಷ ನೀಡುತ್ತಾರೆ.

ಮನೆಬಾಗಿಲಿಗೆ ಬರುವ ದೀದಿಯರನ್ನು ಹಸನ್ಮುಖರಾಗಿ ಸ್ವಾಗತಿಸುವ ಮನೆಯ ಜನ, ಅವರ ಆರೋಗ್ಯ, ಸಂಬಳ, ಮಕ್ಕಳ ಕುರಿತು ವಿಚಾರಿಸಿಕೊಳ್ಳುತ್ತಾರೆ. ಬೇಕೆಂದಾಗ ಕೈಸಾಲ ನೀಡುತ್ತಾರೆ. ತಮ್ಮ ಮಕ್ಕಳ ಪುಸ್ತಕಗಳನ್ನು ದೀದಿಯರ ಮಕ್ಕಳಿಗೆ ಕೊಡುತ್ತಾರೆ. ದೀದಿಯರ ತಂಡದ ಮುಖ್ಯಸ್ಥೆ ಶಶಿ ತಂಗನ್‌ಪಾರ, ಎಲ್ಲ ಸಹೋದ್ಯೋಗಿಗಳಿಗೆ ಆರೋಗ್ಯ ವಿಮೆ ಮಾಡಿಸಿರುವುದಾಗಿ ಹೆಮ್ಮೆಯಿಂದ ಹೇಳುತ್ತಾರೆ.

ಹತ್ತು ವರ್ಷಗಳಿಂದ ಅಂಬಿಕಾಪುರದಲ್ಲಿ ಕಸ ವಿಲೇವಾರಿಯ ಸಮಸ್ಯೆ ತೀವ್ರವಾಗಿತ್ತು. ಕಸ ವಿಂಗಡಣೆಗೆ ಜನ ಸಹಕರಿಸುತ್ತಿರಲಿಲ್ಲ. ಬೀದಿ ಬದಿಯ ಕಸದ ತೊಟ್ಟಿಗೆ ಹಾಕುವಷ್ಟೂ ಶ್ರಮಪಡದೆ, ಕಸದ ಗಾಡಿ ಮನೆಯ ಬಳಿಯೇ ಬರಲಿ ಎಂದೇ ಕಾಯುತ್ತಿದ್ದರು. ನಗರದ 48 ವಾರ್ಡುಗಳಲ್ಲೂ ಖಾಸಗಿ ಸಂಸ್ಥೆಯವರು ಕಸ ಸಂಗ್ರಹ ಮಾಡುತ್ತಿದ್ದರೂ ಜನರ ಸಹಭಾಗಿತ್ವ ಇರಲಿಲ್ಲ. ಕಸ ಸುರಿಯಲು ಊರಿನಿಂದ ಹೊರಗೆ ಸ್ಥಾಪಿಸಿರುವ 15 ಎಕರೆ ಪ್ರತ್ಯೇಕ ಜಾಗವೇನೋ ಇತ್ತು. ಆದರೆ ವಿವಿಧ ಕಸಗಳಿಗೆ ಬೇಕಾದ ಸಾಲುಗಳಾಗಲೀ ಗುರುತಿಸಿದ ಜಾಗಗಳಾಗಲೀ ಇರಲಿಲ್ಲ ಎನ್ನುವ ಮುನಿಸಿಪಲ್ ಕಾರ್ಪೊರೇಷನ್‌ನ ಅಧಿಕಾರಿ ರಿತೇಶ್ ಸೈನಿ, 'ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ವೈಜ್ಞಾನಿಕ ವಿಧಾನಗಳ ಕೊರತೆ ಇತ್ತು. ದೀದಿಯರು ಅಖಾಡಕ್ಕಿಳಿದ ಮೇಲೆ ಎಲ್ಲವೂ ಹದಕ್ಕೆ ಬಂತು' ಎನ್ನುತ್ತಾರೆ.

2015ರಲ್ಲಿ ಸುರುಗುಜ ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದ ರಿತು ಸೇನ್, ಅಂಬಿಕಾಪುರ ಮುನಿಸಿಪಲ್ ಕಾರ್ಪೊರೇಷನ್‌ನ ಉಸ್ತುವಾರಿಯಲ್ಲಿ 'ಕ್ಲೀನ್ ಅಂಬಿಕಾಪುರ್' ಅಭಿಯಾನ ಪ್ರಾರಂಭಿಸಿಯೇಬಿಟ್ಟರು. ಅಭಿಯಾನದ ಅಂಗವಾಗಿ ಪ್ರತೀ ನಾಲ್ಕು ವಾರ್ಡಿಗೊಂದರಂತೆ ತಲೆ ಎತ್ತಿದ ಗಾರ್ಬೇಜ್ ಕ್ಲಿನಿಕ್‌ಗಳು (ಕಸ ಚಿಕಿತ್ಸಾಲಯ) ದೆಹಲಿಯ ಕಸ ವಿಲೇವಾರಿ ತಜ್ಞ ಶ್ರೀನಿವಾಸನ್ ಅವರ ನೇತೃತ್ವದಲ್ಲಿ ಘನ ಮತ್ತು ದ್ರವ ಕಸವನ್ನು ವ್ಯವಸ್ಥಿತವಾಗಿ ಸಂಗ್ರಹಿಸುವ ಯೋಜನೆ ರೂಪಿಸಿ ಜವಾಬ್ದಾರಿಯನ್ನು ಮಹಿಳಾ ತಂಡಕ್ಕೆ ವಹಿಸಿದವು.

ದೀದಿಯರ ಸೈಕಲ್‌ರಿಕ್ಷಾಗಳು ಬೆಳಿಗ್ಗೆ ಆರಕ್ಕೇ ರಸ್ತೆಗಿಳಿಯುತ್ತಿದ್ದಂತೆ ಕಸ ಸಂಗ್ರಹ– ವಿಲೇವಾರಿಯ ಹೊಸ ಚಕ್ರ ಸುತ್ತತೊಡಗಿ ಊರಿನ ಚಹರೆಯೇ ಬದಲಾಗತೊಡಗಿತು. ದುರ್ವಾಸನೆ ಬೀರುತ್ತಿದ್ದ ತಿಪ್ಪೆಗುಂಡಿಗಳು, ಕಸದ ತೊಟ್ಟಿಗಳು ಅಂದಂದೇ ಖಾಲಿಯಾಗತೊಡಗಿದವು. ಕೆಲಸ ಪ್ರಾರಂಭಿಸಿದ ಮೂರೇ ವರ್ಷಗಳಲ್ಲಿ ಕಸದ ಸರಿಯಾದ ನಿರ್ವಹಣೆಗಾಗಿ ಅಂಬಿಕಾಪುರವು ಫೈವ್ ಸ್ಟಾರ್ ರೇಟಿಂಗ್ ಪಡೆಯುವಲ್ಲಿ ಯಶಸ್ವಿಯಾಯಿತು. ರೇಟಿಂಗ್‌ಗಿಂತ ಹೆಚ್ಚಾಗಿ ನಗರದ ಜನರ ಗೌರವಕ್ಕೆ ಪಾತ್ರವಾಗುತ್ತಿರುವ ದೀದಿಯರ ಪ್ರಯತ್ನ ಊರಿನ ಸಮಸ್ತರಲ್ಲಿ ನೈರ್ಮಲ್ಯ ಮತ್ತು ಸೂಕ್ತ ಕಸ ವಿಲೇವಾರಿಯ ಬಗ್ಗೆ ಆಸ್ಥೆ ಮೂಡಿಸುವಲ್ಲಿ ಸಫಲವಾಗಿದೆ.

ವರ್ಷಕ್ಕೆ 18,000 ಮೆಟ್ರಿಕ್ ಟನ್ ಕಸ ಸಂಗ್ರಹಿಸುವ ದೀದಿಯರು ಪ್ರತೀ ತಿಂಗಳು ₹ 7 ಸಾವಿರದಿಂದ 8 ಸಾವಿರ ಆದಾಯ ಗಳಿಸುತ್ತಿದ್ದಾರೆ. ಅಂಬಿಕಾಪುರದ ಮಾದರಿಯನ್ನು ಅನುಸರಿಸಿದ ನಮ್ಮ ಹೆಮ್ಮೆಯ ಮೈಸೂರು, ರಾಜ್‌ಕೋಟ್, ಸೂರತ್, ಇಂದೋರ್ ಮತ್ತು ನವಿ ಮುಂಬೈಗಳು ಈಗಾಗಲೇ ಫೈವ್‌ಸ್ಟಾರ್ ರೇಟಿಂಗ್ ಗಳಿಸಿ ಇತರ ನಗರಗಳಿಗೆ ಮಾದರಿಯಾಗಿವೆ. ದೇಶದ ಇತರ 65 ನಗರಗಳು 3 ನಕ್ಷತ್ರದ ಶ್ರೇಣಿ ಗಳಿಸಿವೆ ಮತ್ತು 70 ನಗರಗಳು ಸಿಂಗಲ್ ಸ್ಟಾರ್ ಗಳಿಸಿ ಮುಂದಿನ ದಿನಗಳಲ್ಲಿ ಹೆಚ್ಚಿನ ಕೆಲಸ ಮಾಡುವ ನಿರೀಕ್ಷೆ ಹುಟ್ಟಿಸಿವೆ.



ದೇಶದ ಎಲ್ಲಾ ಮಹಾನಗರಗಳಲ್ಲಿ ಕಸ ಸಂಗ್ರಹ ಮತ್ತು ವಿಲೇವಾರಿಯದ್ದೇ ದೊಡ್ಡ ಸಮಸ್ಯೆ. ಹಸಿ ಕಸ, ಒಣ ಕಸ, ಪ್ಲಾಸ್ಟಿಕ್, ಇ-ತ್ಯಾಜ್ಯ, ಹಳೆಯ ಕಟ್ಟಡಗಳ ಧ್ವಂಸದ ಘನ ಕಸ, ಚರಂಡಿ, ಗಟಾರಗಳಿಂದ ತೆಗೆದದ್ದು, ಪೇಪರ್, ಬೀಡಿ, ಸಿಗರೇಟು, ಪ್ಯಾಕಿಂಗ್ ಮೆಟೀರಿಯಲ್ ಹೀಗೆ ಹತ್ತು ಹಲವು ಬಗೆಯ ಕಸವನ್ನು ವಿಂಗಡಿಸಿ, ವಿಲೇವಾರಿ ಮಾಡುವುದು, ಆಸ್ಪತ್ರೆ– ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಸಂಗ್ರಹವಾಗುವುದನ್ನು ಇನ್ಸಿನರೇಟರ್‌ಗೆ ಹಾಕಿ ಸುಡುವುದು ಎಲ್ಲವನ್ನೂ ನಿರ್ವಹಿಸುವ ಜವಾಬ್ದಾರಿಯನ್ನು ಮುನಿಸಿಪಲ್ ಸಂಸ್ಥೆಗಳಿಗೆ ವಹಿಸಲಾಗಿದೆ.

ಕೆಲವು ನಗರಗಳಲ್ಲಿ ಸಾರ್ವಜನಿಕರು, ಸಂಘ ಸಂಸ್ಥೆಗಳ ಸಹಭಾಗಿತ್ವದಿಂದ ಕಸದ ವಿಲೇವಾರಿ ಸಮರ್ಪಕವಾಗಿ ಜರುಗುತ್ತಿದೆ. ಸಂಗ್ರಹಿಸಿದ ಘನ ಕಸವನ್ನು ಭೂಭರ್ತಿ ಮಾಡದೆ ಮರುಬಳಕೆಗೆ ಯೋಗ್ಯವೆನಿಸುವಂತೆ ಮಾಡುವುದೇ ಸದ್ಯದ ಸವಾಲು. ಅದಕ್ಕೆ ಪರಿಹಾರವೆಂಬಂತೆ, ಮದ್ರಾಸ್ ಐಐಟಿ ದಿನಕ್ಕೆ ಒಂದು ಟನ್ ಘನ ಕಸವನ್ನು ಆವಿ ರೂಪದ ಶಕ್ತಿಯನ್ನಾಗಿ ಪರಿವರ್ತಿಸುವ ರೋಟರಿ ಫರ್ನೇಸ್ ಘಟಕವನ್ನು ಸಿದ್ಧಪಡಿಸಿ ಇತ್ತೀಚೆಗೆ ತಿರುಚಿರಾಪಳ್ಳಿ ನಗರದ ಬಿಎಚ್‌ಇಎಲ್ ಕ್ಯಾಂಪಸ್‌ನಲ್ಲಿ ಸ್ಥಾಪಿಸಿ ಯಶಸ್ವಿ ಕಾರ್ಯಾರಂಭ ಮಾಡಿದೆ.

## ವಾಚಕರ ವಾಣಿ

### ದೈಹಿಕ ಪರೀಕ್ಷೆ: ಅವ್ಯವಸ್ಥೆ ಸರಿಪಡಿಸಿ

ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಪೊಲೀಸ್ ದೈಹಿಕ ಪರೀಕ್ಷೆಗೆ ರಾಜ್ಯದ ಹಲವು ಜಿಲ್ಲೆಗಳಿಂದ ಸ್ಪರ್ಧಾರ್ಥಿಗಳು ಬಂದು, ಗೇಟ್ ಹೊರಗೆ ಗಾಳಿ, ಮಳೆ, ಚಳಿಯನ್ನು ಲೆಕ್ಕಿಸದೆ ನಿಲ್ಲುತ್ತಾರೆ. ಬೆಳಿಗ್ಗೆ 3 ಗಂಟೆಗೇ ಬಂದು ಪಾಳಿ ಹಚ್ಚುವುದು ವಾಡಿಕೆ. 7 ಗಂಟೆಗೆ ಬರುವ ಪೊಲೀಸ್ ಸಿಬ್ಬಂದಿ, ಪಾಳಿ ಲೆಕ್ಕಕ್ಕಿಲ್ಲದ ಹಾಗೆ ವರ್ತಿಸಿ, ದೈಹಿಕ ಪರೀಕ್ಷೆಗಾಗಿ ಮನಸೋಇಚ್ಛೆ ಅಭ್ಯರ್ಥಿಗಳನ್ನು ಮೈದಾನಕ್ಕೆ ಬಿಡುತ್ತಾರೆ. ಇಂತಹ ಪದ್ಧತಿ ನಿಲ್ಲಬೇಕು. ದೈಹಿಕ ಪರೀಕ್ಷೆಯ ಪ್ರವೇಶ ಪತ್ರದಲ್ಲಿ ಕ್ರಮ ಸಂಖ್ಯೆ ಇರುವುದರಿಂದ, ಅದರ ಪ್ರಕಾರ ಅಭ್ಯರ್ಥಿಗಳನ್ನು ಕಳುಹಿಸುವ ಮೂಲಕ ಇಂತಹ ಅವ್ಯವಸ್ಥೆಯನ್ನು ತಪ್ಪಿಸಬೇಕು.

**ಬಸನಗೌಡ ಪಾಟೀಲ,** ಯರಗುಪ್ಪಿ, ಧಾರವಾಡ

### ಮೃಗಗಳ ಬಗೆಗೇಕೆ ಮೃಗೀಯ ವರ್ತನೆ?

ಚಾಮರಾಜನಗರದಿಂದ ತಮಿಳುನಾಡಿನ ಸತ್ಯಮಂಗಲಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯ ಹಾಸನೂರು ಬಳಿ ಎರಡು ಆನೆಗಳು ವಾಹನಗಳ ಮೇಲೆ ದಾಳಿಗೆ ಯತ್ನಿಸಿದ ದೃಶ್ಯಗಳನ್ನು ನೋಡಿ (ಪ್ರ.ವಾ., ಜೂನ್ 27) ಮನಸ್ಸಿಗೆ ವ್ಯಥೆಯಾಯಿತು. ಆನೆಗಳ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡದೆ ಅವುಗಳಿಗೆ ಅಡ್ಡಲಾಗಿ ವಾಹನಗಳನ್ನು ನಿಲ್ಲಿಸಿ ಅವುಗಳ ಕೋಪವನ್ನು ಕೆರಳಿಸುವುದು, ಸೆಲ್ಫಿ ತೆಗೆದುಕೊಳ್ಳಲು ಮುಂದಾಗುವವರ ವಿರುದ್ಧ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಮಾನವನ ಅತಿ ದುರಾಸೆಯಿಂದ ಅರಣ್ಯ ಪ್ರದೇಶ ಆಕ್ರಮಣ, ಕಾಡುಗಳ್ಳತನದಂತಹ ಕೃತ್ಯಗಳಿಂದ ಅರಣ್ಯ ನಾಶವಾಗುತ್ತಿದೆ. ಇದರಿಂದ, ಅರಣ್ಯದಲ್ಲಿ ಸ್ವತಂತ್ರವಾಗಿದ್ದ ಪ್ರಾಣಿಗಳು ಆಹಾರ, ನೀರು ಅರಸಿ ವಲಸೆ ಹೋಗುವ ಪ್ರಸಂಗ ಬಂದಿದೆ. ಸರ್ಕಾರದ ಸೂಚನಾ ಫಲಕಗಳು ಇದ್ದರೂ ಅವನ್ನು ಕಡೆಗಣಿಸಲಾಗುತ್ತಿದೆ. ಜನ ಮೃಗೀಯವಾಗಿ ವರ್ತಿಸದೆ, ಕಾನೂನಿಗೆ ತಲೆಬಾಗಿ ಮನುಷ್ಯತ್ವವನ್ನು ಪಾಲಿಸುವರೇ?

**ರಾ.ಬಾ.ವರದರಾಜನ್,** ಬೆಂಗಳೂರು

### ಹೃದ್ರೋಗಿಗಳ ಬವಣೆ ತಪ್ಪಿಸಿ

ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಯು ಕರ್ನಾಟಕದ ಹೆಮ್ಮೆ. ಪ್ರತಿದಿನ ಸಾವಿರಾರು ಹೊರರೋಗಿಗಳನ್ನು ಪರೀಕ್ಷಿಸುವ ಈ ಸಂಸ್ಥೆ ವಾರ್ಷಿಕವಾಗಿ 3000ಕ್ಕೂ ಹೆಚ್ಚು ಹೃದಯ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತದೆ. ಪ್ರತಿದಿನ ಈ ಆಸ್ಪತ್ರೆಗೆ ದೂರದ ಊರುಗಳಿಂದ ನೂರಾರು ಜನ ಹೃದಯ ಪರೀಕ್ಷೆ ಮತ್ತು ಚಿಕಿತ್ಸೆಗಾಗಿ ಬರುತ್ತಾರೆ. ಹೊರರೋಗಿ ವಿಭಾಗದಲ್ಲಿ ರೋಗ ಪರೀಕ್ಷೆಗಾಗಿ ನೊಂದಣಿ ಮಾಡಿಸಿಕೊಳ್ಳಲು ಸರತಿ ಸಾಲಿನಲ್ಲಿ ನಿಲ್ಲಬೇಕಿದೆ. ಬೆಳಗಿನ ಜಾವ 3 ಗಂಟೆಗೇ ಈ ಸರತಿ ಸಾಲು ಪ್ರಾರಂಭವಾಗುತ್ತದೆ. ಆದರೆ ಹೊರರೋಗಿ ನೋಂದಣಿ ವಿಭಾಗ ತೆರೆಯುವುದು ಬೆಳಿಗ್ಗೆ 9 ಗಂಟೆಗೆ. ಅಲ್ಲಿಯವರೆಗೂ ರೋಗಿಗಳು ಮತ್ತು ಅವರ ಕಡೆಯವರು ಈ ಸಾಲಿನಲ್ಲಿ ನಿಲ್ಲಬೇಕಿರುವುದರಿಂದ ಬಹಳಷ್ಟು ಜನರಿಗೆ ಪ್ರತಿನಿತ್ಯ ತೊಂದರೆಯಾಗುತ್ತಿದೆ. ಸರತಿ ಸಾಲಿನಲ್ಲಿ ನಿಂತವರು ಮೂತ್ರ ವಿಸರ್ಜನೆ ಮಾಡಲು ಕೂಡಾ ಹೋಗಲಾರದ ಪರಿಸ್ಥಿತಿ ಇದೆ. ಈ ತೊಂದರೆ ತಪ್ಪಿಸಬೇಕೆಂದರೆ ದೂರದ ಊರಿನಿಂದ ಬರುವವರಿಗೆ ಟೋಕನ್ ಕೊಡುವ ವ್ಯವಸ್ಥೆ ಮಾಡಬೇಕು. ಸಂಸ್ಥೆಯ ನಿರ್ದೇಶಕರು ಈ ದಿಸೆಯಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿ.

**ವಿ.ತಿಪ್ಪೇಸ್ವಾಮಿ,** ಹಿರಿಯೂರು

### ನೆರವು ನೀಡಿ

ನನ್ನ ಪತಿ ಎಂ. ಅಣ್ಣೋಜಿ ರಾವ್ ಅವರು 25 ವರ್ಷಗಳಿಂದ ಚನ್ನಗಿರಿಯಲ್ಲಿ ಪತ್ರಿಕಾ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇದೇ 17ರಂದು ಮುಂಜಾನೆ ಮನೆಮನೆಗೆ ಪತ್ರಿಕೆ ವಿತರಿಸಿ ವಾಪಸ್ ಬರುವ ವೇಳೆ, ಚನ್ನಗಿರಿ ತಾಲ್ಲೂಕಿನ ನರಶೆಟ್ಟಿಹಳ್ಳಿ ಬಳಿ ಬೈಕ್‌ಗಳ ನಡುವೆ ಡಿಕ್ಕಿಯಾಗಿ ಸಂಭವಿಸಿದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅಂದಾಜು ₹ 2.40 ಲಕ್ಷ ವೆಚ್ಚವಾಗಲಿದೆ ಎಂದು ವೈದ್ಯರು ತಿಳಿಸಿದ್ದಾರೆ. ಈ ಹಣವನ್ನು ಭರಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ದಾನಿಗಳು ದಯಮಾಡಿ ನೆರವು ನೀಡಿ. ಬ್ಯಾಂಕ್ ಖಾತೆಯ ವಿವರ: ಅಣ್ಣೋಜಿ ರಾವ್ ಎಂ., ಉಳಿತಾಯ ಖಾತೆ ಸಂಖ್ಯೆ: 0572101051746, ಐಎಫ್‌ಎಸ್‌ಸಿ: CNRB0000572, ಕೆನರಾ ಬ್ಯಾಂಕ್, ಚನ್ನಗಿರಿ ಶಾಖೆ, ಸಂಪರ್ಕ ಸಂಖ್ಯೆ–9448921846

**ಮಂಜುಳಾ ಅಣ್ಣೋಜಿ ರಾವ್,** ಚನ್ನಗಿರಿ

### ಜಾತಿಯಲ್ಲಿ ಮುಂದುವರಿದ ಮಾತ್ರಕ್ಕೆ...

'ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿ ಮೀಸಲಾತಿಗೆ ಮಾನದಂಡವಿಲ್ಲ' ಎಂದು ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಕೃತಿ ಬಿಡುಗಡೆ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ (ಪ್ರ.ವಾ., ಜೂನ್ 27). ನರೇಂದ್ರ ಮೋದಿ ಅವರು ಇಂಥವರಿಗೆ ಶೇ 10ರಷ್ಟು ಮೀಸಲಾತಿ ನೀಡಿದ್ದರೂ ಹಿಂದುಳಿದ ವರ್ಗದವರು ಮೌನವಾಗಿದ್ದಾರೆ ಎಂದೂ ಹೇಳಿದ್ದಾರೆ. ನಿಜ, ಸಮಾಜದ ಎಲ್ಲ ವರ್ಗಗಳಲ್ಲೂ ಬಡವರು, ಕಡುಬಡವರು ಇದ್ದಾರೆ. ಯಾರೂ ಇಂಥ ಜಾತಿಯಲ್ಲಿ ಹುಟ್ಟಬೇಕು ಎಂದು ಅರ್ಜಿ ಹಾಕಿ ಹುಟ್ಟಿ ಬರುವುದಿಲ್ಲ. ಪ್ರಭಾವಿ ಜಾತಿಗಳಲ್ಲೂ ಆರ್ಥಿಕವಾಗಿ ತುಂಬಾ ಹಿಂದುಳಿದವರು ಇದ್ದಾರೆ ಎಂಬುದು ಕಟು ಸತ್ಯ. ಆರ್ಥಿಕ ತೊಂದರೆ ಇರುವ ಕಾರಣಕ್ಕೆ ಅಂತಹ ಜಾತಿಗಳ ನೂರಾರು ವಿದ್ಯಾರ್ಥಿಗಳು ಓದು ಮುಂದುವರಿಸಲಾರದೆ ಕೈಚೆಲ್ಲಿ ಕುಳಿತಿರುವ ಹಲವಾರು ನಿದರ್ಶನಗಳಿವೆ. ಹಾಗೆ ನೋಡಿದರೆ ಮೀಸಲಾತಿಯ ಸೌಲಭ್ಯ ಪಡೆದು ಐಎಎಸ್, ಕೆಎಎಸ್ ಪಾಸಾಗಿ ಸರ್ಕಾರಿ ಉನ್ನತ ಉದ್ಯೋಗ ಪಡೆದುಕೊಂಡು ಆರ್ಥಿಕವಾಗಿ ಸದೃಢವಾಗಿರುವ ಕುಟುಂಬ ವರ್ಗದವರ ವಿದ್ಯಾಭ್ಯಾಸಕ್ಕೆ ನಿಜವಾಗಿಯೂ ಮೀಸಲಾತಿ ಅಗತ್ಯವಿಲ್ಲ. ಆದರೂ ರೂಢಿಯಂತೆ ಅದು ಲಭ್ಯವಾಗುತ್ತಿದೆ. ಇದು ಅಸಮಾನತೆಯ ಸೂಚಕವಲ್ಲವೇ? ಜಾತಿಯೊಂದರಲ್ಲಿ ಮುಂದುವರಿದವರು ಎಂದ ಮಾತ್ರಕ್ಕೆ ಅವರನ್ನು ಸಾಮಾಜಿಕವಾಗಿ ತುಳಿಯುವುದು ಎಂಥ ಮಾನವೀಯತೆ?

**ಗಣಪತಿ ಶಿರಳಗಿ,** ಸಾಗರ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

ರಾಷ್ಟ್ರಪತಿ ಚುನಾವಣೆಯ ಅಖಾಡ ಸಜ್ಜಾಗಿದೆ. ದ್ರೌಪದಿ ಮುರ್ಮು ಅವರು ಎನ್‌ಡಿಎ ಅಭ್ಯರ್ಥಿಯಾಗಿ ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಯಶವಂತ ಸಿನ್ಹಾ ಅವರು ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ಸಂಖ್ಯಾಬಲವು ಮುರ್ಮು ಅವರ ಪರವಾಗಿಯೇ ಇದೆ. ಆದರೆ, ವಿರೋಧ ಪಕ್ಷಗಳು ಒಗ್ಗಟ್ಟು ಪ್ರದರ್ಶಿಸಿ, ಸಿನ್ಹಾ ಅವರ ಬೆನ್ನಿಗೆ ನಿಂತಿವೆ. ಇಬ್ಬರೂ ಅಭ್ಯರ್ಥಿಗಳ ಪರಿಚಯ, ವಿವಿಧ ಪಕ್ಷಗಳ ರಾಜಕೀಯ ಲೆಕ್ಕಾಚಾರದ ಸುತ್ತ ಒಂದು ನೋಟ ಇಲ್ಲಿದೆ:

# ಮುರ್ಮು–ಸಿನ್ಹಾ ರಾಷ್ಟ್ರಪತಿ ಹುದ್ದೆಗೆ ಪೈಪೋಟಿ

## ದ್ರೌಪದಿ ಮುರ್ಮು

ರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಘೋಷಣೆಯಾದ ಮರುದಿನವೇ ದ್ರೌಪದಿ ಮುರ್ಮು ಅವರ ವಿಡಿಯೊ ಒಂದು ವೈರಲ್ ಆಗಿತ್ತು. ದ್ರೌಪದಿ ಅವರು ದೇವಾಲಯವೊಂದರ ಆವರಣದಲ್ಲಿರುವ ಕಸವನ್ನು ಗುಡಿಸುತ್ತಿರುವ ದೃಶ್ಯವಿದ್ದ ವಿಡಿಯೊ ಅದು. ರಾಷ್ಟ್ರಪತಿ ಚುನಾವಣೆಯ ಅಭ್ಯರ್ಥಿಯಾಗಿ ಘೋಷಣೆಯಾದ ನಂತರ ಅವರಿಗೆ ಝಡ್ ಶ್ರೇಣಿಯ ಭದ್ರತೆ ನೀಡಲಾಗಿತ್ತು. ಅವರು ಕಸಗುಡಿಸುತ್ತಿರುವ ವಿಡಿಯೊದಲ್ಲಿ ಅವರ ಭದ್ರತಾ ಸಿಬ್ಬಂದಿ ಸಹ ಇದ್ದರು. ದ್ರೌಪದಿ ಅವರು ಬಿಹಾರ, ಪೂರ್ವ ಭಾರತದ ಒಡಿಶಾ, ಛತ್ತೀಸಗಡ, ಪಶ್ಚಿಮ ಬಂಗಾಳ ಹಾಗೂ ಈಶಾನ್ಯ ಭಾರತದ ತ್ರಿಪುರಾ, ಅಸ್ಸಾಂನಲ್ಲಿ ಅಂದಾಜು ಒಂದು ಕೋಟಿಯಷ್ಟು ಜನಸಂಖ್ಯೆ ಇರುವ ಸಂತಾಲಾ ಬುಡಕಟ್ಟಿಗೆ ಸೇರಿದ್ದಾರೆ. ದ್ರೌಪದಿ ಅವರು ರಾಜಕೀಯಕ್ಕೆ ಹೊಸಬರಲ್ಲ. 1997ರಲ್ಲಿ ರಾಜಕೀಯಕ್ಕೆ ಕಾಲಿರಿಸಿದ ನಂತರ ಅವರು, ರಾಜಕೀಯ ಮತ್ತು ಸಾಂವಿಧಾನಿಕ ಹುದ್ದೆಗಳಲ್ಲಿ ಮೇಲೇರುತ್ತಲೇ ಬಂದಿದ್ದಾರೆ.

ರಾಜಕಾರಣವು ದ್ರೌಪದಿ ಅವರಿಗೆ ಅವರ ತವರು ಮನೆಯ ಬಳುವಳಿ ಎಂದರೆ ತಪ್ಪಾಗಲಾರದು. ಒಡಿಶಾದ ಮಯೂರ್‌ಗಂಜ್‌ನ ಬೈಡಾಪೋಸಿ ದ್ರೌಪದಿ ಅವರ ಹುಟ್ಟೂರು. ಅವರ ತಂದೆ ಬಿರಂಚೀ ನಾರಾಯಣ ಟುಡು ಅವರು, ಬೈಡಾಪೋಸಿ ಗ್ರಾಮದ ಮುಖ್ಯಸ್ಥರಾಗಿದ್ದರು. ಅದಕ್ಕೂ ಮೊದಲು ಅವರ ತಾತ ಆ ಹುದ್ದೆ ನಿರ್ವಹಿಸಿದ್ದರು. ಹೀಗೆ ಗ್ರಾಮಾಡಳಿತದ ಅನುಭವವಿದ್ದ ಟುಡು ಕುಟುಂಬದಲ್ಲಿ ದ್ರೌಪದಿ ಅವರು 1958ರ ಜೂನ್ 20ರಂದು ಜನಿಸಿದರು. ಮಯೂರ್‌ಬಂಜ್‌ನಲ್ಲಿ ಶಾಲಾ ಶಿಕ್ಷಣ, ಭುವನೇಶ್ವರದಲ್ಲಿ ಕಾಲೇಜು ಶಿಕ್ಷಣ ಪೂರೈಸಿದ ಅವರು ಕಲಾ ಪದವಿ ಪಡೆದಿದ್ದಾರೆ. ಶಿಕ್ಷಣದ ನಂತರ ಒಡಿಶಾ ನೀರಾವರಿ ಇಲಾಖೆಯಲ್ಲಿ ನೌಕರಿ, ಆನಂತರ ಶಿಕ್ಷಕಿ ಹುದ್ದೆ ನಿರ್ವಹಿಸಿದ ಅನುಭವ ಅವರಿಗಿದೆ.

ಇದರ ಮಧ್ಯೆಯೇ 1997ರಲ್ಲಿ ಅವರು ಒಡಿಶಾದ ರಾಯ್‌ರಂಗಪುರ ನಗರಾಡಳಿತ ಸಂಸ್ಥೆಯ ಸದಸ್ಯರಾಗಿ ಚುನಾಯಿತರಾದರು. ಅದೇ ವರ್ಷ ನಗರಾಡಳಿತ ಸಂಸ್ಥೆಯ ಉಪಾಧ್ಯಕ್ಷೆಯೂ ಆದರು. ಅದರ ಬೆನ್ನಲ್ಲೇ ಒಡಿಶಾ ರಾಜ್ಯ ಬಿಜೆಪಿ ಪರಿಶಿಷ್ಟ ಪಂಗಡ ಮೋರ್ಚಾದ ಉಪಾಧ್ಯಕ್ಷೆಯಾಗಿ ಅವರನ್ನು ಆಯ್ಕೆ ಮಾಡಲಾಯಿತು. 2000ದಲ್ಲಿ ಒಡಿಶಾ ವಿಧಾನಸಭಾ ಚುನಾವಣೆಯಲ್ಲಿ ರಾಯ್‌ರಂಗಪುರ ಕ್ಷೇತ್ರದಿಂದ ಕಣಕ್ಕೆ ಇಳಿದು ಆರಿಸಿ ಬಂದರು. ಬಿಜೆಡಿ–ಬಿಜೆಪಿ ಮೈತ್ರಿ ಸರ್ಕಾರದಲ್ಲಿ ದ್ರೌಪದಿ ಸಚಿವೆಯೂ ಆದರು. ಈ ಸರ್ಕಾರದಲ್ಲಿ ಅವರು ಮೀನುಗಾರಿಕೆ, ಹೈನುಗಾರಿಕೆ, ಸಾರಿಗೆ ಮತ್ತು ವಾಣಿಜ್ಯ ಇಲಾಖೆಗಳನ್ನು ನಿರ್ವಹಿಸಿದರು. 2004ರಲ್ಲಿ ಮತ್ತೆ ಶಾಸಕರಾಗಿ ಆಯ್ಕೆಯಾದರು. 2009ರಲ್ಲಿ ಅವರನ್ನು ಬಿಜೆಪಿಯ ರಾಜ್ಯ ಪರಿಶಿಷ್ಟ ಪಂಗಡ ಮೋರ್ಚಾದ ಅಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿತ್ತು.



2013ರಲ್ಲಿ ಬಿಜೆಪಿಯ ಪರಿಶಿಷ್ಟ ಪಂಗಡ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾಗಿ ಅವರು ಆಯ್ಕೆಯಾದರು. ನಂತರ 2015ರಲ್ಲಿ ಜಾರ್ಖಂಡ್‌ನ ರಾಜ್ಯಪಾಲೆಯಾಗಿ ಅವರನ್ನು ಆಯ್ಕೆ ಮಾಡಲಾಯಿತು. ಜಾರ್ಖಂಡ್‌ನ ಮೊದಲ ಮಹಿಳಾ ರಾಜ್ಯಪಾಲರು ಎಂಬ ಹೆಗ್ಗಳಿಕೆ, ರಾಜ್ಯಪಾಲರ ಹುದ್ದೆಗೆ ಏರಿದ ಒಡಿಶಾದ ಮೊದಲ ಮಹಿಳೆ ಎಂಬಂತಹ ಹೆಗ್ಗಳಿಕೆಗೆ ಪಾತ್ರರಾದರು. ಜಾರ್ಖಂಡ್‌ನ ರಾಜ್ಯಪಾಲರಾಗಿ ಪೂರ್ಣಾವಧಿಯನ್ನು ಪೂರೈಸಿದ ಮೊದಲಿಗರು ಎಂಬ ಹೆಗ್ಗಳಿಕೆಯೂ ಅವರಿಗೆ ಇದೆ. ಈಗ ರಾಷ್ಟ್ರಪತಿ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯಾಗಿರುವ ಅವರು, ಆ ಹುದ್ದೆಗೆ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.



ದ್ರೌಪದಿ ಮುರ್ಮು

## ಯಶವಂತ ಸಿನ್ಹಾ

ಸುದೀರ್ಘ ರಾಜಕೀಯ ಹಾಗೂ ಆಡಳಿತಾತ್ಮಕ ಅನುಭವ ಹೊಂದಿರುವ ಯಶವಂತ ಸಿನ್ಹಾ ಅವರು ಪ್ರತಿಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ರಾಷ್ಟ್ರಪತಿ ಚುನಾವಣಾ ಅಖಾಡಕ್ಕೆ ಧುಮುಕಿದ್ದಾರೆ. ಅಧ್ಯಾಪಕರಾಗಿ, ಐಎಎಸ್ ಅಧಿಕಾರಿಯಾಗಿ, ಕೇಂದ್ರ ಹಣಕಾಸು ಮತ್ತು ವಿದೇಶಾಂಗ ಇಲಾಖೆಗಳ ಸಚಿವರಾಗಿ ಕೆಲಸ ಮಾಡಿದ ಅನುಭವ ಇರುವ ಸಿನ್ಹಾ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಪ್ರಖರ ಟೀಕಾಕಾರರಲ್ಲಿ ಒಬ್ಬರು. ಬಿಜೆಪಿ ಸರ್ಕಾರದ 'ಅಸಮರ್ಪಕ ನಡೆ'ಗಳನ್ನು ಬಹಿರಂಗವಾಗಿ ವಿರೋಧಿಸುವ ಛಾತಿ ಹೊಂದಿರುವ ಸಿನ್ಹಾ ಅವರ ಉಮೇದುವಾರಿಕೆಗೆ ಪ್ರತಿಪಕ್ಷಗಳು ಜೈ ಎಂದಿವೆ. 'ರಾಷ್ಟ್ರಪತಿಯು ಆಳುವ ಪಕ್ಷದ ರಬ್ಬರ್ ಸ್ಟಾಂಪ್ ಆಗಿರಬಾರದು' ಎಂಬುದು ಸಿನ್ಹಾ ಅವರ ಮಾತು.

ಬಿಜೆಪಿಯಲ್ಲಿ 22 ವರ್ಷಗಳ ಕಾಲ ಇದ್ದ ಅವರು, ಹಿರಿಯ ನಾಯಕರಾದ ಎಲ್.ಕೆ. ಅಡ್ವಾಣಿ, ಅಟಲ್ ಬಿಹಾರಿ ವಾಜಪೇಯಿ ಅವರ ಜೊತೆ ನಿಕಟ ಸಂಪರ್ಕದಲ್ಲಿದ್ದವರು. 1993ರಲ್ಲಿ ಬಿಜೆಪಿ ಸೇರಿದ ಸಿನ್ಹಾ, ವಾಜಪೇಯಿ ಅವರ ಸಂಪುಟದಲ್ಲಿ ಸಚಿವರಾಗಿದ್ದರು. ಅತಿಮುಖ್ಯವಾದ ಹಣಕಾಸು ಹಾಗೂ ವಿದೇಶಾಂಗ ಇಲಾಖೆಗಳನ್ನು 1999–2004ರ ಅವಧಿಯಲ್ಲಿ ನಿಭಾಯಿಸಿದ ಹೆಗ್ಗಳಿಕೆ ಹೊಂದಿದ್ದಾರೆ.


ಪಕ್ಷದಲ್ಲಿ ಸುದೀರ್ಘ ಅನುಭವ, ಆಡಳಿತದ ಪಕ್ವತೆ, ವರ್ಚಸ್ಸು ಇದ್ದರೂ, ನರೇಂದ್ರ ಮೋದಿ ನೇತೃತ್ವದ ಆಡಳಿತ ಆರಂಭವಾದ ಬಳಿಕ ಸಿನ್ಹಾ ಅವರಿಗೆ ಇದ್ದ ಮಹತ್ವ ಕುಸಿಯಿತು. 2014ರ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ನಿರಾಕರಿಸಲಾಯಿತು. 'ಪಕ್ಷವು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ'ಯಾಗಿದೆ ಎಂದು ಆರೋಪಿಸಿದರು. ಬಿಜೆಪಿಯಲ್ಲಿ ಮೂಲೆಗುಂಪಾಗಿರುವ ಹಿರಿಯರ ಸಾಲಿಗೆ ಸೇರದೇ, ಪಕ್ಷದ ವಿರುದ್ಧ ಬಂಡೆದ್ದು ಹೊರಬಂದರು.

'ಮಾಜಿ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಆರ್ಥಿಕತೆಯನ್ನು ಸಂಪೂರ್ಣ ನಾಶ ಮಾಡಿದರು' ಎಂದು ಆರೋಪಿಸಿದರು. ಕೇಂದ್ರ ಸರ್ಕಾರದ ನೋಟು ರದ್ದತಿ ನಿರ್ಧಾರವನ್ನು ಪ್ರಶ್ನಿಸಿದರು. ಕಾಶ್ಮೀರದ ವಿಚಾರದಲ್ಲಿ ಸರ್ಕಾರದ ನಿರ್ಧಾರಗಳನ್ನು ಕಟುವಾಗಿ ವಿರೋಧಿಸಿದರು. ರಫೇಲ್ ಹಗರಣದಲ್ಲಿ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಆದರೆ ಪುನರ್ ಪರಿಶೀಲನಾ ಅರ್ಜಿಗಳನ್ನು ಕೋರ್ಟ್ ವಜಾಗೊಳಿಸಿತು. ಮೋದಿ ಅವರೊಂದಿಗೆ ಚರ್ಚಿಸಲು ಸಮಯ ಕೇಳಿದ್ದ ಸಿನ್ಹಾ ಅವರ ಪತ್ರಕ್ಕೆ ಇನ್ನೂ ಉತ್ತರ ಬಂದಿಲ್ಲ.

1937ರಲ್ಲಿ ಪಟ್ನಾದಲ್ಲಿ ಜನಿಸಿದ ಅವರು ರಾಜಕೀಯ ಶಾಸ್ತ್ರದ ವಿದ್ಯಾರ್ಥಿ. 1962ರವರೆಗೂ ಅವರು ಪಟ್ನಾ ವಿಶ್ವವಿದ್ಯಾಲಯದಲ್ಲಿ ಬೋಧಕರಾಗಿದ್ದರು. ನಂತರ ನಾಗರಿಕ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, 24 ವರ್ಷಗಳ ಕಾಲ ಐಎಎಸ್ ಅಧಿಕಾರಿಯಾಗಿ ಸರ್ಕಾರದ ನಾನಾ ವಿಭಾಗಗಳಲ್ಲಿ ಕೆಲಸ ಮಾಡಿದರು. ಮಹತ್ವದ ಆಡಳಿತಾತ್ಮಕ ಹುದ್ದೆಗಳನ್ನು ನಿಭಾಯಿಸಿದ್ದಾರೆ. 1984ರಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ, ಜನತಾದಳ ಸೇರಿದರು. 1988ರಲ್ಲಿ ಸಂಸತ್ ಪ್ರವೇಶಿಸಿದ ಅವರು, ಮಾಜಿ ಪ್ರಧಾನಿ ಚಂದ್ರಶೇಖರ್ ಸಂಪುಟದಲ್ಲಿ ಅಲ್ಪ ಅವಧಿಗೆ ಸಚಿವರಾಗಿ ಕೆಲಸ ಮಾಡಿದರು. ವಾಜಪೇಯಿ ಸಂಪುಟದಲ್ಲಿ ಎರಡು ಬಾರಿ ಹಣಕಾಸು ಸಚಿವರಾಗಿದ್ದರು.

2021ರಲ್ಲಿ ತೃಣಮೂಲ ಕಾಂಗ್ರೆಸ್ ಸೇರಿದರು. ರಾಷ್ಟ್ರಪತಿ ಚುನಾವಣೆಗೆ ಸ್ಪರ್ಧಿಸುವ ಉದ್ದೇಶದಿಂದ ಪಕ್ಷವನ್ನು ತ್ಯಜಿಸಿರುವ ಯಶವಂತ್ ಸಿನ್ಹಾ, 'ರಿಲೆಂಟ್‌ಲೆಸ್' ಎಂಬ ಆತ್ಮಚರಿತ್ರೆ ಬರೆದಿದ್ದಾರೆ.

ಇವರ ಪುತ್ರ ಜಯಂತ್ ಸಿನ್ಹಾ ಅವರು ಬಿಜೆಪಿಯಲ್ಲೇ ಇದ್ದು, ಮೋದಿ ಅವರ ಸರ್ಕಾರದ ಮೊದಲ ಅವಧಿಯಲ್ಲಿ ಹಣಕಾಸು ಖಾತೆ ರಾಜ್ಯ ಸಚಿವರಾಗಿ ಕೆಲಸ ಮಾಡಿದ್ದರು.



ಯಶವಂತ್ ಸಿನ್ಹಾ

## ಅಚ್ಚರಿ, ರಾಜಕೀಯ ಲೆಕ್ಕಾಚಾರ ಬಿಜೆಪಿಯ ಶೈಲಿ

ರಾಷ್ಟ್ರಪತಿ ಅಭ್ಯರ್ಥಿಯ ಆಯ್ಕೆಯಲ್ಲಿ ಬಿಜೆಪಿ ನಿರ್ದಿಷ್ಟ ಶೈಲಿಯೊಂದನ್ನು ಅನುಸರಿಸುತ್ತಿದೆ. ರಾಷ್ಟ್ರಪತಿ ಮಾತ್ರವಲ್ಲ, ಯಾವುದೇ ಹುದ್ದೆಗೆ ನಾಮ ನಿರ್ದೇಶನ ಮಾಡುವಾಗಲೂ ಈ ಶೈಲಿಯನ್ನು ಗಮನಿಸಬಹುದು. ಬಿಜೆಪಿಯ ಆಯ್ಕೆಯು ಅಚ್ಚರಿಕಾರಕವಾಗಿಯೇ ಇರುತ್ತದೆ. ರಾಷ್ಟ್ರಪತಿ ಹುದ್ದೆಗೆ 2017ರಲ್ಲಿ ಚುನಾವಣೆ ನಡೆದಾಗ ಬಿಜೆಪಿಯು ರಾಮನಾಥ ಕೋವಿಂದ್ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಿಸಿತು. ಅದುವರೆಗೆ ಕೋವಿಂದ್ ಅವರು ಸುದ್ದಿಯಲ್ಲಿ ಇದ್ದವರೇ ಅಲ್ಲ. ರಾಷ್ಟ್ರಪತಿ ಅಭ್ಯರ್ಥಿ ವಿಚಾರದಲ್ಲಿ ಈ ಬಾರಿಯೂ ಬಿಜೆಪಿ ಇದೇ ಶೈಲಿ ಅನುಸರಿಸಿದೆ. ಜಾರ್ಖಂಡ್ ರಾಜ್ಯಪಾಲೆಯಾಗಿದ್ದ ದ್ರೌಪದಿ ಮುರ್ಮು ಅವರ ಹೆಸರು ಘೋಷಿಸುವ ವರೆಗೆ ಅವರು ಅಭ್ಯರ್ಥಿಯಾಗಬಹುದು ಎಂಬ ಕಲ್ಪನೆ ಅವರಿಗೇ ಇರಲಿಲ್ಲ. ಮುರ್ಮು ಅವರು ಒಡಿಶಾದವರು. 2002ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಇದ್ದಾಗಲೂ ರಾಷ್ಟ್ರಪತಿ ಅಭ್ಯರ್ಥಿಯಾಗಿ ವಿಜ್ಞಾನಿ ಎ.ಪಿ. ಜೆ. ಅಬ್ದುಲ್ ಕಲಾಂ ಅವರನ್ನು ಬಿಜೆಪಿ ಆಯ್ಕೆ ಮಾಡಿತ್ತು. ಇದು ಕೂಡ ಅಚ್ಚರಿಯ ಆಯ್ಕೆಯೇ ಆಗಿತ್ತು. ಕಲಾಂ ಅವರಿಗೆ ಎನ್‌ಡಿಎಯೇತರ ಪಕ್ಷಗಳ ಬೆಂಬಲವೂ ಸಿಕ್ಕಿತ್ತು.

**ರಾಜಕೀಯ ಲೆಕ್ಕಾಚಾರ:** ಬಿಜೆಪಿಯ ಅಭ್ಯರ್ಥಿ ಆಯ್ಕೆಯ ಹಿಂದೆ ಚುನಾವಣಾ ರಾಜಕಾರಣದ ಲೆಕ್ಕಾಚಾರ ಇದ್ದೇ ಇರುತ್ತದೆ. ಪರಿಶಿಷ್ಟ ಜಾತಿಯ ಮತಬ್ಯಾಂಕ್ ಅನ್ನು ತನ್ನತ್ತ ಸೆಳೆದುಕೊಳ್ಳಬೇಕು ಎಂಬ ಕಾರಣಕ್ಕಾಗಿಯೇ ಕಳೆದ ಬಾರಿ ಕೋವಿಂದ್ ಅವರನ್ನು ಆಯ್ಕೆ ಮಾಡಲಾಗಿತ್ತು. ಕೋವಿಂದ್ ಅವರು ಪರಿಶಿಷ್ಟ ಜಾತಿಯ ಕೋಲಿ ಸಮುದಾಯಕ್ಕೆ ಸೇರಿದವರು. ಪರಿಶಿಷ್ಟ ಪಂಗಡಕ್ಕೆ ಸೇರಿದವರು ಈವರೆಗೆ ರಾಷ್ಟ್ರಪತಿ ಹುದ್ದೆಗೆ ಏರಿಲ್ಲ. ಈ ಬಾರಿ ಅಂತಹ ಅವಕಾಶವೊಂದನ್ನು ಬಿಜೆಪಿ ಕೊಟ್ಟಿದೆ ಎಂಬುದು ರಾಜಕೀಯವಾಗಿ ಲಾಭದಾಯಕವೇ ಆಗಿದೆ.

ಜಾರ್ಖಂಡ್ ವಿಧಾನಸಭೆಗೆ 2019ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಸೋತಿದೆ. ಜಾರ್ಖಂಡ್‌ನಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನಸಂಖ್ಯೆ ಒಟ್ಟು ಜನಸಂಖ್ಯೆಯ ಶೇ 26ಕ್ಕೂ ಹೆಚ್ಚು. ಹಾಗೆಯೇ ಒಡಿಶಾದಲ್ಲಿಯೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಒಟ್ಟು ಜನಸಂಖ್ಯೆಯಲ್ಲಿ ಶೇ 17ಕ್ಕೂ ಹೆಚ್ಚು ಇದೆ. ಮುರ್ಮು ಅವರು ಪರಿಶಿಷ್ಟ ಪಂಗಡದವರು ಮತ್ತು ಎರಡೂ ರಾಜ್ಯಗಳ ಜತೆಗೆ ನಂಟು ಇರುವವರು ಎಂಬುದು ರಾಜಕೀಯವಾಗಿ ಲಾಭ ತಂದುಕೊಡಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರ. ಮಧ್ಯ ಪ್ರದೇಶ ವಿಧಾನಸಭೆಗೆ 2018ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಪಡೆಯಲು ಸಾಧ್ಯವಾಗಿರಲಿಲ್ಲ. ಮಧ್ಯ ಪ್ರದೇಶದಲ್ಲಿ ಇರುವ ಪರಿಶಿಷ್ಟ ಪಂಗಡದ ಜನಸಂಖ್ಯೆ ಶೇ 21ಕ್ಕೂ ಹೆಚ್ಚು. ಬಿಜೆಪಿ ಪರಿಶಿಷ್ಟ ಪಂಗಡದ ಪರವಾಗಿದೆ ಎಂದು ಬಿಂಬಿಸಿಕೊಂಡರೆ ಈ ಎಲ್ಲ ರಾಜ್ಯಗಳಲ್ಲಿ ಪಕ್ಷಕ್ಕೆ ಪ್ರಯೋಜನ ದೊರೆಯಬಹುದು.

**ಗೆಲುವಿನ ತಂತ್ರ:** ಬಿಜೆಪಿ ಅಭ್ಯರ್ಥಿ ಪರವಾಗಿ ಈಗ ಇರುವ ಮತಗಳ ಪ್ರಮಾಣ ಶೇ 48.3ರಷ್ಟು. ಇದು ಗೆಲುವಿಗೆ ಸಾಕಾಗುವುದಿಲ್ಲ. ಎನ್‌ಡಿಎಯೇತರ ಎಲ್ಲ ಪಕ್ಷಗಳು ಒಟ್ಟಾದರೆ ಬಿಜೆಪಿ (ಈ ಸಾಧ್ಯತೆ ಇಲ್ಲ) ಅಭ್ಯರ್ಥಿಯನ್ನು ಸೋಲಿಸಬಹುದು. ಅದಕ್ಕಾಗಿ ಎನ್‌ಡಿಎಯೇತರ ಪಕ್ಷಗಳ ಮತವನ್ನು ಸೆಳೆಯುವಂತಹ ವ್ಯಕ್ತಿಯನ್ನು ಅಭ್ಯರ್ಥಿಯನ್ನಾಗಿ ಮಾಡಬೇಕು. ಮುರ್ಮು ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದರೆ ಒಡಿಶಾದ ಆಡಳಿತಾರೂಢ ಬಿಜು ಜನತಾ ದಳವು (ಬಿಜೆಡಿ) ಅವರಿಗೆ ಮತ ಹಾಕದಿರುವ ಸಾಧ್ಯತೆ ಇಲ್ಲ ಎಂಬುದು ಬಿಜೆಪಿಗೆ ತಿಳಿದಿತ್ತು. ಮುರ್ಮು ಅವರ ಹೆಸರು ಪ್ರಕಟವಾಗುತ್ತಿದ್ದಂತೆಯೇ ಅವರನ್ನು ಬೆಂಬಲಿಸುವುದಾಗಿ ಬಿಜೆಡಿ ಹೇಳಿದೆ. ಜಾರ್ಖಂಡ್ ಮುಕ್ತಿ ಮೋರ್ಚಾ ಕೂಡ ಮುರ್ಮು ಅವರಿಗೆ ಬೆಂಬಲ ನೀಡುವ ಸಾಧ್ಯತೆ ಇದೆ. ಆಂಧ್ರ ಪ್ರದೇಶದ ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಬೆಂಬಲ ಬಿಜೆಪಿಗೆ ಸಿಗುವುದು ನಿಚ್ಚಳ. ಇಷ್ಟಾದರೆ ಮುರ್ಮು ಗೆಲುವು ಸುಲಲಿತ.

### ವಿಪಕ್ಷಗಳ ಒಗ್ಗಟ್ಟಿಗೆ ವೇದಿಕೆ

ವಿರೋಧ ಪಕ್ಷಗಳ ಪಾಲಿಗೆ ರಾಷ್ಟ್ರಪತಿ ಚುನಾವಣೆಯು, ಮುಂಬರಲಿರುವ ಲೋಕಸಭಾ ಚುನಾವಣೆಗೆ ಸಿದ್ಧತೆ ನಡೆಸುವ ಅವಕಾಶ. ತಮ್ಮ ಒಮ್ಮತದ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಇಲ್ಲ ಎಂದು ಗೊತ್ತಿದ್ದರೂ, ತಮ್ಮಲ್ಲಿನ ಒಗ್ಗಟ್ಟನ್ನು ಖಚಿತಪಡಿಸಿಕೊಳ್ಳಲು ವಿರೋಧ ಪಕ್ಷಗಳಿಗೆ ಇದೊಂದು ವೇದಿಕೆ.

2017ರ ರಾಷ್ಟ್ರಪತಿ ಚುನಾವಣೆಯಲ್ಲೂ ವಿರೋಧ ಪಕ್ಷಗಳು ಇಂತಹದ್ದೇ ಪ್ರಯೋಗಕ್ಕೆ ಮುಂದಾಗಿದ್ದವು. ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿದ್ದ ಮೀರಾಕುಮಾರಿ ಅವರಿಗೆ ನಿರೀಕ್ಷಿತ ಮತಗಳು ಬಂದಿದ್ದವು. ಜತೆಗೆ ನಿರೀಕ್ಷೆಯಂತೆಯೇ ಅವರು ಆ ಹುದ್ದೆಗೆ ಆಯ್ಕೆಯಾಗಲಿಲ್ಲ. ಆದರೆ, ವಿರೋಧ ಪಕ್ಷಗಳ ಒಗ್ಗಟ್ಟು 2019ರ ಲೋಕಸಭಾ ಚುನಾವಣೆವರೆಗೆ ಉಳಿಯಲಿಲ್ಲ.

ವಿರೋಧ ಪಕ್ಷಗಳು ಈ ಬಾರಿ ಯಶವಂತ ಸಿನ್ಹಾ ಅವರನ್ನು ತಮ್ಮ ಒಮ್ಮತದ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದರೂ, ಅಲ್ಲಲ್ಲಿ ಇದಕ್ಕೆ ಸಣ್ಣ ಮಟ್ಟದ ಆಕ್ಷೇಪ ವ್ಯಕ್ತವಾಗಿದೆ. ಬುಡಕಟ್ಟು ಸಮುದಾಯದ ಅಭ್ಯರ್ಥಿಯನ್ನು ಎನ್‌ಡಿಎ ಕಣಕ್ಕೆ ಇಳಿಸಿದ ಕಾರಣ, ವಿರೋಧ ಪಕ್ಷಗಳ ಕೆಲವು ಮತಗಳೂ ಎನ್‌ಡಿಎ ಅಭ್ಯರ್ಥಿಗೆ ಬೀಳುವ ಸಾಧ್ಯತೆ ಇದೆ. ಇದರ ಮಧ್ಯೆ ವಿರೋಧ ಪಕ್ಷಗಳು ಲೋಕಸಭಾ ಚುನಾವಣೆವರೆಗೆ ಒಗ್ಗಟ್ಟು ಉಳಿಸಿಕೊಳ್ಳುವವೇ ಎಂಬುದನ್ನು ಕಾದು ನೋಡಬೇಕಿದೆ.



## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 158



### ರುದ್ರಶಿರನಾದ ಬ್ರಹ್ಮ

ಬ್ರಹ್ಮ ಮತ್ತೆ ಶಿವಕಥೆಯನ್ನು ಹೇಳತೊಡಗುತ್ತಾನೆ:

'ಭಕ್ತನುಗ್ರಹಶಾಲಿಯಾದ ಶಿವ, ಅಪರಾಧ ಮಾಡಿದ ನನ್ನನ್ನು ಕೊಲ್ಲದೆ ಬಿಟ್ಟ. ಅಲ್ಲಿ ನೆರೆದಿದ್ದ ದೇವತೆಗಳು ಮತ್ತು ಮುನಿಗಳು ಭಯರಹಿತರಾಗಿ ಸಂತೋಷದಿಂದ ಶಿವನನ್ನು ಸ್ತುತಿಸಿ, ಜಯಘೋಷ ಮಾಡಿದರು. ಆಗ ನಾನೂ ಭಯ ಬಿಟ್ಟು, ನಿರ್ಮಲಚಿತ್ತದಿಂದ ಭಕ್ತಿಪೂರ್ವಕವಾಗಿ ಶಂಕರನನ್ನು ಸ್ತೋತ್ರ ಮಾಡಿದೆ. ಲೀಲಾಮಯನಾದ ಶಿವನು ಸಂತಪ್ತನಾಗಿ ಎಲ್ಲರೂ ಕೇಳುವಂತೆ ನನ್ನನ್ನು ಕುರಿತು ಹೀಗೆ ಹೇಳಿದ. ಎಲೈ ಬ್ರಹ್ಮನೆ, ಈಗ ನಿನ್ನಲ್ಲಿ ನಾನು ಪ್ರಸನ್ನನಾಗಿರುವೆ. ಆದಕಾರಣ ನೀನು ಭಯವನ್ನು ತ್ಯಜಿಸಿ, ನಿನ್ನ ಶಿರಸ್ಸನ್ನೊಮ್ಮೆ ಕೈನಿಂದ ಮುಟ್ಟಿಕೋ' ಎಂದ.

ಶಂಕರನ ಮಾತನ್ನು ಕೇಳಿ ನಾನು ನನ್ನ ಶಿರಸ್ಸನ್ನು ಕೈಯಿಂದ ಮುಟ್ಟಿಕೊಂಡು ನಮಸ್ಕರಿಸಿದೆ. ಆಗ ನನ್ನ ಶಿರಸ್ಸು ರುದ್ರನ ಶಿರಸ್ಸಿನ ರೂಪ ಪಡೆಯಿತು. ಇದನ್ನು ಇಂದ್ರ ಮೊದಲಾದ ದೇವತೆಗಳು ಆಶ್ಚರ್ಯದಿಂದ ನೋಡಿದರು. ನಾನು ತುಂಬಾ ಲಜ್ಜೆಯಿಂದ ಮುಖವನ್ನು ಬಗ್ಗಿಸಿ, ಶಂಕರನಿಗೆ ನಮಸ್ಕರಿಸುತ್ತಾ, 'ಓ ಶಿವ, ನನ್ನನ್ನು ಕ್ಷಮಿಸು. ನನ್ನ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಹೇಳು. ತಕ್ಕ ಶಿಕ್ಷೆಯನ್ನೂ ವಿಧಿಸು. ಅದರಿಂದ ನನ್ನ ಪಾಪವು ಹೋಗಬೇಕು' ಎಂದು ಕೇಳಿದೆ.

ಭಕ್ತವತ್ಸಲನೂ ಸರ್ವೇಶ್ವರನೂ ಆದ ಶಿವ ಪ್ರಸನ್ನನಾಗಿ ಹೇಳಿದ: 'ಎಲೈ ಬ್ರಹ್ಮನೇ, ಈ ರುದ್ರಶಿರಸ್ಸನ್ನು ಧರಿಸಿ ನೀನು ಪ್ರಸನ್ನತೆಯಿಂದ ನನ್ನನ್ನು ಆರಾಧಿಸುತ್ತಾ ತಪಸ್ಸನ್ನು ಮಾಡು. 'ರುದ್ರಶಿರಾ' ಎಂಬ ಹೆಸರಿನಿಂದ ನೀನು ಭೂಲೋಕದಲ್ಲಿ ಪ್ರಸಿದ್ಧಿಯನ್ನು ಹೊಂದುವೆ. ನೀನು ಜನರಿಗೆ ಎಲ್ಲಾ ಕಾರ್ಯಗಳನ್ನೂ ಸಾಧಿಸಿಕೊಡುವವನಾಗುವೆ. ಪರಸ್ತ್ರೀಯಲ್ಲಿ ಮೋಹಿತನಾಗಿ ವೀರ್ಯವನ್ನು ಸ್ರವಿಸುವುದು ಮನುಷ್ಯರ ಸ್ವಭಾವ. ಅದನ್ನು ಈಗ ನೀನು ಮಾಡಿರುವೆ. ಆದುದರಿಂದ ನೀನು ಮನುಷ್ಯನಾಗಿ ಜನಿಸಿ ಭೂಮಿಯಲ್ಲಿ ಸಂಚರಿಸುವೆ.

'ಭೂಮಿಯಲ್ಲಿ ಈ ರುದ್ರಶಿರಸ್ಸನ್ನು ಧರಿಸಿ ತಿರುಗುತ್ತಿರುವ ನಿನ್ನನ್ನು ನೋಡಿದ ಜನರು, 'ಇದೇನು? ಬ್ರಹ್ಮನ ಶಿರಸ್ಸಿನಲ್ಲಿ ರುದ್ರನೇಕೆ ಇರುವನು' ಎಂದು ವಿಮರ್ಶಿಸುತ್ತಾರೆ. ನೀನು ಮಾಡಿರುವ ಕೃತ್ಯವನ್ನು ತಿಳಿಯಲು ಕುತೂಹಲಿತರಾಗುತ್ತಾರೆ. ಯಾರು ನಿನ್ನ ಕಥೆಯನ್ನ ಕೇಳುವರೋ, ಅವರು ಪರಸ್ತ್ರೀಸಂಗದಿಂದ ಮಾಡಿದ ಪಾಪದಿಂದ ಮುಕ್ತಿಯನ್ನು ಹೊಂದುವರು. ಇದನ್ನು ಎಷ್ಟೆಷ್ಟು ಬಾರಿ ಜನ ಕೇಳಿ ಕೀರ್ತನೆ ಮಾಡುವರೋ, ನಿನ್ನ ಪಾಪವು ಅಷ್ಟಷ್ಟು ನಾಶವಾಗುವುದು.

'ಎಲೈ ಬ್ರಹ್ಮನೇ ಇದೇ ನಿನಗೆ ಪ್ರಾಯಶ್ಚಿತ್ತವು. ಇದರಿಂದ ಜನರು ನಿನ್ನನ್ನು ಹಾಸ್ಯ ಮಾಡಿ ನಿಂದಿಸುವುದರಿಂದ ನಿನ್ನ ಪಾಪವು ನಾಶವಾಗುವುದು. ಕಾಮುಕನಾದ ನಿನ್ನಿಂದ ಸ್ರವಿಸಿದ ರೇತಸ್ಸು ಅಗ್ನಿ ವೇದಿಮಧ್ಯದಲ್ಲಿ ಬಿದ್ದಿರುವುದನ್ನು ನಾನು ನೋಡಿರುವೆ. ಆದಕಾರಣ ಇದನ್ನು ತೆಗೆಯಲು ಅಸಾಧ್ಯ. ಭೂಮಿಯಲ್ಲಿ ಬಿದ್ದಿರುವ ನಿನ್ನ ನಾಲ್ಕು ಬಿಂದುವಿನಷ್ಟು ರೇತಸ್ಸುಗಳು 'ಬಿಂದುಮಿತ'ಗಳೆಂಬ ಮೇಘಗಳಾಗುವುವು. ಅವು ಜಗತ್ತಿನಲ್ಲಿ ಪ್ರಳಯ ಉಂಟು ಮಾಡುವಂಥವು' ಎಂದು ರುದ್ರ ಹೇಳಿದ.


ಅದೇ ಸಮಯಕ್ಕೆ ಅಗ್ನಿವೇದಿಯ ಮಧ್ಯದಲ್ಲಿ ಬಿದ್ದಿದ್ದ ನನ್ನ ಬ್ರಹ್ಮರೇತಸ್ಸಿನಿಂದ ನಾಲ್ಕು ಮೇಘರಾಶಿಗಳು ಜನಿಸಿದವು. ಶಿವೇಚ್ಛೆಯಿಂದ ಜನಿಸಿದ ಆ ಮೇಘಗಳು ಘೋರವಾಗಿ ಗರ್ಜಿಸುತ್ತಾ ನೀರನ್ನು ಸುರಿಸುತ್ತಾ ಆಕಾಶದಲ್ಲಿ ಸಂಚರಿಸಿದವು.

'ಎಲೈ ನಾರದ, ಆ ನಾಲ್ಕು ವಿಧದ ಭಯಂಕರ ಪ್ರಳಯಮೇಘಗಳಿಗೆ ಸಂವರ್ತ, ಆವರ್ತ, ಪುಷ್ಕರ ಮತ್ತು ದ್ರೋಣಗಳೆಂಬ ಹೆಸರು ಇವೆ. ಆ ಮೇಘಗಳು ಘರ್ಜನೆಮಾಡುತ್ತಾ ಆಕಾಶವನ್ನು ವ್ಯಾಪಿಸಿದವು. ಇತ್ತ ಶಂಕರ ಔತ್ಸುಕ್ಯದಿಂದ ಸತೀದೇವಿಯನ್ನು ನೋಡುತ್ತಾ ಸಂಪೂರ್ಣವಾಗಿ ಶಾಂತನಾದ. ಬಳಿಕ ನಾನು ಯಾವ ಹೆದರಿಕೆಯೂ ಇಲ್ಲದೇ ಮಿಕ್ಕ ವಿವಾಹಕರ್ಮವನ್ನು ಮಾಡಿ ಮುಗಿಸಿದೆ. ಆಗ ದೇವತೆಗಳು ಸಂತೋಷದಿಂದ ಶಿವ ಮತ್ತು ಸತೀದೇವಿಯರ ಶಿರಸ್ಸಿನ ಮೇಲೆ ಹೂಮಳೆಯನ್ನು ಸುರಿಸಿದರು. ಅನೇಕ ಮಂಗಳವಾದ್ಯಗಳನ್ನು ಮೊಳಗಿಸಿ, ಗೀತೆಗಳನ್ನು ಹಾಡಿದರು. ದೇವತಾಸುಂದರಿಯರು ನರ್ತನಮಾಡಿದರು. ಮಹಾವಿಜೃಂಭಣೆಯಿಂದ ಶಿವ-ಸತೀದೇವಿಯ ವಿವಾಹ ಉತ್ಸವವು ನಡೆಯಿತು' ಎನ್ನುತ್ತಾನೆ ಬ್ರಹ್ಮ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರ ಮುತ್ತಾತ ಚಿಮನ್‌ಲಾಲ್ ಹರಿಲಾಲ್ ಸೆಟಲ್‌ವಾಡ್ ಅವರು ಬ್ರಿಟಿಷ್ ಅಧಿಕಾರಿ ಜನರಲ್ ಡಯರ್‌ರನ್ನು ದೋಷಮುಕ್ತಗೊಳಿಸಿದ್ದರು ಎಂದು ಸಾಮಾಜಿಕ ಜಾಲತಾಣ ಬಳಕೆದಾರ ಕಾಂಚನ್‌ಗುಪ್ತಾ @KanchanGupta ಎಂಬುವರು ಟ್ವೀಟ್ ಮಾಡಿದ್ದಾರೆ. 1919ರ ಏಪ್ರಿಲ್ 13ರಂದು ಜಲಿಯನ್‌ವಾಲಾಭಾಗ್ ಹತ್ಯಾಕಾಂಡಕ್ಕೆ ಡಯರ್ ಆದೇಶ ನೀಡಿದ್ದರು. ಈ ಘಟನೆಯ ತನಿಖೆ ನಡೆಸಿದ್ದ ಹಂಟರ್ ಆಯೋಗದ ಸದಸ್ಯರಾಗಿದ್ದ ಸೆಟಲ್‌ವಾಡ್ ಅವರು ಸಹಿ ಮಾಡಿದ್ದ ವರದಿಯಲ್ಲಿ ಡಯರ್ ತಪ್ಪಿತಸ್ಥ ಅಲ್ಲ ಎಂದು ಬರೆಯಲಾಗಿದೆ ಎಂದು ಟ್ವೀಟ್‌ನಲ್ಲಿ ಉಲ್ಲೇಖಿಸಲಾಗಿದೆ.




ತೀಸ್ತಾ ಅವರ ಮುತ್ತಾತ ಹಂಟರ್ ಆಯೋಗದ ಸದಸ್ಯರಾಗಿದ್ದುದು ಹಾಗೂ ವರದಿಗೆ ಸಹಿ ಮಾಡಿದ್ದುದು ನಿಜ. ಆದರೆ ವರದಿಯು ಡಯರ್‌ರನ್ನು ದೋಷಮುಕ್ತಗೊಳಿಸಿದೆ ಎಂಬುದು ಸತ್ಯಕ್ಕೆ ದೂರವಾದುದು ಎಂದು 'ದಿ ಕ್ವಿಂಟ್ ವರದಿ' ಮಾಡಿದೆ. ಮೆಜಾರಿಟಿ ಹಾಗೂ ಮೈನಾರಿಟಿ ಎಂಬ ಎರಡು ವರದಿಗಳು ಸಲ್ಲಿಕೆಯಾಗಿದ್ದವು. ಡಯರ್ ತಮ್ಮ ಕರ್ತವ್ಯ ನಿರ್ವಹಿಸಿದ್ದರೂ, ಅವರು ಮಾಡಿದ್ದು ತಪ್ಪು ಎಂದು ಬ್ರಿಟಿಷ್ ಸದಸ್ಯರು ಸಹಿ ಮಾಡಿದ್ದ ಮೆಜಾರಿಟಿ ವರದಿ ಉಲ್ಲೇಖಿಸಿದೆ. ಡಯರ್ ಮಾಡಿದ್ದು ತಪ್ಪು ಎಂದು ಮೈನಾರಿಟಿ ವರದಿ ನೇರವಾಗಿ ಉಲ್ಲೇಖಿಸಿದೆ. ಎರಡೂ ವರದಿಯಲ್ಲಿ ಡಯರ್ ತಪ್ಪಿತಸ್ಥ ಎಂದೇ ಹೇಳಲಾಗಿದೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ



### ಅಹಂಕಾರಕ್ಕೆ ಪೆಟ್ಟು

**ಎಂದೊ ನಿನಗೊಂದು ದಿನ ಮೂಗು ಮುರಿಯುವುದು ದಿಟ|**
**ವೃಂದಾರಕರು ಮತ್ಸರಿಸರೆ ಗರ್ವಿತರ ?||**
**ಸಂದರ್ಭಗಳನದಕೆ ಜೋಡಿಪನು ವಿಧಿರಾಯ|**
**ಅಂದಿಕೊಳ್ಳನೆ ನಿನ್ನ ? – ಮಂಕುತಿಮ್ಮ ||659||**

**ಪದ-ಅರ್ಥ:** ಮೂಗು ಮುರಿಯುವುದು = ಗರ್ವಭಂಗ ಮಾಡುವುದು, ವೃಂದಾರಕರು = ದೇವತೆಗಳು, ಮತ್ಸರಿಸರೆ = ಮತ್ಸರ ಪಡುವುದಿಲ್ಲವೆ, ಗರ್ವಿತರ = ಸೊಕ್ಕಿದವರ, ಸಂದರ್ಭಗಳನದಕೆ = ಸಂದರ್ಭಗಳನು + ಅದಕೆ, ಜೋಡಿಪನು = ಸೇರಿಸುವನು, ಅಂದಿಕೊಳ್ಳನೆ = ಹಿಡಿದುಕೊಳ್ಳನೆ.

**ವಾಚ್ಯಾರ್ಥ:** ಗರ್ವಿತನಾದ ನಿನಗೆ ಎಂದೋ ಒಂದು ದಿನ ಗರ್ವಭಂಗವಾಗುತ್ತದೆ. ಸೊಕ್ಕಿದವರನ್ನು ಕಂಡರೆ ದೇವತೆಗಳಿಗೂ ಮತ್ಸರ. ವಿಧಿ ಅದಕ್ಕೆ ಸರಿಯಾಗಿ ಸಂದರ್ಭಗಳನ್ನು ಹೊಂದಿಸಿ, ನಿನ್ನನ್ನು ಹಿಡಿದುಕೊಳ್ಳುತ್ತಾನೆ.

**ವಿವರಣೆ:** ಅಹಂಕಾರ, ಗರ್ವವೆನ್ನುವುದು ಬಹುದೊಡ್ಡ ಮರಳು ಬೆಟ್ಟವನ್ನೇರಿದ ಪರಿ. ಮೊದಲು ಕೆಲವು ಹೆಜ್ಜೆಗಳು ಸಂಭ್ರಮ ತಂದಾವು, ಅಮಲು ಏರಿಸಿಯಾವು. ಆದರೆ ಅದು ಮರಳು ದಿನ್ನೆಯಾದ್ದರಿಂದ ಕುಸಿದು ಜಾರುವುದು ಖಂಡಿತ. ಗರ್ವ ಬಂದರೆ ಭಂಗವಾಗುವ ಕಾರ್ಯ ದೂರವಿಲ್ಲವೆಂದೇ ತಿಳಿಯಬೇಕು. ನನಗಿಂತ ಪ್ರಬಲರು ಯಾರಿದ್ದಾರೆ ಎಂದು ಮೆರೆದ ಹಿಟ್ಲರ್, ಇದಿ-ಅಮೀನ್, ಸದ್ದಾಂ ಹುಸೇನ್ ಅವರ ಗತಿ ಏನಾಯಿತೆಂದು ಪ್ರಪಂಚಕ್ಕೇ ತಿಳಿದಿದೆ.

ವಿಷ್ಣುವಿನ ಅಂತರಂಗ ಭಕ್ತರು, ಸದಾ ಅವನ ಬಾಗಿಲಲ್ಲೇ ಇರುವ ಜಯ-ವಿಜಯರಿಗೆ ಕೂಡ ಗರ್ವ ಬಂದಿತಂತೆ. ಅವರ ಗರ್ವಭಂಗವೂ ನಡೆಯಿತು. ಆನೆಯಾಗಿ, ಮೊಸಳೆಯಾಗಿ ಸಹಸ್ರಾರು ವರ್ಷ ಒದ್ದಾಡಬೇಕಾಯಿತು. ರಾಕ್ಷಸರ ವಿರುದ್ಧ ಹೋರಾಡಲು ದೇವತೆಗಳಿಗೇ ಸಹಾಯ ಮಾಡಿದ ನಹುಷ ಚಕ್ರವರ್ತಿ, ತಾನೇ ಇಂದ್ರನಾಗುವ ಅವಕಾಶ ಬಂದಾಗ, ಗರ್ವವನ್ನು ನೆತ್ತಿಗೇರಿಸಿಕೊಂಡ. ಪ್ರತಿಫಲವಾಗಿ, ಹೆಬ್ಬಾವಾಗಿ ಶತಶತಮಾನಗಳ ಕಾಲ ಕಾಡಿನಲ್ಲಿ ಬಿದ್ದ.

ನಮ್ಮ ದೇಶದಲ್ಲೂ ಅಂತಹ ಅಹಂಕಾರಿಗಳು ಆಗಿ ಹೋಗಿದ್ದಾರೆ, ಇಂದಿಗೂ ಇದ್ದಾರೆ. ಅವರ ಮಾತಿನ ಠೇಂಕಾರವೇನು? ನಡಿಗೆಯ ಗತ್ತೇನು? ಮತ್ತೊಬ್ಬರನ್ನು ಕೀಳು ಮಾಡಿ ತೋರುವ ಬಗೆಯೇನು? ಇಂಥ ಅನೇಕರು ಹಿಂದೆ ಮೂಲೆಗುಂಪಾಗಿ ಹೋಗಿದ್ದಾರೆ. ಆದರೂ ಉಳಿದವರು ಪಾಠ ಕಲಿಯುವುದಿಲ್ಲವಲ್ಲ ಎಂದು ಕಗ್ಗ ಎಚ್ಚರಿಕೆ ನೀಡುತ್ತದೆ. ಎಂದೋ ಒಂದು ದಿನ ನಿನ್ನ ಮೂಗುಮುರಿಯುತ್ತದೆ ಎನ್ನುತ್ತದೆ. ಆ ದಿನ ಬೇಗನೇ ಬರಬಹುದು, ತುಸು ತಡವಾಗಬಹುದು ಆದರೆ ತಪ್ಪುವುದಿಲ್ಲ. ಹೀಗೆ ಗರ್ವಿತರ ಬಗ್ಗೆ ದೇವತೆಗಳಿಗೂ ಅಸೂಯೆಯಾಗುತ್ತದೆ ಎನ್ನುತ್ತದೆ.

ಆಗ ವಿಧಿ ಗರ್ವಭಂಗವಾಗುವುದಕ್ಕೆ ಅನುಕೂಲವಾಗುವಂತೆ ಸಂದರ್ಭಗಳನ್ನು ಜೋಡಿಸುತ್ತಾನಂತೆ. ಅದು ಚುನಾವಣೆಯಲ್ಲಿ ಹೀನಾಯ ಸೋಲಾಗಬಹುದು, ಆಟದಲ್ಲಿ ವಿಫಲತೆಯಾಗಬಹುದು, ಪ್ರೇಮದಲ್ಲಿ ಮೋಸವಾಗಬಹುದು, ಆತ್ಮೀಯರ, ಮನೆಯಲ್ಲಿ ಬಂಧುಗಳ ಸಾವಾಗಬಹುದು. ಅವೆಲ್ಲ ಕೇವಲ ನೆಪಗಳು, ಗರ್ವವನ್ನು ಮುರಿಯುವುದಕ್ಕೆ. ವಿಧಿರಾಯನಿಗೂ ಗರ್ವಿತರನ್ನು ಕಂಡರೆ ಬಲುಪ್ರೇಮ. ಅದಕ್ಕೇ ಅಂಥವರು ಕಂಡಕೂಡಲೇ ಅವರನ್ನು ಅಪ್ಪಿಕೊಳ್ಳುತ್ತಾನಂತೆ. ಅಪ್ಪಿಕೊಂಡಂತೆ ಮಾಡಿ ಮೂಗು ಮುರಿಯುತ್ತಾನೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜೂನ್ 28, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಜ್ಯೇಷ್ಠ ಕೃಷ್ಣ ಚತುರ್ದಶಿ ಗಂ. 05-53 **ನಕ್ಷತ್ರ:** ಮೃಗಶಿರ ಗಂ. 19-05 **ಯೋಗ:** ಗಂಡ ಗಂ. 07-47, **ಕರಣ:** ಶಕುನಿ ಗಂ. 05-53, ಮಿಥುನ ಮಾಸದ 13 ನೇ ದಿನ.

**ರಾಹುಕಾಲ:** ಮಧ್ಯಾಹ್ನ 03:00 – 04:30

**ಸೂರ್ಯೋದಯ:** 06-10 **ಸೂರ್ಯಾಸ್ತ:** 06-57

**ಮುಸ್ಲಿಂ ದಿನಾಂಕ:** 28 ಜುಲ್ಕಾಯದ್

**ಅದೃಷ್ಟ ಸಂಖ್ಯೆ:** 7, 9

**ಮೇಷ:** ಗುರಿ ಸಾಧಿಸಬೇಕು ಅಥವಾ ಗೆಲುವು ಬೇಕೆಂಬ ಛಲವನ್ನು ಇಟ್ಟುಕೊಳ್ಳುವುದು ಉತ್ತಮವೇ ಹೊರತು, ಇನ್ನೊಬ್ಬರ ಹೋಲಿಕೆಯನ್ನು ಮನಸ್ಸಿಗೆ ಹಚ್ಚಿಕೊಳ್ಳುವುದು ಸರಿಯಲ್ಲ. ಜೀರ್ಣದಿಂದ ಕಿರಿಕಿರಿ ಎನಿಸಲಿದೆ.

**ವೃಷಭ:** ಸಹೋದರನ ಏಳಿಗೆಯನ್ನು ಹರಸುವ ಮನೋಭಿಲಾಷೆಯನ್ನು ಬೆಳೆಸಿಕೊಳ್ಳಿರಿ. ಅದರಿಂದಾಗಿ ನಿಮ್ಮ ಮತ್ತು ನಿಮ್ಮ ಕುಟುಂಬದ ಗೌರವ ವೃದ್ಧಿಯಾಗುವುದು. ಸಿನೆಮಾ ತಾರೆಗಳಿಗೆ ಹೆಚ್ಚಿನ ಪ್ರಸಿದ್ಧಿ ಸಿಗುವುದು.

**ಮಿಥುನ:** ಸ್ವರ್ಣ, ಲೋಹ ಹಾಗೂ ಗೃಹೋಪಕರಣಗಳ ವ್ಯವಹಾರಗಳಲ್ಲಿ ಉತ್ತಮ ಆದಾಯ. ರಾಜಕೀಯ ರಂಗದಲ್ಲಿ ದಾಳ ಉರುಳಿದ್ದೇ ಗೊತ್ತಾಗದಂತೆ ನಿಮ್ಮ ವಿರುದ್ಧವಾಗಿ ಸಂಚು ನಡೆಯಲಿದೆ.

**ಕರ್ಕಾಟಕ:** ತಂದೆಯವರ ಮಾತಿನಿಂದ ಅತೃಪ್ತಿಯ ವಾತಾವರಣ ಮೂಡಿ ಬರಲಿದೆ. ಆದರೆ ಪಿತೃ ವಾಕ್ಯ ಪರಿಪಾಲನೆಯೂ ತಪಸ್ಸಿದ್ದಂತೆ ಎನ್ನುವುದು ಗಮನದಲ್ಲಿರಲಿ.

**ಸಿಂಹ:** ಇಂದು ಕಾರ್ಯಸಾಧನೆಗೆ ತೋರಿ ಬರುವ ಅಡ್ಡಿ ಆತಂಕಗಳ ನಿವಾರಣೆಯಾಗಲಿದೆ. ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಹೆಚ್ಚಿನ ಅವಕಾಶ. ಕಾರ್ಯಕ್ಷೇತ್ರದಲ್ಲಿ ಎರಡೆರಡು ಬಾರಿ ಪರಿಶೀಲನೆ ಮಾಡುವುದು ಅಗತ್ಯ.

**ಕನ್ಯಾ:** ವೃತ್ತಿರಂಗದಲ್ಲಿ ಸಂದರ್ಭೋಚಿತವಾಗಿ ವರ್ತಿಸುವುದರಿಂದ ಈ ದಿನ ಲಾಭವಾಗಬಹುದು. ಆದರೆ, ಈ ದಿನದ ನಿಮ್ಮ ವರ್ತನೆ ನಾಳೆಯ ದಿನ ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ತಿಂಡಿ ತಿನಿಸುಗಳ ವ್ಯಾಪಾರದವರಿಗೆ ಲಾಭ.

**ತುಲಾ:** ಲೆಕ್ಕಾಚಾರಕ್ಕೆ ಸಂಬಂಧಿಸಿದ ಕಾಗದ-ಪತ್ರಗಳ ನಿರ್ವಹಣೆಯಲ್ಲಿ ಎಚ್ಚರಿಕೆ ಇರಲಿ. ಆರ್ಥಿಕ ಪರಿಸ್ಥಿತಿಯು ದಿನದಿಂದ ದಿನಕ್ಕೆ ಸುಧಾರಣೆಯಾಗುತ್ತದೆ. ಮನೆಯಲ್ಲಿ ಅಗ್ನಿಯಿಂದ ಅವಗಡಗಳು ಸಂಭವಿಸಬಹುದು ಎಚ್ಚರ ವಹಿಸಿ.

**ವೃಶ್ಚಿಕ:** ನಿಮ್ಮ ಸಾಮರ್ಥ್ಯಕ್ಕೆ ಮತ್ತು ನಿಮ್ಮ ಕೆಲಸಕ್ಕೆ ಗ್ರಹಣ ಆವರಿಸಿದಂತೆ ಯೋಜನಾಬದ್ಧವಾಗಿ ಈ ದಿನ ಕೆಲಸವು ನಡೆಯದೇ ಇರುವ ಕಾರಣದಿಂದಾಗಿ ಆಂತರಿಕ ಭಯ ಉಂಟಾದಂತಾಗುವುದು.

**ಧನು:** ಕಾರ್ಯಕ್ಷೇತ್ರದಲ್ಲಿ ಸ್ವಯಂ ಪರೀಕ್ಷೆಯ ಆರಂಭವಾಗುವುದು. ಒಣಪ್ರತಿಷ್ಠೆಯಿಂದಾಗಿ ಕೆಲಸಗಳು ಏರುಪೇರಾಗಲಿದೆ. ವಿಚಾರಗಳನ್ನು ಅಪಾರ್ಥವಾಗಿ ಅರ್ಥೈಸಿಕೊಳ್ಳುವುದರಿಂದ ಘರ್ಷಣೆಗಳಾಗಬಹುದು.

**ಮಕರ:** ನಿಮ್ಮ ಗಡಿಬಿಡಿಯ ಸ್ವಭಾವದಿಂದಾಗಿ ಕಂಪನಿಯಲ್ಲಿ ಉಂಟಾದ ತಪ್ಪುಗಳಿಗೆ ನೇರ ಹೊಣೆಗಾರಿಕೆ ನಿಮ್ಮದ್ದಾಗಿರುತ್ತದೆ. ಹಲವು ದಿನಗಳಿಂದ ಇರುವ ಋಣಭಾದೆಗೆ ಅಂತ್ಯ ಕಾಣಿಸುವ ಕಾಲ ಒದಗಿಬರುವುದು.

**ಕುಂಭ:** ಬದುಕನ್ನು ಪಾರಮಾರ್ಥಿಕವಾಗಿ ನಡೆಸುವ ಬಗ್ಗೆ ನಿಮ್ಮ ಯೋಚನೆಗಳಿರಲಿ. ಯೋಗ್ಯ ವಯಸ್ಕರಿಗೆ ವಿವಾಹ ಭಾಗ್ಯ ಒದಗಿ ಬರಲಿದೆ. ಸಂಸಾರದಲ್ಲಿ ಬದಲಾವಣೆಗಳನ್ನು ಒಪ್ಪಿಕೊಳ್ಳಲೇ ಬೇಕಾದ ಅನಿವಾರ್ಯತೆ.

**ಮೀನ:** ಸರಕಾರಿ ಕೆಲಸದಲ್ಲಿ ಆಯಾಸವಿಲ್ಲದೆ ಶುಭವಾಗುವುದು. ಅಧಿಕ ರೀತಿಯ ಖರ್ಚು-ವೆಚ್ಚಗಳು ಬಂದರೂ ಉಳಿತಾಯಕ್ಕೆ ಕೊರತೆ ಕಾಣುವುದಿಲ್ಲ. ಪಾಲುದಾರಿಕೆಗೆ ಒಪ್ಪುವ ಮುನ್ನ ಅಭಿಪ್ರಾಯ ಪಡೆದುಕೊಳ್ಳಿರಿ.

## ಪದಬಂಧ 5002


– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಹೂವು ಹಣ್ಣು ಮುಂತಾದವುಗಳ ಗೊಂಚಲು (2)
3.ವಿರಮಿಸುತ್ತಿದ್ದಾಗ ದುಷ್ಟ ಹೆಂಗಸು ಕಾಣಿಸಿದಳಲ್ಲಾ! (3)
5.ಪರುಷವನ್ನು ಹಿಡಿರುವ ಗಂಡುವ್ಯಕ್ತಿ! (3)
7.ಅದೇ ತಾನೆ ಹುಟ್ಟಿದುದು (4)
9.ಅವನ ಸಲುವಾಗಿ ತಂದಿರುವ ಮೂಲಧನ! (3)
10.ಗುಡಿಯ ಕೊನೆಗೆ ಹಬ್ಬಿರುವ ಉದ್ದವಾದ ಕುಡಿ (3)
11.ಕನ್ನಡಿಗರ ನಾಡಿದು (4)
13.ಜಗದ ಸುದ್ದಿಯನ್ನು ತಿಳಿಸುವ ವೇದಿಕೆ (3)
15.ಜರೂರಾಗಿ ತಿಳಿದುಕೊಳ್ಳ ಬೇಕಾದ ರೀತಿ! (3)
16.ತಟಕ್ಕನೆ ಪರಾರಿಯಾಗಿರುವ ಕಳ್ಳ! (2)

**ಮೇಲಿಂದ ಕೆಳಕ್ಕೆ**

2.ಪುನಃ ಪುನಃ ಬಂದಿರುವ ಸ್ಮರಣೆ (3)
3.ಹರ್ಷವು ವಿರಳವಾಗಿ ಬಂದಿದೆ (3)
4.ಜ್ಯೋತಿಶ್ಶಾಸ್ತ್ರದ ರಾಶಿಯಲ್ಲಿರುವ ಜೋಡಿ! (3)
6.ತಲೆಗೆ ಕಟ್ಟಿಕೊಳ್ಳುವ ಬಟ್ಟೆ (3)
8.ತೂಕ ಮಾಡಲು ತಕ್ಕ ಸಾಧನ (3)
9.ಆ ಕಳ್ಳನ ಬಳಿ ಸಡಿಲವಾದುದು ಕಾಣುತ್ತಿದೆ! (3)
10.ಗಡಿಯ ಹತ್ತಿರ ದಪ್ಪಮನುಷ್ಯ ಕಾಣುತ್ತಿದ್ದಾನೆಯೇ? (3)
12.ಕರಿಯಲ್ಲಿರುವ ಸುವಾಸಿತ ದ್ರವ್ಯ (3)
13.ಹರಾಜಿಗಿರುವ ಹಡಗು! (3)
14.ಕಾಟವನ್ನು ತಡೆಯಲಾಗದ್ದಕ್ಕೇ ಇಷ್ಟು ಘರ್ಷಣೆ! (3)



### 5001ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಅನುಸ್ವಾರ 3.ವಿಕೋಪ
4.ಕಂಠೀರವ 6.ರಂಧ್ರ
7.ಸಮಾಧಾನ 8.ಜಠರ
9.ಪ್ರತಿಫಲ 12.ಭಾವ
13.ಶಯ್ಯಾಗೃಹ 15.ಸಾತ್ವಿಕ
16.ಗೆಳೆತನ

**ಮೇಲಿಂದ ಕೆಳಕ್ಕೆ:**
1.ಅಪರಂಜಿ 2.ರಕಂ
3.ವಿಳಂಬಿ 5.ವಚನ
7.ಸರ 8.ಜಲ
9.ಪ್ರವೇಶ 10.ಅವಸಾನ
11.ಪಾತಕ 14.ಹಗೆ

## ಸುಡೊಕು 5388

| | | | | | | | | |
|---|---|---|---|---|---|---|---|---|
| | | | | 8 | | | 6 | |
| | 7 | | 1 | | 6 | | 2 | 3 |
| 3 | | 5 | | 2 | | 9 | | |
| | 8 | 7 | | | | | 1 | |
| | | 4 | 7 | 6 | 3 | 8 | | |
| 5 | 9 | | | | | | 7 | 4 |
| | | 2 | 6 | 7 | | 1 | | 5 |
| 1 | 4 | | 2 | | | | 9 | |
| | 5 | | | 4 | | 2 | | 8 |


**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5387 ಸುಡೊಕು

| | | | | | | | | |
|---|---|---|---|---|---|---|---|---|
| 2 | 7 | 9 | 4 | 5 | 3 | 6 | 8 | 1 |
| 6 | 4 | 3 | 1 | 8 | 7 | 2 | 5 | 9 |
| 8 | 1 | 5 | 2 | 6 | 9 | 7 | 3 | 4 |
| 3 | 8 | 4 | 7 | 2 | 6 | 1 | 9 | 5 |
| 7 | 9 | 2 | 8 | 1 | 5 | 4 | 6 | 3 |
| 5 | 6 | 1 | 9 | 3 | 4 | 8 | 2 | 7 |
| 9 | 2 | 7 | 5 | 4 | 8 | 3 | 1 | 6 |
| 1 | 5 | 6 | 3 | 7 | 2 | 9 | 4 | 8 |
| 4 | 3 | 8 | 6 | 9 | 1 | 5 | 7 | 2 |

**ಷೇರುಪೇಟೆ ವಹಿವಾಟು** 434




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 15,699 |
| ಇಂದಿನ ಅಂತ್ಯ | 15,832 |
| ▲ | 133 |
| ದಿನದ ಗರಿಷ್ಠ | 15,927 |

**ವಿನಿಮಯ ದರ**

| | |
|---|---|
| $ ಡಾಲರ್ | 78.37 |
| £ ಪೌಂಡ್ | 96.33 |
| € ಯುರೊ | 82.90 |
| ¥ ಯೆನ್ (100ಕ್ಕೆ) | 58 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹560 |
| 12 ಮೊಟ್ಟೆಗೆ | ₹72 |
| ಮೈಸೂರು | |
| 100 ಮೊಟ್ಟೆಗೆ | ₹560 |

**ಖಾದ್ಯ ತೈಲ ಮುಂಬೈ**



(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1570 (1540) |
| ಸೋಯಾ (ರಿಫೈನ್ಡ್) | ₹1345 (1340) |
| ಸೂರ್ಯಕಾಂತಿ (ರಿಫೈನ್ಡ್) | ₹1650 (1650) |
| ಪಾಮೋಲಿನ್ | ₹1270 (1255) |

**ರಾಮನಗರ ರೇಷ್ಮೆಗೂಡು ಧಾರಣೆ**



| | |
|---|---|
| ಮಿಶ್ರತಳಿ (ಸಿ.ಬಿ) | ₹338-595 |
| ದ್ವಿತಳಿ (ಬಿ.ವಿ) | ₹400-781 |

**ಎನ್.ಆರ್.ಪುರ ರಬ್ಬರ್**



(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹174 |
| ಆರ್‌ಎಸ್‌ಎಸ್-5 | ₹165 |
| ಗುಡ್ ಲಾಟ್ | ₹157 |

**ತೆಂಗು ಧಾರಣೆ (ಸಾವಿರಕ್ಕೆ)**



| | |
|---|---|
| ಮಂಗಳೂರು | |
| 1ನೇ ದರ್ಜೆ | ₹16000-20000 |
| 2ನೇ ದರ್ಜೆ | ₹12000-15000 |

# ಎಂಎಸ್‌ಎಂಇಗೆ ಸುಲಭ ಸಾಲ: ಕೇಂದ್ರದ ಪ್ರಯತ್ನ

**ನವದೆಹಲಿ (ಪಿಟಿಐ):** ಕಿರು, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಸುಲಭವಾಗಿ ಸಾಲ ಸೌಲಭ್ಯ ಸಿಗುವಂತೆ ಮಾಡುವ ದಿಸೆಯಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಎಂಎಸ್‌ಎಂಇ ಕಾರ್ಯದರ್ಶಿ ಬಿ.ಬಿ. ಸ್ವೈನ್ ತಿಳಿಸಿದ್ದಾರೆ.

ವಿಶ್ವ ಎಂಎಸ್‌ಎಂಇ ದಿನದ ಅಂಗವಾಗಿ ಭಾರತೀಯ ಕೈಗಾರಿಕಾ ಒಕ್ಕೂಟವು (ಸಿಐಐ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,'ಕೈಗೆಟಕುವ ದರಕ್ಕೆ ಸಾಲ ಪಡೆಯುವುದು ಎಂಎಸ್‌ಎಂಇಗಳಿಗೆ ಸವಾಲಾಗಿದೆ' ಎಂದು ಹೇಳಿದ್ದಾರೆ.

**ಮಾರುಕಟ್ಟೆ ಪಾಲು ನಷ್ಟ:** ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಪ್ರತಿ ನಾಲ್ಕರಲ್ಲಿ ಒಂದು ಎಂಎಸ್‌ಎಂಇ ಕಂಪನಿಯು ದೊಡ್ಡ ಕಂಪನಿಗಳಿಗೆ ತಾನು ಹೊಂದಿದ್ದ ಮಾರುಕಟ್ಟೆ ಪಾಲಿನಲ್ಲಿ ಶೇಕಡ 3ರಷ್ಟು ಅಥವಾ ಅದಕ್ಕೂ ಹೆಚ್ಚನ್ನು ಬಿಟ್ಟುಕೊಟ್ಟಿದೆ ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಹೇಳಿದೆ.

69 ವಲಯಗಳು ಮತ್ತು 147 ಕ್ಲಸ್ಟರ್‌ಗಳ ಮಾಹಿತಿ ಸಂಗ್ರಹಿಸಿ ಸಂಸ್ಥೆಯು ಈ ವರದಿ ನೀಡಿದೆ.

**ಎಫ್‌ಕೆಸಿಸಿಐ ಒತ್ತಾಯ (ಬೆಂಗಳೂರು ವರದಿ):** ಎಂಎಸ್‌ಎಂಇಗಳಿಗೆ ರಿಯಾಯಿತಿ ದರದಲ್ಲಿ ಹಣಕಾಸು ಸೌಲಭ್ಯ ಕಲ್ಪಿಸುವಂತೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್ ಅವರು ಬೆಂಗಳೂರಿನಲ್ಲಿ ನಡೆದ ಎಂಎಸ್‌ಎಂಇ ದಿನಾಚರಣೆಯಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಇದೇ ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯ ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ, 'ಸಣ್ಣ ಉದ್ದಿಮೆಗಳು ದೊಡ್ಡ ಕಂಪನಿಗಳಾಗಿ ಬೆಳೆಯುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು' ಎಂದು ಸಲಹೆ ನೀಡಿದರು.

2029–30: ನೀತಿ ಆಯೋಗದ ವರದಿಯಲ್ಲಿ ಅಂದಾಜು

# 2.35 ಕೋಟಿಗೆ ಏರಲಿದೆ ಗಿಗ್ ಕೆಲಸ

**ನವದೆಹಲಿ (ಪಿಟಿಐ):** ದೇಶದಲ್ಲಿ ಅಲ್ಪ ಅವಧಿಯ ಗುತ್ತಿಗೆ, ಫ್ರೀಲಾನ್ಸ್ ಆಧಾರದಲ್ಲಿ (ಗಿಗ್) ಕೆಲಸ ಮಾಡುವವರ ಸಂಖ್ಯೆಯು 2029–30ರ ಸುಮಾರಿಗೆ 2.35 ಕೋಟಿಗೆ ಏರಿಕೆ ಆಗಲಿದೆ ಎಂದು ನೀತಿ ಆಯೋಗದ ವರದಿಯೊಂದು ಹೇಳಿದೆ. 2020–21ರಲ್ಲಿ ಇಂತಹ ಕೆಲಸ ಮಾಡುತ್ತಿದ್ದವರ ಸಂಖ್ಯೆ 77 ಲಕ್ಷ ಆಗಿತ್ತು.

ಸಾಮಾಜಿಕ ಭದ್ರತಾ ಸಂಹಿತೆಯಲ್ಲಿ ಹೇಳಿರುವ ರೀತಿಯಲ್ಲಿ ಇಂತಹ ಕೆಲಸಗಾರರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿಸ್ತರಿಸಬೇಕು ಎಂದು ವರದಿ ಶಿಫಾರಸು ಮಾಡಿದೆ.

2029–30ರೊಳಗೆ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ಕೆಲಸಗಾರರ ಪೈಕಿ ಇಂಥವರ ಪ್ರಮಾಣವು ಶೇ 6.7ಕ್ಕೆ ತಲುಪಲಿದೆ ಎಂದೂ ವರದಿಯು ಹೇಳಿದೆ.

ಆನ್‌ಲೈನ್ ಆ್ಯಪ್ ಆಧಾರಿತ ವೇದಿಕೆಗಳ ಸಾಮರ್ಥ್ಯವನ್ನು ಬಳಸಿಕೊಳ್ಳಲು, ಪ್ರಾದೇಶಿಕ ಹಾಗೂ ಗ್ರಾಮೀಣ ತಿನಿಸುಗಳನ್ನು ಮಾರಾಟ ಮಾಡುವ ವಹಿವಾಟಿನಲ್ಲಿ ತೊಡಗಿಸಿಕೊಂಡವರನ್ನು ಆ್ಯಪ್‌ಗಳ ಜೊತೆ ಬೆಸೆಯಬೇಕು, ಅವರು ನಗರ ಹಾಗೂ ಪಟ್ಟಣಗಳ ಮಾರುಕಟ್ಟೆಗೂ ತಮ್ಮ ತಿನಿಸುಗಳನ್ನು ತಲುಪಿಸುವುದು ಸಾಧ್ಯವಾಗುವಂತೆ ಮಾಡಬೇಕು ಎಂದು ವರದಿಯು ಶಿಫಾರಸು ಮಾಡಿದೆ.

ಡಿಜಿಟಲ್ ಆ್ಯಪ್ ಆಧಾರಿತ ಗಿಗ್ ಉದ್ಯೋಗಗಳನ್ನು ಮಹಿಳೆಯರು ಶಿಕ್ಷಣ ಪಡೆದ ನಂತರ ಅಥವಾ ಮದುವೆಯ ನಂತರ ಹೆಚ್ಚಿನ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ ಎಂದು ವರದಿ ಅಂದಾಜು ಮಾಡಿದೆ. ಮಹಿಳೆಯರ ಮುಂದಾಳತ್ವದಲ್ಲಿ ನಡೆಯುವ ಡಿಜಿಟಲ್ ಆ್ಯಪ್ ಆಧಾರಿತ ಉದ್ಯಮಗಳಿಗೆ ಹಾಗೂ ಮಹಿಳೆಯರಿಗೆ ಉದ್ಯೋಗ ನೀಡಲು ಒತ್ತು ನೀಡುವ ಡಿಜಿಟಲ್ ಆ್ಯಪ್‌ಗಳಿಗೆ ಉತ್ತೇಜನ ನೀಡುವ ಕೆಲಸ ಆಗಬೇಕು ಎಂದು ವರದಿ ಹೇಳಿದೆ.

**ಮುಖ್ಯಾಂಶಗಳು**

- ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿಸ್ತರಿಸುವಂತೆ ಶಿಫಾರಸು
- ಮಹಿಳೆಗೆ ಉದ್ಯೋಗ ನೀಡುವ ಡಿಜಿಟಲ್ ಆ್ಯಪ್‌ಗಳಿಗೆ ಉತ್ತೇಜನ

**ಗಿಗ್ ಉದ್ಯೋಗ**

**ಯಾವ ವಲಯ? ಎಷ್ಟು ಕೆಲಸ?**

- 26.6 ಲಕ್ಷ ಚಿಲ್ಲರೆ ವ್ಯಾಪಾರ, ಮಾರಾಟ
- 13 ಲಕ್ಷ ಸಾರಿಗೆ ವಲಯ
- 6.2 ಲಕ್ಷ ತಯಾರಿಕಾ ವಲಯ
- 6.3 ಲಕ್ಷ ಹಣಕಾಸು, ವಿಮೆ


(ವಿವಿಧ ವಲಯಗಳಲ್ಲಿ ತೊಡಗಿಸಿಕೊಂಡಿರುವ ಕೆಲಸಗಾರರ ಸಂಖ್ಯೆ)

## ಸುದ್ದಿ 2 ನಿಮಿಷ

### ಸತತ ಮೂರನೇ ದಿನವೂ ಸೆನ್ಸೆಕ್ಸ್, ನಿಫ್ಟಿ ಗಳಿಕೆ

**ಮುಂಬೈ (ಪಿಟಿಐ):** ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಹಾಗೂ ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಸತತ ಮೂರನೆಯ ದಿನದ ವಹಿವಾಟಿನಲ್ಲಿ ಏರಿಕೆ ಕಂಡಿವೆ. ಸೆನ್ಸೆಕ್ಸ್ ಸೋಮವಾರ 434 ಅಂಶ, ನಿಫ್ಟಿ 133 ಅಂಶ ಏರಿಕೆಯಾಗಿವೆ.

ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ತೇಜಿ ವಹಿವಾಟು, ಹಣದುಬ್ಬರದ ಸುತ್ತಲಿನ ಕಳವಳ ತಗ್ಗಿದ್ದು ದೇಶಿ ಮಾರುಕಟ್ಟೆಗಳಲ್ಲಿ ಏರುಗತಿಯ ವಹಿವಾಟು ನಡೆಯಲು ಕಾರಣ ಎಂದು ವರ್ತಕರು ತಿಳಿಸಿದ್ದಾರೆ.



'ಕೆಲವು ಅಗತ್ಯ ವಸ್ತುಗಳ ಬೆಲೆ ಇಳಿಕೆ ಆಗುತ್ತಿರುವುದು ಈಚಿನ ಕೆಲವು ದಿನಗಳಲ್ಲಿ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅರ್ಥ ವ್ಯವಸ್ಥೆಯು ಮಂದಗತಿಗೆ ತಿರುಗಿ ಯುರೋಪ್, ಚೀನಾ ಮತ್ತು ಅಮೆರಿಕದಲ್ಲಿ ಕಚ್ಚಾ ತೈಲಕ್ಕೆ ಬೇಡಿಕೆ ಕಡಿಮೆಯಾಗಲಿದೆ ಎಂಬ ನಿರೀಕ್ಷೆಯು ಹೂಡಿಕೆದಾರರಲ್ಲಿ ಇದೆ ಎಂದು ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.13ರಷ್ಟು ಕಡಿಮೆ ಆಗಿ ಪ್ರತಿ ಬ್ಯಾರಲ್‌ಗೆ 112.93 ಡಾಲರ್‌ಗೆ ತಲುಪಿದೆ.

### ಅಲ್ಟ್ರಾಫ್ರೆಶ್‌ನ ಶೇ 40ರಷ್ಟು ಷೇರು ಖರೀದಿಸಿದ ಟಿಟಿಕೆ ಪ್ರೆಸ್ಟೀಜ್

**ಬೆಂಗಳೂರು:** ಅತ್ಯಾಧುನಿಕ ವಿನ್ಯಾಸದ ಅಡುಗೆ ಮನೆ ರೂಪಿಸುವ 'ಅಲ್ಟ್ರಾ ಫ್ರೆಶ್' ಕಂಪನಿಯ ಶೇಕಡ 40ಕ್ಕಿಂತ ಹೆಚ್ಚಿನ ಷೇರುಗಳನ್ನು ಖರೀದಿ ಮಾಡಿರುವುದಾಗಿ ಟಿಟಿಕೆ ಪ್ರೆಸ್ಟೀಜ್ ಕಂಪನಿಯು ಸೋಮವಾರ ಹೇಳಿದೆ.

ಅಡುಗೆ ಮನೆಗೆ ಅಗತ್ಯವಿರುವ ಪ್ರೆಷರ್ ಕುಕರ್, ಗ್ಯಾಸ್ ಸ್ಟವ್ ಹಾಗೂ ಇತರ ಉಪಕರಣಗಳ ವಹಿವಾಟಿನಲ್ಲಿ ಎರಡು ಅಂಕಿಗಳ ಬೆಳವಣಿಗೆ ಸಾಧಿಸುವ ಹಾದಿಯಲ್ಲಿ ತಾನಿದ್ದೇನೆ ಎಂದು ಕಂಪನಿಯು ಹೇಳಿದೆ.

ಅತ್ಯಾಧುನಿಕ ವಿನ್ಯಾಸದ ಅಡುಗೆ ಮನೆಗಳನ್ನು ರೂಪಿಸುವ ಉದ್ದಿಮೆಯು ದೇಶದಲ್ಲಿ ₹ 9,500 ಕೋಟಿ ಮೌಲ್ಯದ್ದಾಗಿ ಬೆಳೆದಿದೆ. ಈ ಕ್ಷೇತ್ರ ಪ್ರವೇಶಿಸುವ ಮೂಲಕ ಟಿಟಿಕೆ ಪ್ರೆಸ್ಟೀಜ್ ಬ್ರ್ಯಾಂಡ್, ವಿಶಿಷ್ಟ ಸ್ಥಾನವೊಂದನ್ನು ಪಡೆದಿದೆ. ಅಡುಗೆ ಮನೆಗೆ ಅಗತ್ಯವಿರುವ ಉಪಕರಣಗಳನ್ನೂ ಅಡುಗೆ ಮನೆ ವಿನ್ಯಾಸವನ್ನೂ ಒದಗಿಸುವ ಕಂಪನಿಯಾಗಿ ಹೊರಹೊಮ್ಮಿದೆ ಎಂದು ಪ್ರಕಟಣೆ ತಿಳಿಸಿದೆ.

ಟಿಟಿಕೆ ಪ್ರೆಸ್ಟೀಜ್ ಜೊತೆಗಿನ ಒಪ್ಪಂದದ ಭಾಗವಾಗಿ ಅಲ್ಟ್ರಾ ಫ್ರೆಶ್ ಕಂಪನಿಯು ಬೆಂಗಳೂರಿನ ಕೋರಮಂಗಲದಲ್ಲಿ ಮಳಿಗೆಯೊಂದನ್ನು ಆರಂಭಿಸಿದೆ.

## ಟ್ರೆಂಡ್ಸ್‌ನಿಂದ ಶಾಪಿಂಗ್ ಫೆಸ್ಟಿವಲ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಫ್ಯಾಷನ್ ರಿಟೇಲ್ ಬ್ರ್ಯಾಂಡ್ ಆಗಿರುವ ಟ್ರೆಂಡ್ಸ್, 'ಟ್ರೆಂಡ್ಸ್ ಶಾಪಿಂಗ್ ಫೆಸ್ಟಿವಲ್' ಆರಂಭಿಸಿದೆ. ಇದರಲ್ಲಿ ಪುರುಷರು, ಮಕ್ಕಳು ಮತ್ತು ಮಹಿಳೆಯರ ಉಡುಪುಗಳ ಮೇಲೆ ಶೇಕಡ 50ರವರೆಗೂ ರಿಯಾಯಿತಿ ಲಭ್ಯವಿರಲಿದೆ ಎಂದು ತಿಳಿಸಿದೆ.

ಒಂದು ಸಾವಿರಕ್ಕೂ ಅಧಿಕ ಸ್ಟೈಲ್‌ಗಳು, ಅತ್ಯುತ್ತಮ ಫ್ಯಾಷನ್ ಉಡುಪುಗಳು ಮತ್ತು ಟ್ರೆಂಡ್ ಸೆಟ್ಟಿಂಗ್ ಡ್ರೆಸ್‌ಗಳಿಗೆ ಟ್ರೆಂಡ್ಸ್ ಹೆಸರಾಗಿದೆ. ಅತಿ ಕಡಿಮೆ ಬೆಲೆ, ರಿವಾರ್ಡ್ ಪಾಯಿಂಟ್‌ಗಳು ಕೂಡ ಈ ಫೆಸ್ಟಿವಲ್‌ನಲ್ಲಿ ಸಿಗಲಿವೆ. ಈ ರಿಯಾಯಿತಿ ಮಾರಾಟ ಮೇಳದಲ್ಲಿ ಪ್ರತಿ ಗ್ರಾಹಕರಿಗೂ ಒಂದು ಉಡುಗೊರೆ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಚಿನ್ನ: ₹ 302 ಏರಿಕೆ

**ನವದೆಹಲಿ (ಪಿಟಿಐ):** ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆಯು ಸೋಮವಾರ ₹ 302ರಷ್ಟು ಏರಿಕೆ ಕಂಡಿದ್ದು, ₹ 50,822ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯಲ್ಲಿ ಆಗಿರುವ ಏರಿಕೆಗೆ ಅನುಗುಣವಾಗಿ ದೇಶದಲ್ಲಿಯೂ ಬೆಲೆ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿಯ ಬೆಲೆಯು ಕೆ.ಜಿಗೆ ₹781ರಷ್ಟು ಹೆಚ್ಚಳ ಆಗಿದ್ದು ₹60,231ಕ್ಕೆ ತಲುಪಿದೆ.

# ಸ್ಕಾರ್ಪಿಯೊ–ಎನ್ ಬಿಡುಗಡೆ

**ಮುಂಬೈ (ಪಿಟಿಐ):** ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು 'ಸ್ಕಾರ್ಪಿಯೊ–ಎನ್' ಎಸ್‌ಯುವಿ ವಾಹನದ ಐದು ಮಾದರಿಗಳನ್ನು ಸೋಮವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 11.99 ಲಕ್ಷದಿಂದ ಶುರುವಾಗುತ್ತದೆ.

ಇದರ ಬುಕಿಂಗ್ ಜುಲೈ 30ರಿಂದ ಶುರುವಾಗಲಿದೆ. ಆನ್‌ಲೈನ್ ಮೂಲಕ ಹಾಗೂ ಮಹೀಂದ್ರ ಡೀಲರ್‌ಗಳ ಮೂಲಕ ಬುಕ್ ಮಾಡಬಹುದು. ವಾಹನವನ್ನು ಗ್ರಾಹಕರಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆಯು ಹಬ್ಬಗಳ ಋತುವಿನಲ್ಲಿ ಶುರುವಾಗಲಿದೆ ಎಂದು ಕಂಪನಿ ಹೇಳಿದೆ.

ಹೊಸ ಮಾದರಿಯನ್ನು ಅಭಿವೃದ್ಧಿಪಡಿಸಲು ₹ 1,600 ಕೋಟಿ ಹೂಡಿಕೆ ಮಾಡಲಾಗಿದೆ ಎಂದು ಕಂಪನಿ ಹೇಳಿದೆ.

ಈ ಎಸ್‌ಯುವಿಯನ್ನು ದಕ್ಷಿಣ ಆಫ್ರಿಕಾ ಮತ್ತು ನೇಪಾಳದಲ್ಲಿ ಕೂಡ ಬಿಡುಗಡೆ ಮಾಡಲಾಗಿದೆ. ಇದು ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನಲ್ಲಿಯೂ ಬಿಡುಗಡೆ ಆಗಲಿದೆ ಎಂದು ಕಂಪನಿಯು ತಿಳಿಸಿದೆ.

ಪೆಟ್ರೋಲ್ ಹಾಗೂ ಡೀಸೆಲ್ ಆಯ್ಕೆಗಳನ್ನು ಇದು ಹೊಂದಿದ್ದು, ಮ್ಯಾನುವಲ್ ಮತ್ತು ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಆಯ್ಕೆಗಳೂ ಲಭ್ಯವಿರಲಿವೆ.




ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಅನಂತ್ ಕಾರ್ಸ್ ಮಳಿಗೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಡಿಸಿಪಿ ಹರೀಶ್ ಪಾಂಡೆ (ಬಲ) ಅವರು ಸ್ಕಾರ್ಪಿಯೊ–ಎನ್ ಎಸ್‌ಯುವಿ ಬಿಡುಗಡೆ ಮಾಡಿದರು. ಅನಂತ್ ಕಾರ್ಸ್ ಸಿಇಒ ಸಿ. ಭಾಸ್ಕರ್ ರಾಜು ಚಿತ್ರದಲ್ಲಿದ್ದಾರೆ

## ರೂಪಾಯಿ ಇಳಿಕೆ

**ಮುಂಬೈ (ಪಿಟಿಐ):** ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 4 ಪೈಸೆ ಇಳಿದು, ಒಂದು ಡಾಲರ್‌ಗೆ ₹ 78.37ಕ್ಕೆ ತಲುಪಿದೆ. ಇದು ಸಾರ್ವಕಾಲಿಕ ಕನಿಷ್ಠ ಮಟ್ಟ.

ವಿದೇಶಿ ಬಂಡವಾಳ ಹೊರಹರಿವು ರೂಪಾಯಿ ಮೌಲ್ಯ ಇಳಿಕೆಗೆ ಒಂದು ಕಾರಣ.

ತುಸು ತಗ್ಗಿದ ತೀವ್ರತೆ • ಅಸ್ಸಾಂನಲ್ಲಿ 22 ಲಕ್ಷಕ್ಕೂ ಹೆಚ್ಚು ಜನ ಸಂತ್ರಸ್ತ

# ಪ್ರವಾಹ: ಮೃತರ ಸಂಖ್ಯೆ 126ಕ್ಕೆ ಏರಿಕೆ

**ಗುವಾಹಟಿ (ಪಿಟಿಐ):** ಅಸ್ಸಾಂನಲ್ಲಿ ಪ್ರವಾಹ ತಗ್ಗುತ್ತಿದ್ದು, ಹೆಚ್ಚಿನ ನದಿಗಳ ನೀರಿನ ಮಟ್ಟವು ಕಡಿಮೆಯಾಗುತ್ತಿದೆ. ಆದರೆ, ಎರಡು ವಾರಗಳು ನಿರಂತರ ತೊಂದರೆ ಉಂಟುಮಾಡಿದ ಪ್ರವಾಹದಿಂದ ರಾಜ್ಯದಾದ್ಯಂತ 22 ಲಕ್ಷಕ್ಕೂ ಹೆಚ್ಚು ಜನರು ಸಂತ್ರಸ್ತರಾಗಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಕ್ಯಾಚಾರ್ ಜಿಲ್ಲೆಯ ಪ್ರಮುಖ ಪಟ್ಟಣ ಸಿಲ್ಚಾರ್‌ನಲ್ಲಿ ಪರಿಸ್ಥಿತಿ ಭೀಕರವಾಗಿದೆ. ಕೊಪಿಲಿ, ಬರಾಕ್ ಮತ್ತು ಕುಶಿಯಾರಾ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಹಲವು ಪ್ರದೇಶಗಳು ಇನ್ನೂ ಜಲಾವೃತವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಐದು ಮಂದಿ ಮೃತಪಟ್ಟಿದ್ದು, ಇಬ್ಬರು ಪ್ರವಾಹದಲ್ಲಿ ಕಣ್ಮರೆಯಾಗಿದ್ದಾರೆ. ರಾಜ್ಯದಲ್ಲಿ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ 126ಕ್ಕೆ ಏರಿದೆ.

ಪ್ರವಾಹದಿಂದ ರಾಜ್ಯದಾದ್ಯಂತ 2,542 ಗ್ರಾಮಗಳು ಹಾನಿಗೊಳಗಾಗಿವೆ. 2,17,413 ಜನರು 564 ಪರಿಹಾರ ನೆರವು ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಬೊಂಗೈಗಾಂವ್, ಚರೈಡಿಯೊ, ಚಿರಾಂಗ್, ಹೈಲಕಂಡಿ, ಮೋರಿಗಾಂವ್, ಸೋನಿತ್‌ಪುರ, ದಕ್ಷಿಣ ಸಲ್ಮಾರಾ ಮತ್ತು ಉದಲ್‌ಗುರಿಯಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಭೂಸವಕಳಿ ಉಂಟಾಗಿದೆ.

ವಾರದಿಂದ ಜಲಾವೃತವಾಗಿರುವ ಸಿಲ್ಚಾರ್ ಪಟ್ಟಣದಲ್ಲಿ, ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳ ಮೂಲಕ ಆಹಾರ, ಕುಡಿಯುವ ನೀರು ಮತ್ತು ಇತರ ಅಗತ್ಯ ವಸ್ತುಗಳ ಪ್ಯಾಕೆಟ್‌ಗಳನ್ನು ಸಂತ್ರಸ್ತರಿಗೆ ಒದಗಿಸುವ ಪರಿಹಾರ ಕಾರ್ಯಗಳನ್ನು ಸರ್ಕಾರ ನಡೆಸುತ್ತಿದೆ.

ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆ ಪರಿಶೀಲಿಸಿದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು, 'ಬೆಟ್ಕುಂಡಿಯಲ್ಲಿನ ಹಳ್ಳದ ದಂಡೆಯನ್ನು ಕಿಡಿಗೇಡಿಗಳು ಒಡೆದಿರುವುದರಿಂದ ನೀರು ಸಿಲ್ಚಾರ್ ಪಟ್ಟಣಕ್ಕೆ ನುಗ್ಗಿ, 'ಮಾನವ ನಿರ್ಮಿತ ಕೃತಕ ವಿಪತ್ತು' ಸೃಷ್ಟಿಯಾಗಿದೆ ಎಂದು ಆರೋಪಿಸಿದರು.



ಅಸ್ಸಾಂನ ನಾಗಾವ್ ಜಿಲ್ಲೆಯಲ್ಲಿ ಭಾರಿ ಮಳೆಯ ಪ್ರವಾಹದ ಅಬ್ಬರಕ್ಕೆ ಸೋಮವಾರ ಸೇತುವೆಯೊಂದು ಕೊಚ್ಚಿ ಹೋಗಿದೆ — ಪಿಟಿಐ ಚಿತ್ರ

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-54500 |
| **ಹೊಸದುರ್ಗ** | |
| ಆಪಿ | 49200-49600 |
| ಬೆಟ್ಟೆ | 38600-39000 |
| ಕೆಂಪುಗೋಟು | 28600-29000 |
| ರಾಶಿ | 48700-49100 |
| **ಕುಮಟ** | |
| ಚಿಪ್ಪು | 26169-31089 |
| ಕೋಕ | 18509-30189 |
| ಹಳೆಚಾಲಿ | 10189-19929 |
| ಹೊಸಚಾಲಿ | 42089-45209 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 30500-43000 |
| **ಶಿವಮೊಗ್ಗ** | |
| ಬೆಟ್ಟೆ | 50559-53199 |
| ಗೊರಬಲು | 17009-37899 |
| ರಾಶಿ | 47599-49509 |
| ಸರಕು | 56769-79100 |
| **ಸಿದ್ದಾಪುರ** | |
| ಬಿಳಿಗೋಟು | 24099-31899 |
| ಚಾಲಿ | 34799-39300 |
| ಕೋಕ | 20299-33799 |
| ಕೆಂಪುಗೋಟು | 26699-32199 |
| ರಾಶಿ | 46269-48839 |
| ತಟ್ಟಿಬೆಟ್ಟೆ | 36999-46699 |
| **ಶಿರಸಿ** | |
| ಬೆಟ್ಟೆ | 32199-44099 |
| ಬಿಳಿಗೋಟು | 23011-33386 |
| ಚಾಲಿ | 32899-39941 |
| ರಾಶಿ | 39869-48699 |
| **ಯಲ್ಲಾಪುರ** | |
| ಬಿಳಿಗೋಟು | 26899-33199 |
| ಚಾಲಿ | 35011-39799 |
| ಕೋಕ | 19031-29601 |
| ಕೆಂಪುಗೋಟು | 29036-34675 |
| ರಾಶಿ | 46199-53000 |
| ತಟ್ಟಿಬೆಟ್ಟೆ | 37306-45600 |

| ಮೂಡಿಗೆರೆ ಕಾಫಿ (50 ಕೆ.ಜಿಗೆ) | ಮುದ್ರಮನೆ |
|---|---|
| ಎಪಿ | 15900 |
| ಎಸಿ | 8960 |
| ಆರ್‌ಪಿ | 9600 |
| ಆರ್‌ಸಿ | 4800 |

# ಕ್ರೈಸ್ತರ ಮೇಲಿನ ದಾಳಿ: ವಿಚಾರಣೆಗೆ 'ಸುಪ್ರೀಂ' ಅಸ್ತು

**ನವದೆಹಲಿ (ಪಿಟಿಐ):** ದೇಶಾದ್ಯಂತ ಕ್ರೈಸ್ತ ಸಂಸ್ಥೆಗಳು ಮತ್ತು ಪಾದ್ರಿಗಳ ಮೇಲೆ ಹೆಚ್ಚುತ್ತಿರುವ ದಾಳಿ ಹಾಗೂ ದ್ವೇಷದ ಅಪರಾಧಗಳನ್ನು ತಡೆಯಲು ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿರುವ ಮಾರ್ಗಸೂಚಿಗಳನ್ನು ಜಾರಿಗೊಳಿಸುವಂತೆ ಕೋರಿ ಸಲ್ಲಿಸಲಾದ ಮನವಿ ಅರ್ಜಿಯ ವಿಚಾರಣೆಗೆ ಸೋಮವಾರ ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ದೇಶದಾದ್ಯಂತ ಪ್ರತಿ ತಿಂಗಳು ಕ್ರಿಶ್ಚಿಯನ್ ಸಂಸ್ಥೆಗಳು ಮತ್ತು ಪಾದ್ರಿಗಳ ಮೇಲೆ ಸರಾಸರಿ 45 ರಿಂದ 50 ಹಿಂಸಾತ್ಮಕ ದಾಳಿಗಳು ನಡೆಯುತ್ತಿವೆ. ಈ ವರ್ಷ ಮೇ ತಿಂಗಳಿನಲ್ಲಿಯೇ 57 ದಾಳಿಗಳು ನಡೆದಿವೆ ಎಂದು ಅರ್ಜಿದಾರರಾದ ಹಿರಿಯ ವಕೀಲ ಕಾಲಿನ್ ಗೊನ್ಸಾಲ್ವಿಸ್ ಹೇಳಿದ್ದಾರೆ. ಅರ್ಜಿಯ ತುರ್ತು ವಿಚಾರಣೆಗೆ ಪಟ್ಟಿ ಮಾಡುವಂತೆ ಕೋರಿದರು.

'ನೀವು ಹೇಳುತ್ತಿರುವಂತೆ ದಾಳಿಗಳು ಸಂಭವಿಸುತ್ತಿದ್ದರೆ ಅದು ದುರದೃಷ್ಟಕರ. ನಿಮ್ಮ ಕೋರಿಕೆಯ ಅರ್ಜಿಯನ್ನು ಪುನಾ ವಿಚಾರಣೆಗೆ ಪಟ್ಟಿ ಮಾಡಲಾಗಿದೆ. ಅದನ್ನು ಖಚಿತಪಡಿಸಿಕೊಳ್ಳಬಹುದು' ಎಂದು ಪೀಠವು ಹೇಳಿತು. ಬೇಸಿಗೆ ರಜೆಯ ನಂತರ ನ್ಯಾಯಾಲಯಗಳ ಕಲಾಪಗಳನ್ನು ಜುಲೈ 11ರಂದು ಪುನರಾರಂಭಿಸುವಾಗ ಅದೇ ದಿನ ಈ ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡುವಂತೆ ಸುಪ್ರೀಂ ಕೋರ್ಟ್ ರಿಜಿಸ್ಟ್ರಿಗೆ ಸೂಚಿಸಿತು.

**ಮುಂಬೈ ಧಾರಣೆ**

**ಶೇಂಗಾ**

27-6-2022

| | |
|---|---|
| ಜಾವಾ 70/80(ಹೊಸ) | 10750-10800 |
| ಜಾವಾ 80/90(ಹೊಸ) | 10350-10400 |
| ದಪ್ಪ ಮಧ್ಯಪ್ರದೇಶ(ಹೊಸ) | 10000-10100 |
| ದಪ್ಪ ಗುಜರಾತ್(ಹೊಸ) | 10750-10850 |

**ಶೇಂಗಾ ಎಣ್ಣೆ (10 ಕೆಜಿಗೆ)**


| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1580 (1550) |
| ಒಂದು ವಾರದ ಡೆಲಿವರಿ | 1575 (1545) |
| ಸೋಯಾ ಕಚ್ಚಾ | 1282 (1265) |
| ಪಾಮ್ ವಾರದ ಡೆಲಿವರಿ | 1268 (1253) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1630 (1630) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
50,800 (50,650)
ಬೆಳ್ಳಿ ಕೆ.ಜಿ 60,800 (59,875)

ಆವರಣದಲ್ಲಿ ಶನಿವಾರದ ಧಾರಣೆ









ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ: ಆನ್ಸ್ ಜಬೇರ್‌ಗೆ ಗೆಲುವು

# ಜೊಕೊವಿಚ್‌ಗೆ ಜಯದ ಆರಂಭ

ಲಂಡನ್ (ರಾಯಿಟರ್ಸ್): ಅಗ್ರಶ್ರೇಯಾಂಕದ ಆಟಗಾರ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ಸೋಮವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 6-4 3-6 6-3 6-4 ರಲ್ಲಿ ಕೊರಿಯದ ವೊನ್ ಸೂನ್–ವೂ ವಿರುದ್ಧ ಗೆದ್ದರು.

ಹಾಲಿ ಚಾಂಪಿಯನ್ ಜೊಕೊವಿಚ್‌ಗೆ ವಿಶ್ವ ರ‍್ಯಾಂಕಿಂಗ್‌ನಲ್ಲಿ 81ನೇ ಸ್ಥಾನದಲ್ಲಿರುವ ಸೂನ್–ವೂ ತಕ್ಕ ಪೈಪೋಟಿ ನೀಡುವಲ್ಲಿ ಯಶಸ್ವಿಯಾದರು.

ಮೊದಲ ಸೆಟ್ ಸೋತ ಕೊರಿಯದ ಆಟಗಾರ ಎರಡನೇ ಸೆಟ್‌ನ ನಾಲ್ಕನೇ ಗೇಮ್‌ನಲ್ಲಿ ಜೊಕೊವಿಚ್ ಸರ್ವ್ ಬ್ರೇಕ್ ಮಾಡಿದರು. ಆ ಬಳಿಕ ತಮ್ಮ ಸರ್ವ್‌ನಲ್ಲಿ ಪಾಯಿಂಟ್ ಗಿಟ್ಟಿಸಿಕೊಂಡು ಸೆಟ್ ಗೆದ್ದು 1–1 ರಲ್ಲಿ ಸಮಬಲ ಸಾಧಿಸಿದರು.

ಈ ಹಂತದಲ್ಲಿ ಎಂದಿನ ಲಯ



ಆನ್ಸ್ ಜಬೇರ್ ಆಟದ ವೈಖರಿ –ಎಎಫ್‌ಪಿ ಚಿತ್ರ

ಕಂಡುಕೊಂಡ ಜೊಕೊವಿಚ್ ಶಿಸ್ತಿನ ಆಟವಾಡಿದರು. ಮುಂದಿನ ಎರಡೂ ಸೆಟ್‌ಗಳನ್ನು ಗೆದ್ದು ಎರಡನೇ ಸುತ್ತಿಗೆ ಮುನ್ನಡೆದರು.

ಪುರುಷರ ಸಿಂಗಲ್ಸ್ ವಿಭಾಗದ ಇತರ ಪಂದ್ಯಗಳಲ್ಲಿ, ನಾರ್ವೆಯ ಕಾಸ್ಪರ್ ರೂಡ್ 7-6 (7/1), 7-6 (11/9), 6-2ರಿಂದ ಸ್ಪೇನ್‌ನ ಆಲ್ಬರ್ಟ್ ರಾಮೊಸ್ ಎದುರು, ಫ್ರಾನ್ಸ್‌ನ ಕ್ವೆಂಟಿನ್ ಹ್ಯಾಲಿಸ್ 4-6, 6-1, 6-2, 6-4 ರಲ್ಲಿ ತಮ್ಮದೇ ದೇಶದ ಬೆನೊಟ್ ಪೇರ್ ವಿರುದ್ಧ; ಅಮೆರಿಕದ ಫ್ರಾನ್ಸೆಸ್ ಟಿಯಾಫೊ 6–4, 6–4, 6–4 ರಲ್ಲಿ ಇಟಲಿಯ ಅಂಡ್ರಿಯಾ ವವಾಸೊರಿ ವಿರುದ್ಧ; ಸ್ಪೇನ್‌ನ ಜುವಾಮ್ ಮುನರ್ 6–2, 6–4, 7–5 ರಲ್ಲಿ ಬ್ರೆಜಿಲ್‌ನ ತಿಯಾಗೊ ಮಾಂಟೆರೊ ವಿರುದ್ಧ; ಅಮೆರಿಕದ ಟಾಮಿ ಪೌಲ್ 6-1, 6-2, 7-6 ರಲ್ಲಿ ಸ್ಪೇನ್‌ನ ಫೆರ್ನಾಂಡೊ ವೆರ್ಡಸ್ಕೊ ವಿರುದ್ಧ ಜಯ ಸಾಧಿಸಿದರು. ಪೋಲೆಂಡ್‌ನ ಹುಬರ್ಟ್ ಹುರ್ಕಾಜ್ 6–7 (4/7), 4–6, 7–5, 6–2, 6–7 (8/10)ರಿಂದ ಸ್ಪೇನ್‌ನ ಅಲೆಜಾಂಡ್ರೊ ಪೊಕಿನಾ ಎದುರು ಆಘಾತ ಅನುಭವಿಸಿದರು.

**ಜಬೇರ್ ಜಯಭೇರಿ:** ವಿಶ್ವ ರ‍್ಯಾಂಕಿಂಗ್‌ನಲ್ಲಿ 2ನೇ ಸ್ಥಾನ ದಲ್ಲಿರುವ ಟ್ಯುನಿಷಿ ಯಾದ ಆನ್ಸ್ ಜಬೇರ್ ಮಹಿಳೆಯರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತು ಪ್ರವೇಶಿಸಿದರು. ಮೊದಲ ಸುತ್ತಿನಲ್ಲಿ ಅವರು 6–1, 6–3 ರಲ್ಲಿ ಸ್ವೀಡನ್‌ನ ಮಿರ್ಜಮ್ ಬಾರ್ಕ್‌ಲಂಡ್ ಅವರನ್ನು ಮಣಿಸಿದರು.

ಪೋಲೆಂಡ್‌ನ ಮಜ ಚ್ವಾಲಿನ್‌ಸ್ಕಾ 6–0, 7–5 ರಲ್ಲಿ ಜೆಕ್‌ರಿಪಬ್ಲಿಕ್‌ನ ಕ್ಯಾಥರಿನಾ ಸಿನಿಯಕೊವಾ ವಿರುದ್ಧ; ಅಮೆರಿಕದ ಆ್ಯಲಿಸನ್ ರಿಸ್ಕೆ 6–2, 6–4 ರಲ್ಲಿ ಸ್ವಿಟ್ಜರ್‌ಲೆಂಡ್‌ನ ಲೆನಾ ಇನ್‌-ಅಲ್ಬನ್ ವಿರುದ್ಧ ಗೆದ್ದರು.

# ಚಾಮರಿ ಅಟಪಟ್ಟು ಭರ್ಜರಿ ಆಟ

## ಟಿ20: ಕೊನೆಯ ಪಂದ್ಯದಲ್ಲಿ ಶ್ರೀಲಂಕಾ ತಂಡಕ್ಕೆ ಜಯ

ದಂಬುಲಾ (ಪಿಟಿಐ): ಶ್ರೀಲಂಕಾ ನೆಲದಲ್ಲಿ ಟಿ20 ಕ್ರಿಕೆಟ್ ಸರಣಿಯನ್ನು ‘ಕ್ಲೀನ್‌ಸ್ವೀಪ್’ ಮಾಡಬೇಕೆಂಬ ಭಾರತ ಮಹಿಳಾ ತಂಡದ ಆಸೆಗೆ ಚಾಮರಿ ಅಟಪಟ್ಟು ಅಡ್ಡಿಯಾದರು.

ಸೋಮವಾರ ನಡೆದ ಮೂರನೇ ಹಾಗೂ ಕೊನೆಯ ಪಂದ್ಯದಲ್ಲಿ ಚಾಮರಿ ಅವರ ಭರ್ಜರಿ ಬ್ಯಾಟಿಂಗ್ (ಔಟಾಗದೆ 80) ನೆರವಿನಿಂದ ಆತಿಥೇಯ ತಂಡ ಏಳು ವಿಕೆಟ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ಭಾರತ 5 ವಿಕೆಟ್‌ಗೆ 138 ರನ್ ಗಳಿಸಿದರೆ, ಲಂಕಾ ಇನ್ನೂ ಮೂರು ಓವರ್‌ಗಳು ಇರುವಂತೆಯೇ ಜಯದ ನಗು ಬೀರಿತು. ಮೊದಲ ಎರಡು ಪಂದ್ಯ ಗೆದ್ದಿದ್ದ ಹರ್ಮನ್‌ಪ್ರೀತ್ ಕೌರ್ ಬಳಗ ಸರಣಿಯನ್ನು 2–1 ರಲ್ಲಿ ತನ್ನದಾಗಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಲಂಕಾ ತಂಡ, ವಿಷ್ಮಿ ಗುಣರತ್ನೆ ಮತ್ತು ಹರ್ಷಿತಾ ಸಮರವಿಕ್ರಮ (13) ಅವರನ್ನು ಬೇಗನೇ ಕಳೆದುಕೊಂಡಿತು. ಚಾಮರಿ ಮತ್ತು ನೀಲಾಕ್ಷಿ ಡಿಸಿಲ್ವ (30 ರನ್, 28 ಎ, 4X4) ಮೂರನೇ ವಿಕೆಟ್‌ಗೆ 77 ರನ್ ಸೇರಿಸಿ ಗೆಲುವಿನ ಕನಸು ಜೀವಂತವಾಗಿರಿಸಿಕೊಂಡರು. ನೀಲಾಕ್ಷಿ ಔಟಾದರೂ ಭರ್ಜರಿ ಆಟ ಮುಂದುವರಿಸಿದ ಚಾಮರಿ ಅವರು ಕವಿಶಾ ಜತೆಗೂಡಿ ಗೆಲುವು ತಂದುಕೊಟ್ಟರು. ಚಾಮರಿ 14 ಬೌಂಡರಿ ಮತ್ತು ಒಂದು ಸಿಕ್ಸರ್ ಗಳಿಸಿದರು.

**ಕೌರ್, ಜೆಮಿಮಾ ಆಸರೆ:** ಶಫಾಲಿ ವರ್ಮ (5) ಅವರನ್ನು ಹೊರತುಪಡಿಸಿ ಭಾರತದ ಅಗ್ರ ಕ್ರಮಾಂಕದ ಎಲ್ಲ ಬ್ಯಾಟರ್‌ಗಳು ಉತ್ತಮ ಆಟವಾಡಿದರು. ಹರ್ಮನ್‌ಪ್ರೀತ್ ಕೌರ್ (ಅಜೇಯ 39, 33 ಎ., 4X3, 6X1) ಮತ್ತು ಜೆಮಿಮಾ ರಾಡ್ರಿಗಸ್ (33 ರನ್, 30 ಎ., 4X3) ಅವರು ಕೊನೆಯಲ್ಲಿ ರನ್‌ರೇಟ್ ಹೆಚ್ಚಿಸಿದರು.

**ಸಂಕ್ಷಿಪ್ತ ಸ್ಕೋರ್:** ಭಾರತ 5ಕ್ಕೆ 138 (20 ಓವರ್) ಸ್ಮೃತಿ ಮಂದಾನ 22, ಎಸ್.ಮೇಘನಾ 22, ಹರ್ಮನ್‌ಪ್ರೀತ್ ಕೌರ್ ಔಟಾಗದೆ 39, ಜೆಮಿಮಾ ರಾಡ್ರಿಗಸ್ 33, ಪೂಜಾ ವಸ್ತ್ರಕರ್ 13, ಸುಗಂಧಿಕಾ ಕುಮಾರಿ 28ಕ್ಕೆ 1, ಅಮಾ ಕಾಂಚನ 22ಕ್ಕೆ 1, ಒಶಾದಿ ರಣಸಿಂಘೆ 13ಕ್ಕೆ 1, ಇನೊಕ ರಣವೀರ 31ಕ್ಕೆ 1

ಶ್ರೀಲಂಕಾ: 3ಕ್ಕೆ 141 (17 ಓವರ್) ಚಾಮರಿ ಅಟಪಟ್ಟು ಔಟಾಗದೆ 80, ಹರ್ಷಿತಾ ಸಮರವಿಕ್ರಮ 13, ನೀಲಾಕ್ಷಿ ಡಿಸಿಲ್ವ 30, ಕವಿಶಾ ದಿಲ್ಹರಿ ಔಟಾಗದೆ 7, ರೇಣುಕಾ ಸಿಂಗ್ 27ಕ್ಕೆ 1, ರಾಧಾ ಯಾದವ್ 41ಕ್ಕೆ 1



ಭಾರತ ತಂಡದ ವಿಕೆಟ್ ಪಡೆದ ಲಂಕಾ ಆಟಗಾರ್ತಿಯರ ಸಂಭ್ರಮ –ಪಿಟಿಐ ಚಿತ್ರ

### ಚಾಮರಿ ದಾಖಲೆ

ಟಿ20 ಕ್ರಿಕೆಟ್‌ನಲ್ಲಿ 2 ಸಾವಿರ ರನ್ ಪೂರೈಸಿದ ಲಂಕಾದ ಮೊದಲ ಬ್ಯಾಟರ್ ಎಂಬ ಗೌರವವನ್ನು 32 ವರ್ಷದ ಚಾಮರಿ ತಮ್ಮದಾಗಿಸಿಕೊಂಡರು. ಪುರುಷರ ತಂಡದಲ್ಲೂ ಯಾರೂ ಈ ಸಾಧನೆ ಮಾಡಿಲ್ಲ. 1,889 ರನ್ ಕಲೆಹಾಕಿರುವ ತಿಲಕರತ್ನೆ ದಿಲ್ಶನ್ ಅವರು ಪುರುಷರ ತಂಡದಲ್ಲಿ ಹೆಚ್ಚು ರನ್ ಗಳಿಸಿದವರು.

## ಟಿಕೆಟ್ ಹಣ: ಜುಲೈ 1 ರಿಂದ ಮರುಪಾವತಿ

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಭಾರತ–ದಕ್ಷಿಣ ಆಫ್ರಿಕಾ ನಡುವಿನ ಟಿ20 ಕ್ರಿಕೆಟ್ ಪಂದ್ಯದ ಟಿಕೆಟ್‌ಗಳ ಮೊತ್ತದ ಶೇ 50 ರಷ್ಟು ಹಣ ಮರುಪಾವತಿ ಜುಲೈ 1 ರಿಂದ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ತಿಳಿಸಿದೆ.

ಜೂನ್ 19 ರಂದು ನಡೆಯಬೇಕಿದ್ದ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು.

‘ಜುಲೈ 1, 2 ಮತ್ತು 3 ರಂದು ಬೆಳಿಗ್ಗೆ 10 ರಿಂದ ಸಂಜೆ 7ರ ವರೆಗೆ ಮರುಪಾವತಿ ನಡೆಯಲಿದೆ. ಆನ್‌ಲೈನ್ ಮತ್ತು ಕೌಂಟರ್‌ಗಳ ಮೂಲಕ ಟಿಕೆಟ್ ಖರೀದಿಸಿದವರು ತಮ್ಮಲ್ಲಿರುವ ಟಿಕೆಟ್ ನೀಡಿ ಹಣ ಪಡೆದುಕೊಳ್ಳಬಹುದು’ ಎಂದು ಹೇಳಿದೆ.

ಜಿ ಅಪ್ಪರ್/ ಜಿ ಲೋವರ್ 1 ಮತ್ತು 2 ಸ್ಟ್ಯಾಂಡ್ ಟಿಕೆಟ್ ಖರೀದಿಸಿದವರು ಗೇಟ್ ನಂ.5 ರಲ್ಲಿ, ಎ ಮತ್ತು ಬಿ ಅಪ್ಪರ್, ಬಿ ಲೋವರ್ ಟಿಕೆಟ್ ಹೊಂದಿರುವವರು ಗೇಟ್ ನಂ.2ರಲ್ಲಿ, ಡಿ ಕಾರ್ಪೊರೇಟ್, ಎನ್ ಸ್ಟ್ಯಾಂಡ್ ಮತ್ತು ಇ ಎಕ್ಸಿಕ್ಯುಟಿವ್ ಟಿಕೆಟ್‌ನವರಿಗೆ ಗೇಟ್ ನಂ. 18 ರ ಕೌಂಟರ್‌ನಿಂದ ಮರುಪಾವತಿ ಪಡೆಯಬಹುದು.

ಆನ್‌ಲೈನ್ ಮೂಲಕ ಟಿಕೆಟ್ ಖರೀದಿಸಿದವರಿಗೆ ಗೇಟ್ 18 (ಗ್ರ್ಯಾಂಡ್ ಟೆರೇಸ್) ಮತ್ತು ಗೇಟ್ 19ರಲ್ಲಿ (ಪಿ ಕಾರ್ಪೊರೇಟ್, ಪೆವಿಲಿಯನ್ ಟೆರೇಸ್ ಮತ್ತು ಪಿ2 ಸ್ಟ್ಯಾಂಡ್) ಮರುಪಾವತಿಗೆ ಸೌಲಭ್ಯ ಕಲ್ಪಿಸಲಾಗಿದೆ.

ತಾಪಮಾನ ಬದಲಾವಣೆ: ಜಿ–7 ಸದಸ್ಯ ರಾಷ್ಟ್ರಗಳಿಗೆ ಪ್ರಧಾನಿ ಮೋದಿ ಆಹ್ವಾನ

# ಶುದ್ಧ ಇಂಧನ ಕ್ಷೇತ್ರದಲ್ಲಿ ಹೂಡಿಕೆ

ಎಲ್ಮೌ, ಜರ್ಮನಿ (ಪಿಟಿಐ): ‘ತಾಪಮಾನ ಬದಲಾವಣೆ ಕುರಿತಂತೆ ಭಾರತದ ಬದ್ಧತೆಯು ದೇಶದ ಸಾಮರ್ಥ್ಯದ ದ್ಯೋತಕವೂ ಆಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಇಲ್ಲಿ ಪ್ರತಿಪಾದಿಸಿದರು.

ತಾಪಮಾನ ಬದಲಾವಣೆ ಸವಾಲು ಎದುರಿಸುವ ಭಾರತದ ಯತ್ನವನ್ನು ಜಿ-7 ಶೃಂಗದ ಸದಸ್ಯ ರಾಷ್ಟ್ರಗಳು ಬೆಂಬಲಿಸಲಿವೆ ಮತ್ತು ಶುದ್ಧ ಇಂಧನ ಕುರಿತ ತಂತ್ರಜ್ಞಾನಗಳಿಗೆ ವಿಶ್ವದ ಮಾರುಕಟ್ಟೆಯ ಅವಕಾಶಗಳ ಬಳಕೆಗೆ ಆಹ್ವಾನ ನೀಡಲಿವೆ ಎಂದು ಆಶಿಸಿದರು.

**‘ಉತ್ತಮ ಭವಿಷ್ಯಕ್ಕಾಗಿ ಹೂಡಿಕೆ:** ತಾಪಮಾನ, ಇಂಧನ, ಆರೋಗ್ಯ’ ವಿಷಯ ಕುರಿತ ಗೋಷ್ಠಿಯಲ್ಲಿ ಅವರು, ನವೀಕರಿಸಬಹುದಾದ ಮೂಲದಿಂದ ಶೇ 40ರಷ್ಟು ಇಂಧನ ಬಳಸುವ ಗುರಿ ಸಾಧನೆಯಲ್ಲಿ ಭಾರತದ ಯತ್ನವನ್ನು ಪ್ರಮುಖವಾಗಿ ಪಟ್ಟಿ ಮಾಡಿದರು.

ಪೆಟ್ರೋಲ್‌ನಲ್ಲಿ ಶೇ 10ರಷ್ಟು ಎಥೆನಾಲ್ ಮಿಶ್ರಣ ಮಾಡುವ ಗುರಿಯನ್ನು ನಿಗದಿತ ಗಡುವಿಗೆ 5 ತಿಂಗಳು ಮೊದಲೇ ಸಾಧಿಸಿದ್ದೇವೆ. ಸಂಪೂರ್ಣ ಸೋಲಾರ್ ವಿದ್ಯುತ್ ಅವಲಂಬಿಸಿದ ವಿಶ್ವದ ಮೊದಲ ವಿಮಾನ ನಿಲ್ದಾಣ ಭಾರತದಲ್ಲಿದೆ. ಶೂನ್ಯ ಇಂಗಾಲ ಹೊರಸೂಸುವಿಕೆ ಗುರಿಯನ್ನು ಭಾರತದ ಬೃಹತ್ ರೈಲ್ವೆ ಇಲಾಖೆಯು ಈ ದಶಕದಲ್ಲಿಯೇ ಸಾಧಿಸಲಿದೆ ಎಂದು ಮೋದಿ ಹೇಳಿದರು.

ಭಾರತದಂತಹ ಬೃಹತ್ ರಾಷ್ಟ್ರ ಇಂಥ ಗುರಿ ಸಾಧನೆಯನ್ನು ತೋರಿದಾಗ, ಇತರೆ ಅಭಿವೃದ್ಧಿ ದೇಶಗಳು ಅದರಿಂದ ಪ್ರೇರೇಪಣೆ ಪಡೆಯಲಿವೆ. ಜಿ–7ನ ಶ್ರೀಮಂತ ದೇಶಗಳು ಭಾರತದ ಈ ಯತ್ನವನ್ನು ಬೆಂಬಲಿಸಲಿವೆ ಎಂದು ಆಶಿಸುತ್ತೇನೆ. ಶುದ್ಧ ಇಂಧನಕ್ಕೆ ಸಂಬಂಧಿಸಿದ ತಂತ್ರಜ್ಞಾನಗಳಿಗೆ ಬೃಹತ್ ಮಾರುಕಟ್ಟೆ ಭಾರತದಲ್ಲಿ ರೂಪುಗೊಳ್ಳುತ್ತಿದೆ ಎಂದು ಹೇಳಿದರು.

ಪ್ರತಿ ಹೊಸ ತಂತ್ರಜ್ಞಾನ ಇಡೀ ವಿಶ್ವದ ಎಲ್ಲ ರಾಷ್ಟ್ರಗಳ ಕೈಗೆಟುಕುವಂತೆ ಭಾರತವು ರೂಪಿಸಲಿದೆ. ಜಿ–7 ಶೃಂಗದ ಸದಸ್ಯ ರಾಷ್ಟ್ರಗಳು ಈ ವಲಯದ ಸಂಶೋಧನೆ, ಅನ್ವೇಷಣೆ, ಉತ್ಪಾದನಾ ಕ್ಷೇತ್ರದಲ್ಲಿ ಹೂಡಿಕೆ ಮಾಡಬೇಕು ಎಂದು ಆಹ್ವಾನಿಸಿದರು.

**ಮೋದಿ –ಬೈಡನ್ ಭೇಟಿ:** ಜಿ–7 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಆಗಮಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಸದಸ್ಯ ರಾಷ್ಟ್ರಗಳ ವಿವಿಧ ಮುಖಂಡರ ಜೊತೆಗೆ ಚರ್ಚಿಸಿದ್ದರು.

### ₹ 47,052 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಯೋಜನೆ

ಎಲ್ಮೌ, ಜರ್ಮನಿ (ಪಿಟಿಐ): ಭಾರತ ಸೇರಿದಂತೆ ಅಭಿವೃದ್ಧಿಶೀಲ ದೇಶಗಳಲ್ಲಿ ಆಮೂಲಾಗ್ರ ಬದಲಾವಣೆ ತರಬಹುದಾದ ಮೂಲಸೌಕರ್ಯ ಯೋಜನೆಗಳಿಗೆ ₹ 47,052 ಲಕ್ಷ ಕೋಟಿ ಬಂಡವಾಳವನ್ನು 2027ರ ವೇಳೆಗೆ ಹೂಡಿಕೆ ಮಾಡುವ ಯೋಜನೆಯನ್ನು ಅಮೆರಿಕ ಒಳಗೊಂಡಂತೆ ಜಿ–7 ಸದಸ್ಯ ರಾಷ್ಟ್ರಗಳು ಪ್ರಕಟಿಸಿವೆ.

ಚೀನಾದ ಸಂಪರ್ಕ ಮೂಲಸೌಕರ್ಯವನ್ನು ಪರಿಣಾಮಕಾರಿಯಾಗಿ ಎದುರಿಸಲು ಅದರ ಗಡಿಯುದ್ದಕ್ಕೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು ಈ ಯೋಜನೆಯ ಗುರಿ.

ಜಾಗತಿಕ ಮೂಲಸೌಕರ್ಯ ಮತ್ತು ಹೂಡಿಕೆ ಸಹಭಾಗಿತ್ವ ಯೋಜನೆಯನ್ನು ಭಾನುವಾರ ಇಲ್ಲಿ ನಡೆಯುತ್ತಿರುವ ಜಿ–7 ಶೃಂಗಸಭೆಯಲ್ಲಿ ಪ್ರಕಟಿಸಲಾಯಿತು. ಯೋಜನೆಯನ್ನು ಪ್ರಕಟಿಸಿದ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ‘ಈ ಯೋಜನೆಯ ಫಲವು ಎಲ್ಲರಿಗೂ ಸಿಗಲಿದೆ’ ಎಂದು ಬೈಡನ್ ಹೇಳಿದರು.

ಒಟ್ಟುಗೂಡಿ ನಾವೆಲ್ಲರೂ 2027ರವರೆಗೆ ಹೂಡಿಕೆ ಮಾಡಲು ಇಷ್ಟು ಮೊತ್ತವನ್ನು ಕ್ರೋಡೀಕರಿಸಲಿದ್ದೇವೆ. ಇದರಿಂದ ಒಟ್ಟಾಗಿ ಜೀವನಶೈಲಿ ಗುಣಮಟ್ಟ ಉತ್ತಮವಾಗಲಿದೆ ಎಂದರು. ‘ಇದು, ದತ್ತಿ, ದೇಣಿಗೆಯಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದೊಂದು ಹೂಡಿಕೆ. ಅಮೆರಿಕದ ಜನರು ಸೇರಿದಂತೆ ಎಲ್ಲರಿಗೂ ಇದರ ಅನುಕೂಲ ಆಗಲಿದ್ದು, ಆರ್ಥಿಕತೆಯನ್ನು ಉತ್ತಮಪಡಿಸಲಿದೆ’ ಎಂದರು. ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಚೀನಾದ ಬಿಆರ್‌ಐ ಯೋಜನೆ ಹಲವು ದೇಶಗಳನ್ನು ಸಾಲದ ಸುಳಿಗೆ ಸಿಲುಕಿಸಿದೆ ಎಂಬ ಟೀಕೆಗೆ ಗುರಿಯಾಗಿದೆ. ಬಿಆರ್‌ಐಗೆ ಪ್ರತಿಯಾಗಿ ಜಿ–7 ರಾಷ್ಟ್ರಗಳು ಹೊಸ ಯೋಜನೆ ಪ್ರಕಟಿಸಿವೆ ಎನ್ನಲಾಗಿದೆ.

ರಷ್ಯಾಗೆ ಜಿ–7 ರಾಷ್ಟ್ರಗಳ ಮುಖಂಡರ ಆಗ್ರಹ

# ‘ಉಕ್ರೇನ್‌ನಿಂದ ಆಹಾರ ರಫ್ತಿಗೆ ಅವಕಾಶ’

ಎಲ್ಮೌ, ಜರ್ಮನಿ (ಎಎಫ್‌ಪಿ): ಯುದ್ಧದ ಪರಿಣಾಮವಾಗಿ ಆಹಾರ ಕೊರತೆಗೆ ಆಸ್ಪದವಾಗದಂತೆ ಆಹಾರಧಾನ್ಯ ಸಾಗಣೆ ಹಡಗುಗಳು ಉಕ್ರೇನ್‌ನ ಬಂದರಿನಿಂದ ನಿರ್ಗಮಿಸಲು ಅವಕಾಶ ಕಲ್ಪಿಸಬೇಕು ಎಂದು ಜಿ–7 ಶೃಂಗಸಭೆಯ ಸದಸ್ಯ ರಾಷ್ಟ್ರಗಳ ಮುಖಂಡರು ರಷ್ಯಾಗೆ ಒತ್ತಾಯಿಸಿದ್ದಾರೆ.

‘ಈ ಕುರಿತು ಬೇಷರತ್ ಆಗಿ ಕ್ರಮಕೈಗೊಳ್ಳಬೇಕು. ಕಪ್ಪು ಸಮುದ್ರದ ಮೂಲಕ ಉಕ್ರೇನ್‌ನ ಬಂದರಿನಿಂದ ಹಡಗುಗಳು ನಿರ್ಗಮಿಸಲು ಕ್ರಮವಹಿಸಬೇಕು’ ಎಂದು ಹೇಳಿದ್ದಾರೆ. ಈ ಸಂಬಂಧ ಜಂಟಿ ಹೇಳಿಕೆ ನೀಡಿದ್ದಾರೆ.

ಉಕ್ರೇನ್‌ನಿಂದ ಬಲವಂತವಾಗಿ ಕರೆದೊಯ್ಯಲಾಗಿರುವ ಅಲ್ಲಿನ ಪ್ರಜೆಗಳಿಗೆ ತಮ್ಮ ದೇಶಕ್ಕೆ ಮರಳಲು ಅವಕಾಶ ಕಲ್ಪಿಸಬೇಕು ಎಂದು ಜಿ–7 ಶೃಂಗದ ಸದಸ್ಯ ರಾಷ್ಟ್ರಗಳ ಮುಖಂಡರು ರಷ್ಯಾಗೆ ಆಗ್ರಹಪಡಿಸಿದ್ದಾರೆ. ಇಚ್ಛೆಗೆ ವಿರುದ್ಧವಾಗಿ ಬಲವಂತದಿಂದ ಕರೆದೊಯ್ದಿದಿರುವ ಉಕ್ರೇನ್ ಪ್ರಜೆಗಳಿಗೆ ತಕ್ಷಣವೇ ಸುರಕ್ಷಿತವಾಗಿ ಮರಳಲು ಅನುವು ಮಾಡಿಕೊಡಬೇಕು ಎಂದು ನಾಯಕರು ಒತ್ತಾಯಿಸಿದ್ದಾರೆ.

**ಕ್ಷಿಪಣಿ ಪೂರೈಕೆ ಬೇಡ:** ಅಲ್ಲದೆ, ಮುಂದಿನ ದಿನಗಳಲ್ಲಿ ಬೆಲಾರಸ್‌ಗೆ ಅಣುಶಕ್ತಿ ಸಿಡಿತಲೆ ಪ್ರಯೋಗಿಸಬಹುದಾದ ಕ್ಷಿಪಣಿ ಪೂರೈಸಲು ರಷ್ಯಾ ಚಿಂತನೆ ನಡೆಸಿದೆ ಎಂಬ ಬೆಳವಣಿಗೆ ಕುರಿತಂತೆಯೂ ಜಿ–7 ಶೃಂಗದ ನಾಯಕರು ಕಳವಳ ವ್ಯಕ್ತಪಡಿಸಿದ್ದಾರೆ.



ಜರ್ಮನಿಯ ಎಲ್ಮೌನಲ್ಲಿ ನಡೆದ ಜಿ–7 ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೆಲು ಅವರೊಂದಿಗೆ ಚರ್ಚಿಸಿದರು ಅಮೆರಿಕ ಅಧ್ಯಕ್ಷ ಜೋ ಬೈಡನ್ ಇದ್ದಾರೆ. –ಎಎಫ್‌ಪಿ ಚಿತ್ರ

### ಪ್ರಮುಖ ಅಂಶಗಳು

- ಯುದ್ಧ ಬಾಧಿತ ಉಕ್ರೇನ್‌ಗೆ ‘ಎಷ್ಟು ಸಾಧ್ಯವೋ ಅಷ್ಟು ಕಾಲ’ ಬೆಂಬಲವಾಗಿ ನಿಲ್ಲುವ ಸಂಕಲ್ಪವನ್ನು ಜಿ–7 ಸದಸ್ಯ ರಾಷ್ಟ್ರಗಳು ಮಾಡಿವೆ. ಯುದ್ಧ ಮತ್ತು ನಂತರದ ಜಾಗತಿಕ ಆರ್ಥಿಕತೆ ಮೇಲೆ ಚರ್ಚೆ ನಡೆಸಿದವು.
- ಜರ್ಮನಿ, ಅಮೆರಿಕ, ಫ್ರಾನ್ಸ್, ಇಟಲಿ, ಕೆನಡಾ, ಜಪಾನ್ ಮತ್ತು ಬ್ರಿಟನ್ ಜಿ–7 ಶೃಂಗದ ಸದಸ್ಯ ರಾಷ್ಟ್ರಗಳು. ಜೊತೆಗೆ ಈ ಬಾರಿ ಭಾರತ ಹಾಗೂ ಅರ್ಜೆಂಟೀನಾ, ಇಂಡೊನೇಷ್ಯಾ, ಸೆನೆಗಲ್, ದಕ್ಷಿಣ ಆಫ್ರಿಕಾಗಳಿಗೂ ಶೃಂಗಸಭೆಗೆ ಆಹ್ವಾನ ನೀಡಲಾಗಿತ್ತು.
- ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ವಿಡಿಯೊ ಭಾಷಣ ಮಾಡಿದ್ದು, ‘ಉಕ್ರೇನ್‌ಗೆ ಹೆಚ್ಚಿನ ಶಸ್ತ್ರಾಸ್ತ್ರ ಒದಗಿಸಬೇಕು, ರಷ್ಯಾಗೆ ಇನ್ನಷ್ಟು ನಿರ್ಬಂಧ ಹೇರಬೇಕು’ ಎಂದು ಕೋರಿದರು.

## ಭಾರತೀಯ ಮೂಲದ ವ್ಯಕ್ತಿಗೆ ಗುಂಡಿಕ್ಕಿ ಹತ್ಯೆ

ನ್ಯೂಯಾರ್ಕ್ (ಪಿಟಿಐ): ಭಾರತೀಯ ಮೂಲದ ವ್ಯಕ್ತಿಯನ್ನು, ನಿಲ್ಲಿಸಿದ್ದ ವಾಹನದಲ್ಲಿ ಕುಳಿತಿರುವಂತೆಯೇ ಗುಂಡಿಕ್ಕಿ ಹತ್ಯೆಮಾಡಿರುವ ಘಟನೆ ಇಲ್ಲಿ ನಡೆದಿದೆ. ಸತ್ನಾಮ್ ಸಿಂಗ್ ಹತ್ಯೆಗೀಡಾದವರು. ಸೌತ್ ಒಜೋನ್ ಪಾರ್ಕಿಂಗ್ ಸ್ಥಳದಲ್ಲಿ ಕೃತ್ಯ ನಡೆದಿದೆ.

ಪೊಲೀಸರ ಹೇಳಿಕೆ ಆಧರಿಸಿ ನ್ಯೂಯಾರ್ಕ್ ಪೋಸ್ಟ್ ದೈನಿಕ ಈ ಬಗ್ಗೆ ವರದಿ ಮಾಡಿದೆ. ಸ್ನೇಹಿತನ ಜೊತೆಗೂಡಿ ಸಿಂಗ್ ವಾಹನದಲ್ಲಿ ಕುಳಿತಿದ್ದರು. ಆಗ ಕಾರಿನಲ್ಲಿ ಬಂದ ಅಪರಿಚಿತ ಗುಂಡು ಹಾರಿಸಿದ್ದಾನೆ. ಘಟನೆಗೆ ಕಾರಣ ತಿಳಿದುಬಂದಿಲ್ಲ ಎಂದು ತಿಳಿಸಿದ್ದಾರೆ.

## ಗುಂಡಿನ ಚಕಮಕಿ: 6 ಪೊಲೀಸರು ಹುತಾತ್ಮ

ಮೆಕ್ಸಿಕೊ ಸಿಟಿ (ರಾಯಿಟರ್ಸ್): ಗುಂಡಿನ ಚಕಮಕಿಯಲ್ಲಿ ಆರು ಪೊಲೀಸ್ ಅಧಿಕಾರಿಗಳು ಹುತಾತ್ಮರಾಗಿದ್ದು, ಹಲವು ದಾಳಿಕೋರರು ಹತರಾಗಿದ್ದಾರೆ ಎಂದು ಉತ್ತರ ಮೆಕ್ಸಿಕೊದ ನ್ಯೂವೊಲಿಯಾನ್ ರಾಜ್ಯದ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಕೊಲಂಬಿಯಾದ ಗಡಿಯಲ್ಲಿ ಕೃತ್ಯ ನಡೆದಿದ್ದು, ದಾಳಿ ಪೂರ್ವಯೋಜಿತವಾಗಿತ್ತೆಂದು ಅಧಿಕಾರಿಗಳು ತಿಳಿಸಿದ್ದಾರೆ.

# ಬ್ಯಾಡ್ಮಿಂಟನ್: ಪ್ರಶಸ್ತಿ ಮೇಲೆ ಸಿಂಧು, ಪ್ರಣಯ್ ಕಣ್ಣು

ಕ್ವಾಲಾಲಂಪುರ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಮಲೇಷ್ಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಈ ತಿಂಗಳ ಆರಂಭದಲ್ಲಿ ನಡೆದ ಇಂಡೊನೇಷ್ಯಾ ಓಪನ್ ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದ ಸಿಂಧು, ಇಲ್ಲಿ ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು ಅವರಿಗೆ ಈ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಕಠಿಣ ಸವಾಲು ಎದುರಾಗಿದೆ. ಥಾಯ್ಲೆಂಡ್‌ನ ಪಾರ್ನ್‌ಪವೀ ಚೊಚುವಾಂಗ್ ಅವರಿಗೆ ಮುಖಾಮುಖಿಯಾಗಲಿದ್ದಾರೆ. ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಆಟಗಾರ್ತಿಯ ಎದುರು ಎಂಟು ಪಂದ್ಯಗಳಲ್ಲಿ ಸಿಂಧು ಐದು ಬಾರಿ ಗೆದ್ದು, ಮೂರು ಸಲ ಸೋತಿದ್ದಾರೆ. ಅವರ ವಿರುದ್ಧದ ಕಳೆದ ಐದು ಪಂದ್ಯಗಳಲ್ಲಿ ಮೂರು ಬಾರಿ ಸಿಂಧು ನಿರಾಸೆ ಅನುಭವಿಸಿದ್ದಾರೆ.



ಪಿ.ವಿ.ಸಿಂಧು

ಭಾರತದ ಸೈನಾ ನೆಹ್ವಾಲ್ ಕೂಡ ಕಣಕ್ಕಿಳಿಯುತ್ತಿದ್ದು, ಮೊದಲ ಪಂದ್ಯದಲ್ಲಿ ಅಮೆರಿಕದ ಐರಿಸ್ ವಾಂಗ್ ಎದುರು ಸೆಣಸಲಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಪ್ರಣಯ್ ಮಲೇಷ್ಯಾದ ಡರೆನ್ ಲಿವ್ ಎದುರು ಆಡುವರು. ಈ ವಿಭಾಗದಲ್ಲಿ ಬಿ. ಸಾಯಿ ಪ್ರಣೀತ್, ಸಮೀರ್ ವರ್ಮಾ, ಪರುಪಳ್ಳಿ ಕಶ್ಯಪ್ ಕೂಡ ಅದೃಷ್ಟಪರೀಕ್ಷೆಗೆ ಸಜ್ಜಾಗಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಮಿಶ್ರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ– ಬಿ.ಸುಮೀತ್ ರೆಡ್ಡಿ, ವೆಂಕಟ್ ಗೌರವ್ ಪ್ರಸಾದ್– ಜೂಹಿ ದೇವಾಂಗನ್ ಕಣದಲ್ಲಿದ್ದಾರೆ.

## ಟೆಸ್ಟ್: ಮಯಂಕ್‌ಗೆ ಬುಲಾವ್

ನವದೆಹಲಿ (ಪಿಟಿಐ): ಆರಂಭಿಕ ಬ್ಯಾಟರ್, ಕರ್ನಾಟಕದ ಮಯಂಕ್ ಅಗರವಾಲ್ ಅವರನ್ನು ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯಕ್ಕೆ ಭಾರತ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ನಾಯಕ ರೋಹಿತ್ ಶರ್ಮ ಅವರಿಗೆ ಕೋವಿಡ್ ದೃಢಪಟ್ಟಿರುವುದರಿಂದ ಬದಲಿ ಆಟಗಾರನಾಗಿ ಮಯಂಕ್‌ಗೆ ಸ್ಥಾನ ನೀಡಲಾಗಿದೆ.

'ಮಯಂಕ್ ಅವರು ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದ್ದು, ಬರ್ಮಿಂಗ್‌ಹ್ಯಾಂನಲ್ಲಿ ತಂಡವನ್ನು ಸೇರಿಕೊಳ್ಳಲಿದ್ದಾರೆ. ಇಂಗ್ಲೆಂಡ್‌ನ ಕೋವಿಡ್ ಮಾರ್ಗಸೂಚಿಯಂತೆ ಆರ್‌ಟಿಪಿಸಿಆರ್ ನೆಗೆಟಿವ್ ಬಂದರೆ ಕ್ವಾರಂಟೈನ್‌ನಲ್ಲಿರುವ ಅಗತ್ಯವಿಲ್ಲ. ಆದ್ದರಿಂದ ಜುಲೈ 1 ರಂದು ಆರಂಭವಾಗುವ ಟೆಸ್ಟ್‌ನಲ್ಲಿ ಆಡುವ ಅನಿವಾರ್ಯತೆ ಒದಗಿದರೆ ಮಯಂಕ್ ಲಭ್ಯರಿರುತ್ತಾರೆ' ಎಂದು ಬಿಸಿಸಿಐ ಪ್ರಕಟಣೆ ತಿಳಿಸಿದೆ.



ಮಯಂಕ್ ಅಗರವಾಲ್

21 ಟೆಸ್ಟ್‌ಗಳಲ್ಲಿ ಆಡಿರುವ ಮಯಂಕ್, 41.33 ಸರಾಸರಿಯಲ್ಲಿ 1,488 ರನ್ ಗಳಿಸಿದ್ದಾರೆ. ಮಾರ್ಚ್‌ನಲ್ಲಿ ಶ್ರೀಲಂಕಾ ವಿರುದ್ಧ ತವರಿನಲ್ಲಿ ನಡೆದ ಸರಣಿಯಲ್ಲಿ ಅವರು ಕೊನೆಯದಾಗಿ ಆಡಿದ್ದರು. ಕೊನೆಯದಾಗಿ ಆಡಿದ ಎರಡು ಟೆಸ್ಟ್‌ಗಳ ಮೂರು ಇನಿಂಗ್ಸ್‌ಗಳಲ್ಲಿ ಅವರು ಕ್ರಮವಾಗಿ 33, 4 ಹಾಗೂ 22 ರನ್ ಗಳಿಸಿದ್ದರು.

## ಜುಡೊ ಆಟಗಾರರು, ಕೋಚ್ ವಾಪಸ್

ನವದೆಹಲಿ (ಪಿಟಿಐ): ಸ್ಪೇನ್ ಪ್ರವಾಸಕ್ಕೆ ತೆರಳಿದ್ದ ಭಾರತದ ಇಬ್ಬರು ಜುಡೊ ಆಟಗಾರರು ಮತ್ತು ಅವರ ತರಬೇತುದಾರರೊಬ್ಬರನ್ನು, ಅಲ್ಲಿನ ಮಹಿಳಾ ಅಥ್ಲೀಟ್‌ಗಳೊಡನೆ ಜಗಳ ಮಾಡಿಕೊಂಡ ಆರೋಪದ ಮೇಲೆ ವಾಪಸ್ ಕರೆಸಿಕೊಳ್ಳಲಾಗಿದೆ.

'ಮಹಿಳೆಯರ ಗುಂಪಿನೊಂದಿಗೆ ಜೂಡೊ ಆಟಗಾರ ಜಗಳ ಮಾಡಿಕೊಂಡಿದ್ದಾನೆ. ಅಲ್ಲದೆ ಆತ ತಂಗಿದ್ದ ಹೊಟೇಲ್ ಕೋಣೆಯಲ್ಲಿ ಮಹಿಳೆಯೊಬ್ಬರಿದ್ದರು' ಎಂದು ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಕೋಚ್‌ವೊಬ್ಬರು ಹೇಳಿದ್ದಾರೆ. ಆ ಮಹಿಳೆಯರು ಜೂಡೊ ಆಟಗಾರ್ತಿಯರೇ ಎಂಬುದೇ ಸ್ಪಷ್ಟವಾಗಿಲ್ಲ.

'ಮುನ್ನೆಚ್ಚರಿಕಾ ಕ್ರಮವಾಗಿ ಇಬ್ಬರು ಜುಡೊ ಆಟಗಾರರು ಮತ್ತು ಅವರ ಕೋಚ್‌ಅನ್ನು ವಾಪಸ್ ಕರೆಸಿಕೊಳ್ಳಲಾಗಿದೆ' ಎಂದು ಸಾಯ್ ಕೋಚ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

### ಟಿ20 ಕ್ರಿಕೆಟ್: ಐರ್ಲೆಂಡ್ ವಿರುದ್ಧ ಭಾರತಕ್ಕೆ ಏಳು ವಿಕೆಟ್‌ಗಳ ಜಯ

# ಹೂಡಾ ಆಟಕ್ಕೆ ಒಲಿದ ಗೆಲುವು

ಮ್ಯಾಲಹೈಡ್, ಡಬ್ಲಿನ್ (ಪಿಟಿಐ): ನಿರೀಕ್ಷೆಗಿಂತಲೂ ಹೆಚ್ಚಿನ ಪ್ರತಿರೋಧ ಒಡ್ಡಿದ ಐರ್ಲೆಂಡ್ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿದ ಭಾರತ ತಂಡ, ಟಿ20 ಕ್ರಿಕೆಟ್ ಸರಣಿಯಲ್ಲಿ 1–0 ಲ್ಲಿ ಮುನ್ನಡೆ ಸಾಧಿಸಿದೆ.

ಭಾನುವಾರ ಮೊದಲು ಬ್ಯಾಟ್ ಮಾಡಿದ ಐರ್ಲೆಂಡ್ 12 ಓವರ್‌ಗಳಲ್ಲಿ 4 ವಿಕೆಟ್‌ಗೆ 108 ರನ್ ಗಳಿಸಿದರೆ, ಹಾರ್ದಿಕ್ ಪಾಂಡ್ಯ ಬಳಗ 9.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಜಯ ಸಾಧಿಸಿತು. ಮಳೆಯ ಕಾರಣ ಓವರ್‌ಗಳ ಸಂಖ್ಯೆಯನ್ನು 12ಕ್ಕೆ ಇಳಿಸಲಾಗಿತ್ತು.

ದೀಪಕ್ ಹೂಡಾ (47 ರನ್, 29 ಎ., 4X6, 6X2), ಇಶಾನ್ ಕಿಶನ್ (26 ರನ್, 11 ಎ., 4X3, 6X2) ಮತ್ತು ಹಾರ್ದಿಕ್ ಪಾಂಡ್ಯ (24 ರನ್, 12 ಎ., 4X1, 6X3) ಅವರ ಬಿರುಸಿನ ಆಟ ಭಾರತದ ಗೆಲುವಿಗೆ ಕಾರಣವಾಯಿತು.

ಋತುರಾಜ್ ಗಾಯಕ್ವಾಡ್ ಬದಲು ಇಶಾನ್ ಕಿಶನ್ ಜತೆ ಇನಿಂಗ್ಸ್ ಆರಂಭಿಸಿದ ಹೂಡಾ, ತಮಗೆ ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದರು.

ತಂಡದ ಮೊತ್ತ 30 ಆಗಿದ್ದಾಗ ಇಶಾನ್ ಮತ್ತು ಸೂರ್ಯಕುಮಾರ್ ಯಾದವ್ (0) ಅವರು ಬೆನ್ನುಬೆನ್ನಿಗೆ ಔಟಾದರು. ಮೂರನೇ ವಿಕೆಟ್‌ಗೆ 64 ರನ್ ಕಲೆಹಾಕಿದ ಹೂಡಾ ಮತ್ತು ಪಾಂಡ್ಯ ಆತಂಕ ದೂರ ಮಾಡಿದರು.



ದೀಪಕ್ ಹೂಡಾ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

**ಟೆಕ್ಟರ್ ಮಿಂಚು:** ಇದಕ್ಕೂ ಮುನ್ನ ಐರ್ಲೆಂಡ್ ತಂಡ ಹ್ಯಾರಿ ಟೆಕ್ಟರ್ ಅವರ ಬಿರುಸಿನ ಅರ್ಧಶತಕದ (64) ನೆರವಿನಿಂದ ಉತ್ತಮ ಮೊತ್ತ ಪೇರಿಸಿತು. 22 ರನ್ ಗಳಿಸುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡು ಕುಸಿತ ಅನುಭವಿಸಿದ್ದ ತಂಡಕ್ಕೆ ಟೆಕ್ಟರ್ ಮತ್ತು ಲಾರ್ಸನ್ ಟಕರ್ (18) ಆಸರೆಯಾದರು.

ಭಾರತದ ಬೌಲಿಂಗ್ ದಾಳಿಯನ್ನು ದಿಟ್ಟವಾಗಿ ಎದುರಿಸಿದ ಟೆಕ್ಟರ್ 33 ಎಸೆತಗಳಲ್ಲಿ 64 ರನ್ ಗಳಿಸಿದರು. ಆರು ಬೌಂಡರಿ ಮತ್ತು ಮೂರು ಸಿಕ್ಸರ್ ಸಿಡಿಸಿದರು.

**ಉಮ್ರನ್ ಪದಾರ್ಪಣೆ:** ವೇಗದ ಬೌಲರ್ ಉಮ್ರನ್ ಮಲಿಕ್ ಈ ಪಂದ್ಯದ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ಒಂದು ಓವರ್ ಬೌಲ್ ಮಾಡಿದ ಅವರು 14 ರನ್ ಬಿಟ್ಟುಕೊಟ್ಟರು.

**ಮುಖ್ಯಾಂಶಗಳು**

- ಪಾಂಡ್ಯ ಪಡೆಗೆ ಸರಣಿಯಲ್ಲಿ 1–0 ಮುನ್ನಡೆ
- ಮಳೆಯಿಂದಾಗಿ ಪಂದ್ಯವನ್ನು 12 ಓವರ್‌ಗಳಿಗೆ ಇಳಿಸಲಾಗಿತ್ತು
- ಭಾರತದ ಪರಿಣಾಮಕಾರಿ ಬೌಲಿಂಗ್ ದಾಳಿ

**ಎರಡನೇ ಪಂದ್ಯ ಇಂದು:** ಸರಣಿಯ ಎರಡನೇ ಹಾಗೂ ಕೊನೆಯ ಪಂದ್ಯ ಮಂಗಳವಾರ ನಡೆಯಲಿದ್ದು, ಭಾರತ ಗೆಲುವಿನ ಓಟ ಮುಂದುವರಿಸುವ ವಿಶ್ವಾಸದಲ್ಲಿದೆ.

**ಸಂಕ್ಷಿಪ್ತ ಸ್ಕೋರ್:** ಐರ್ಲೆಂಡ್ 4ಕ್ಕೆ 108 (12 ಓವರ್) ಹ್ಯಾರಿ ಟೆಕ್ಟರ್ 64, ಲಾರ್ಸನ್ ಟಕರ್ 18, ಭುವನೇಶ್ವರ್ ಕುಮಾರ್ 16ಕ್ಕೆ 1, ಹಾರ್ದಿಕ್ ಪಾಂಡ್ಯ 26ಕ್ಕೆ 1, ಆವೇಶ್ ಖಾನ್ 22ಕ್ಕೆ 1, ಯಜುವೇಂದ್ರ ಚಾಹಲ್ 11ಕ್ಕೆ 1). ಭಾರತ: 3ಕ್ಕೆ 111 (9.2 ಓವರ್) ದೀಪಕ್ ಹೂಡಾ ಔಟಾಗದೆ 47, ಇಶಾನ್ ಕಿಶನ್ 26, ಹಾರ್ದಿಕ್ ಪಾಂಡ್ಯ 24, ಕ್ರೆಗ್ ಯಂಗ್ 18ಕ್ಕೆ2

**ಫಲಿತಾಂಶ:** ಭಾರತಕ್ಕೆ 7 ವಿಕೆಟ್ ಗೆಲುವು

## ಸುದ್ದಿ 2 ನಿಮಿಷ

### ಕ್ರಿಕೆಟ್‌ಗೆ ವಿದಾಯ; ಏಯಾನ್ ಮಾರ್ಗನ್ ನಿರ್ಧಾರ?

ಲಂಡನ್ (ರಾಯಿಟರ್ಸ್): ವಿಶ್ವಕಪ್ ವಿಜೇತ ಇಂಗ್ಲೆಂಡ್ ಕ್ರಿಕೆಟ್ ತಂಡದ ನಾಯಕ ಏಯಾನ್ ಮಾರ್ಗನ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಲು ನಿರ್ಧರಿಸಿದ್ದಾರೆ ಎಂದು ಬ್ರಿಟನ್ ಮಾಧ್ಯಮಗಳು ವರದಿ ಮಾಡಿವೆ.

ಏಕದಿನ ಮತ್ತು ಟಿ20 ಸೇರಿ 300ಕ್ಕೂ ಹೆಚ್ಚು ಪಂದ್ಯಗಳನ್ನು ಆಡಿರುವ ಮಾರ್ಗನ್, ನಿವೃತ್ತಿ ಕುರಿತು ಮಂಗಳವಾರ ಪ್ರಕಟಿಸುವ ಸಾಧ್ಯತೆಯಿದೆ ಎಂದು ಮಾಧ್ಯಮಗಳು ಹೇಳಿವೆ.

2019ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಇಂಗ್ಲೆಂಡ್‌ಅನ್ನು ಚಾಂಪಿಯನ್ ಆಗಿಸಿದ್ದ ಮಾರ್ಗನ್, 126 ಏಕದಿನ ಮತ್ತು 72 ಟಿ20 ಪಂದ್ಯಗಳಲ್ಲಿ ತಂಡದ ಸಾರಥ್ಯ ವಹಿಸಿದ್ದಾರೆ. ನಾಯಕನಾಗಿ ಎರಡೂ ಮಾದರಿಗಳು ಸೇರಿ 118 ಪಂದ್ಯಗಳಲ್ಲಿ ತಂಡವನ್ನು ಗೆಲುವಿನ ದಡ ಸೇರಿಸಿದ್ದು ದಾಖಲೆಯಾಗಿದೆ.

2006ರಲ್ಲಿ ಪದಾರ್ಪಣೆ ಮಾಡಿದ್ದ 35 ವರ್ಷದ ಮಾರ್ಗನ್, ಒಟ್ಟು 245 ಏಕದಿನ ಮತ್ತು 115 ಪಂದ್ಯಗಳಲ್ಲಿ ಇಂಗ್ಲೆಂಡ್‌ಅನ್ನು ಪ್ರತಿನಿಧಿಸಿದ್ದಾರೆ. ಒಟ್ಟು 10,159 ರನ್ ಗಳಿಸಿದ್ದಾರೆ. 16 ಟೆಸ್ಟ್‌ಗಳಿಂದ 700 ರನ್ ಕಲೆಹಾಕಿದ್ದಾರೆ.

ಮಾರ್ಗನ್ ಅವರಿಗೆ ಕಳೆದ ಕೆಲವು ದಿನಗಳಿಂದ ಫಿಟ್‌ನೆಸ್ ಸಂಬಂಧಿತ ಸಮಸ್ಯೆಗಳು ಕಾಡುತ್ತಿವೆ.

ಸದ್ಯ ಉಪನಾಯಕ ಆಗಿರುವ ಜೋಸ್ ಬಟ್ಲರ್ ಅವರು ತಂಡದ ನಾಯಕತ್ವದ ಹೊಣೆ ಹೊರುವ ಸಾಧ್ಯತೆಯಿದೆ.



## ಅಥ್ಲೆಟಿಕ್ಸ್: ಮಿಂಚಿದ ಧನಲಕ್ಷ್ಮಿ

ಅಲ್ಮಾಟಿ, ಕಜಕಸ್ತಾನ (ಪಿಟಿಐ): ಭಾರತದ ಎಸ್. ಧನಲಕ್ಷ್ಮಿ ಅವರು ಇಲ್ಲಿ ನಡೆಯುತ್ತಿರುವ ಕೊಸನೊವ್ ಮೆಮೊರಿಯಲ್ ಅಥ್ಲೆಟಿಕ್ಸ್ ಕೂಟದ 200 ಮೀಟರ್ಸ್ ವಿಭಾಗದಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಚಿನ್ನದ ಪದಕ ಗೆದ್ದರು.

ಧನಲಕ್ಷ್ಮಿ 22.89 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಕಳೆದ ವರ್ಷ ಅವರು ಕೂಟವೊಂದರಲ್ಲಿ 23.14 ಸೆಕೆಂಡುಗಳ ಸಮಯ ದಾಖಲಿಸಿದ್ದರು.

ಇಲ್ಲಿ ಪದಕ ಜಯಿಸುವುದರೊಂದಿಗೆ 200 ಮೀ. ಓಟವನ್ನು 23 ಸೆಕೆಂಡುಗಳೊಳಗೆ ಮುಗಿಸಿದ ಭಾರತದ ಮೂರನೇ ಮಹಿಳೆ ಎನಿಸಿಕೊಂಡರು. ಈ ಹಿಂದೆ ಸರಸ್ವತಿ ಸಹಾ (22.82 ಸೆ.) ಮತ್ತು ಹಿಮಾ ದಾಸ್ (22.88 ಸೆ.) ಧನಲಕ್ಷ್ಮಿ ಅವರಿಗಿಂತ ಶ್ರೇಷ್ಠ ಸಮಯ ದಾಖಲಿಸಿದವರು.

## ಕ್ರಿಕೆಟ್: ಇಂಗ್ಲೆಂಡ್ ಕ್ಲೀನ್‌ಸ್ವೀಪ್ ಸಾಧನೆ

ಲೀಡ್ಸ್ (ಎಎಫ್‌ಪಿ): ನ್ಯೂಜಿಲೆಂಡ್ ಎದುರಿನ ಅಂತಿಮ ಟೆಸ್ಟ್‌ನಲ್ಲಿ ಏಳು ವಿಕೆಟ್‌ಗಳ ಜಯ ಸಾಧಿಸಿದ ಇಂಗ್ಲೆಂಡ್, ಮೂರು ಪಂದ್ಯಗಳ ಸರಣಿಯಲ್ಲಿ 'ಕ್ಲೀನ್‌ಸ್ವೀಪ್' ಸಾಧನೆ ಮಾಡಿತು.

ಗೆಲುವಿಗೆ 296 ರನ್‌ಗಳ ಗುರಿ ಪಡೆದಿದ್ದ ಇಂಗ್ಲೆಂಡ್ ಕೊನೆಯ ದಿನವಾದ ಸೋಮವಾರ 54.2 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು.

ಇಂಗ್ಲೆಂಡ್ 2ಕ್ಕೆ 183 ರನ್‌ಗಳಿಂದ ದಿನದಾಟ ಆರಂಭಿಸಿತು. ಗೆಲ್ಲಲು ಇನ್ನೂ 113 ರನ್‌ಗಳು ಬೇಕಿದ್ದವು. ಮಳೆಯ ಕಾರಣ ಮೊದಲ ಅವಧಿಯ ಆಟ ನಡೆಯಲಿಲ್ಲ. ಎರಡನೇ ಅವಧಿಯಲ್ಲಿ ಕೇವಲ 15.2 ಓವರ್‌ಗಳನ್ನು ಆಡಿ ಜಯ ಸಾಧಿಸಿತು.



ಜಾಕ್ ಲೀಚ್

ಜೋ ರೂಟ್ (ಅಜೇಯ 86) ಮತ್ತು ಟಿ20 ಶೈಲಿಯಲ್ಲಿ ಬ್ಯಾಟ್ ಬೀಸಿದ ಜಾನಿ ಬೈಸ್ಟೋ (ಅಜೇಯ 71, 44 ಎ., 4X8, 6X3) ಆತಿಥೇಯ ತಂಡವನ್ನು ಬೇಗನೇ ಗೆಲುವಿನತ್ತ ಕೊಂಡೊಯ್ದರು.

30 ಎಸೆತಗಳಲ್ಲಿ 50 ರನ್ ಪೂರೈಸಿದ ಬೈಸ್ಟೋ, ಇಂಗ್ಲೆಂಡ್ ಪರ ಟೆಸ್ಟ್‌ನಲ್ಲಿ ಎರಡನೇ ಅತಿವೇಗದ ಅರ್ಧಶತಕ ಗಳಿಸಿದ ಸಾಧನೆ ಮಾಡಿದರು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 117.3 ಓವರ್‌ಗಳಲ್ಲಿ 329; ಇಂಗ್ಲೆಂಡ್: 67 ಓವರ್‌ಗಳಲ್ಲಿ 360. ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 105.2 ಓವರ್‌ಗಳಲ್ಲಿ 326; ಇಂಗ್ಲೆಂಡ್ 54.2 ಓವರ್‌ಗಳಲ್ಲಿ 3ಕ್ಕೆ 296 (ಒಲಿ ಪೋಪ್ 82, ಜೋ ರೂಟ್ ಔಟಾಗದೆ 86, ಜಾನಿ ಬೈಸ್ಟೋ ಔಟಾಗದೆ 71, ಟಿಮ್ ಸೌಥಿ 68ಕ್ಕೆ 1).ಫಲಿತಾಂಶ: ಇಂಗ್ಲೆಂಡ್‌ಗೆ 7 ವಿಕೆಟ್ ಗೆಲುವು; 3–0 ರಲ್ಲಿ ಸರಣಿ ಜಯ

ಪಂದ್ಯಶ್ರೇಷ್ಠ: ಜಾಕ್ ಲೀಚ್

**ಸರಣಿ ಶ್ರೇಷ್ಠ:** ಜೋ ರೂಟ್ (ಇಂಗ್ಲೆಂಡ್), ಡೆರಿಲ್ ಮಿಚೆಲ್ (ನ್ಯೂಜಿಲೆಂಡ್)




ಪ್ರಶಸ್ತಿ ವಿಜೇತ ಕರ್ನಾಟಕ ಬಾಲಕರ ತಂಡ

## ಇಂಗ್ಲೆಂಡ್ 'ಫೇವರಿಟ್': ಸ್ವಾನ್

ಬೆಂಗಳೂರು: 'ಭಾರತ ವಿರುದ್ಧದ ಕೊನೆಯ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ತಂಡವೇ ಗೆಲ್ಲುವ ಫೇವರಿಟ್' ಎಂದು ಇಂಗ್ಲೆಂಡ್‌ನ ಮಾಜಿ ಸ್ಪಿನ್ನರ್ ಗ್ರೇಮ್ ಸ್ವಾನ್ ಅಭಿಪ್ರಾಯಪಟ್ಟರು.

ಸೋನಿ ಸ್ಪೋರ್ಟ್ಸ್ ಸೋಮವಾರ ಆಯೋಜಿಸಿದ್ದ ವರ್ಚುವಲ್ ಸಂವಾದದಲ್ಲಿ ಮಾತನಾಡಿದ ಅವರು, 'ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಆಡಿರುವುದು ಇಂಗ್ಲೆಂಡ್‌ಗೆ ಸಕಾರಾತ್ಮಕ ಅಂಶವಾಗಿ ಪರಿಣಮಿಸಲಿದೆ. ಭಾರತ ತಂಡಕ್ಕೆ ಒಂದು ಅಭ್ಯಾಸ ಪಂದ್ಯ ಆಡಲು ಮಾತ್ರ ಅವಕಾಶ ದೊರೆತಿದೆ. ಅವರಿಗೆ ಇಂಗ್ಲೆಂಡ್‌ನ ಪರಿಸ್ಥಿತಿಗೆ ಹೊಂದಿಕೊಳ್ಳಲು ಕಷ್ಟವಾಗಬಹುದು' ಎಂದರು.

'ಕೌಂಟಿಯಲ್ಲಿ ಉತ್ತಮವಾಗಿ ಆಡಿರುವ ಚೇತೇಶ್ವರ ಪೂಜಾರ ಭಾರತದ ಬ್ಯಾಟಿಂಗ್ ವಿಭಾಗಕ್ಕೆ ಬಲ ತುಂಬಲಿದ್ದಾರೆ. ಈ ಋತುವಿನ ಆರಂಭದಿಂದಲೇ ಇಂಗ್ಲೆಂಡ್‌ನಲ್ಲಿರುವ ಅವರು ಇಲ್ಲಿನ ಪರಿಸ್ಥಿತಿಗೆ ಹೊಂದಿಕೊಂಡಿದ್ದಾರೆ' ಎಂದು ಹೇಳಿದರು.

'ಭಾರತ ತಂಡ ಸ್ಪಿನ್ ವಿಭಾಗದಲ್ಲಿ ಆರ್.ಅಶ್ವಿನ್ ಅವರನ್ನು ಕಣಕ್ಕಿಳಿಸಬೇಕು ಎಂಬುದು ನನ್ನ ಅಭಿಪ್ರಾಯ. ಇಂಗ್ಲೆಂಡ್‌ನ ಪಿಚ್‌ಗಳಲ್ಲಿ ರವೀಂದ್ರ ಜಡೇಜ ಅವರಿಗಿಂತಲೂ ಅಶ್ವಿನ್ ಪರಿಣಾಮಕಾರಿಯಾಗಬಲ್ಲರು' ಎಂದರು.

## ಫುಟ್‌ಬಾಲ್: ಸೆಮಿಗೆ ಗ್ರೀನ್‌ವುಡ್ ಲಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಸೇಂಟ್ ಜೋಸೆಫ್ ಬಾಲಕರ ಹೈಸ್ಕೂಲ್ ಮತ್ತು ಗ್ರೀನ್‌ವುಡ್ (ಬನ್ನೇರುಘಟ್ಟ) ತಂಡಗಳು ಸುಬ್ರತೊ ಕಪ್ ವಲಯಮಟ್ಟದ ಅರ್ಹತಾ ಟೂರ್ನಿಯ ಸೆಮಿಫೈನಲ್ ತಲುಪಿದವು.

ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಸಹಯೋಗದಲ್ಲಿ ಸೇಂಟ್ ಜೋಸೆಫ್ ಹೈಸ್ಕೂಲ್ ಆಯೋಜಿಸಿರುವ ಟೂರ್ನಿಯ ಮೊದಲ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಮವಾರ ಸೇಂಟ್ ಜೋಸೆಫ್ ಪೆನಾಲ್ಟಿ ಶೂಟೌಟ್‌ನಲ್ಲಿ 4–2ರಿಂದ ಬಾಲ್ಡ್‌ವಿನ್ ಬಾಯ್ಸ್ ತಂಡಕ್ಕೆ ಸೋಲುಣಿಸಿತು.

ಎಂಟರಘಟ್ಟದ ಎರಡನೇ ಹಣಾಹಣಿಯಲ್ಲಿ ಗ್ರೀನ್‌ವುಡ್(ಬನ್ನೇರುಘಟ್ಟ) ತಂಡವು 4–1ರಿಂದ ವಿಬ್‌ಗಯಾರ್ ಹೈಸ್ಕೂಲ್ ತಂಡವನ್ನು ಪರಾಭವಗೊಳಿಸಿತು. ಕ್ವಾರ್ಟರ್‌ಫೈನಲ್‌ನ ಮತ್ತೊಂದು ಸೆಣಸಾಟದಲ್ಲಿ ಬಿಷಪ್ ಕಾಟನ್ ಬಾಯ್ಸ್4–1ರಿಂದ ನ್ಯೂ ಶಮ್ಸ್ ಸ್ಕೂಲ್ (ಭಟ್ಕಳ) ಎದುರು ಗೆದ್ದಿತು. ಇನ್ನೊಂದು ಪಂದ್ಯದಲ್ಲಿ ಗ್ರೀನ್‌ವುಡ್ (ಸರ್ಜಾಪುರ) ತಂಡವು 3–1ರಿಂದ ಅಂಬರ್ ವ್ಯಾಲಿ ವಿರುದ್ಧ ಜಯ ಸಾಧಿಸಿದವು.



ಬಿಷಪ್ ಕಾಟನ್ ಬಾಯ್ಸ್ ತಂಡದ ಪ್ರಣವ್ ಜೈನ್ (ಎಡ) ಮತ್ತು ನ್ಯೂ ಶಮ್ಸ್ ತಂಡದ ಶಕೀಬ್ ಅನ್ಸಾರಿ– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

## ದಾಡ್ಜ್‌ಬಾಲ್: ಕರ್ನಾಟಕ ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕ ಮತ್ತು ಬಾಲಕಿಯರ ತಂಡಗಳು ರಾಷ್ಟ್ರೀಯ ಜೂನಿಯರ್ ದಾಡ್ಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದವು.

ಕೋರಮಂಗಲದ ಸೇಂಟ್ ಜೋಸೆಫ್ ಕಾಲೇಜು ಅಂಗಣದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಬಾಲಕರ ಫೈನಲ್‌ನಲ್ಲಿ ಕರ್ನಾಟಕದ ಆಟಗಾರರು ಆಂಧ್ರಪ್ರದೇಶವನ್ನು ಹಿಂದಿಕ್ಕಿದರು. ತಮಿಳುನಾಡು ಮತ್ತು ಮಹಾರಾಷ್ಟ್ರ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಗಳಿಸಿದವು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಕರ್ನಾಟಕ ತಂಡವು ಮಹಾರಾಷ್ಟ್ರ ತಂಡಕ್ಕೆ ಸೋಲುಣಿಸಿತು. ತಮಿಳುನಾಡು ಮೂರು ಮತ್ತು ರಾಜಸ್ಥಾನ ನಾಲ್ಕನೇ ಸ್ಥಾನ ಗಳಿಸಿದವು.

ಇದೇ ವೇಳೆ ನಡೆದ ಕರ್ನಾಟಕ ರಾಜ್ಯ ಅಸೋಸಿಯೇಷನ್ ಕಪ್ ಟೂರ್ನಿಯ ಬಾಲಕರ ವಿಭಾಗದಲ್ಲಿ ಶಿವಮೊಗ್ಗ ಮತ್ತು ಬಾಲಕಿಯರ ವಿಭಾಗದಲ್ಲಿ ತುಮಕೂರು ಅಗ್ರಸ್ಥಾನ ಗಳಿಸಿದವು.

## ಚೆನ್ನೈಗೆ ಡಿಯಾನ್

ಭುವನೇಶ್ವರ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಚೆನ್ನೈಯಿನ್ ಎಫ್‌ಸಿ, ಸೆನೆಗಲ್ ದೇಶದ ಫಾಲೊವ್ ಡಿಯಾನ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಡಿಫೆನ್ಸ್ ಆಟಗಾರ ಡಿಯಾನ್ ಅವರು ಈ ಹಿಂದೆ ಅಲ್ಬೇ ನಿಯಾ ಕ್ಲಬ್, ಕೆಎಫ್ ವಿಲ್ಲಾಂ ಜಿಯಾ ಪರ ಆಡಿದ್ದರು.

## ಕ್ರಿಕೆಟ್: ಸಿದ್ಧಾರ್ಥ್ ಶತಕದ ಸೊಬಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎ. ಸಿದ್ಧಾರ್ಥ್ ಗಳಿಸಿದ ಸೊಗಸಾದ ಶತಕದ ಬಲದಿಂದ ವಿಶ್ವೇಶ್ವರಪುರಂ ಕ್ರಿಕೆಟ್ ಕ್ಲಬ್ (2) ತಂಡವು ಗೆದ್ದಿತು. ಕೆಎಸ್‌ಸಿಎ ಗುಂಪು 1ರಿಂದ ಮೂರನೇ ಡಿವಿಷನ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಎಂಟು ವಿಕೆಟ್‌ಗಳಿಂದ ಮಲ್ಲೇಶ್ವರಂ ಜಿಮ್‌ಖಾನ ತಂಡವನ್ನು ಸೋಲಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಮಲ್ಲೇಶ್ವರಂ ತಂಡವನ್ನು ವಿಶ್ವೇಶ್ವರಪುರಂ 47.4 ಓವರ್‌ಗಳಲ್ಲಿ 230 ರನ್‌ಗಳಿಗೆ ನಿಯಂತ್ರಿಸಿತು. ಸವಾಲಿನ ಗುರಿಯನ್ನು ಕೇವಲ 28.1 ಓವರ್‌ನಲ್ಲಿ ತಲುಪಿತು. 70 ಎಸೆತಗಳನ್ನು ಎದುರಿಸಿದ ಸಿದ್ಧಾರ್ಥ್ ಔಟಾಗದೆ 110 ರನ್ ಸಿಡಿಸಿದರು. ಅದರಲ್ಲಿ 10 ಬೌಂಡರಿ, ಎಂಟು ಸಿಕ್ಸರ್ ಸೇರಿದ್ದವು.

**ಸಂಕ್ಷಿಪ್ತ ಸ್ಕೋರು:** ಮಲ್ಲೇಶ್ವರಂ ಜಿಮ್‌ಖಾನ: 47.4 ಓವರ್‌ಗಳಲ್ಲಿ 230 (ಹರ್ಷಿತ್ ಪೂಜಾರಿ 57, ನಿಶ್ಚಲ್ ದಾಸ್ 59; ಸುನೀಲ್ ಕಶ್ಯಪ್ 37ಕ್ಕೆ 3, ಅಧೋಕ್ಷಜ್ 44ಕ್ಕೆ 4). ವಿಶ್ವೇಶ್ವರಪುರಂ ಕ್ರಿಕೆಟ್ ಕ್ಲಬ್ (2): 28.1 ಓವರ್‌ಗಳಲ್ಲಿ 2ಕ್ಕೆ 232 (ಪ್ರದೀಪ್ 50, ಸಿದ್ಧಾರ್ಥ್ ಔಟಾಗದೆ 110, ಶಿಶಿರ್ ಆರ್. ಔಟಾಗದೆ 57). **ಫಲಿತಾಂಶ:** ವಿಸಿಸಿ (2) ತಂಡಕ್ಕೆ 8 ವಿಕೆಟ್‌ಗಳ ಜಯ.

ನೆಪ್ಚೂನ್ ಸಿಸಿ: 50 ಓವರ್‌ಗಳಲ್ಲಿ 5ಕ್ಕೆ 324 (ರಯಾನ್ ಅಹಮ್ಮದ್ 104, ವಿಷ್ಣುಪ್ರಸಾದ್ ಜಿ. 87, ಸುನೀಲ್ ರಾಜು 62; ಪೂರನ್ ಎಚ್. ಎಂ. 41ಕ್ಕೆ2, ವಿಶ್ವನಾಥ್ ಎಚ್.ಕೆ. 78ಕ್ಕೆ 2). ಆರ್. ವಿ. ಇಂಜಿನಿಯರಿಂಗ್ ಕಾಲೇಜು: 42 ಓವರ್‌ಗಳಲ್ಲಿ 262 (ಲಿಖಿತ್ ಜಿ.ಪಿ 68, ವಿಶ್ವನಾಥ್ ಎಚ್.ಕೆ. 69; ಸಯ್ಯದ್ ತಕ್ವೀರ್ ಅಹಮ್ಮದ್ 64ಕ್ಕೆ 2, ಸುನೀಲ್ ರಾಜು 40ಕ್ಕೆ 3, ಪ್ರೀತಂ ಪಿ. 41ಕ್ಕೆ 2).

**ಫಲಿತಾಂಶ:** ನೆಪ್ಚೂನ್ ಸಿಸಿಗೆ 11 ರನ್‌ಗಳ ಜಯ. (ಮಳೆಯ ಕಾರಣ ಪಂದ್ಯಕ್ಕೆ ಅಡಚಣೆಯಾಗಿತ್ತು. ಆರ್. ವಿ. ಇಂಜಿನಿಯರಿಂಗ್ ತಂಡಕ್ಕೆ 42 ಓವರ್‌ಗಳಲ್ಲಿ 273 ರನ್‌ಗಳ ಪರಿಷ್ಕೃತ ಗುರಿ ನೀಡಲಾಗಿತ್ತು.